# ಮಕ್ಕಬಿಯರ ಎರಡನೇ ಗ್ರಂಥ

## ಮುನ್ನುಡಿ

ಸಿರೇನಿನ ಜಾಸೋನ್ ಎಂಬವನು ರಚಿಸಿದ ಐದು ಸಂಪುಟಗಳುಳ್ಳ ಚರಿತ್ರೆಯ ಸಾರಾಂಶವೇ ಮಕ್ಕಬಿಯರ ಎರಡನೇ ಗ್ರಂಥ. ಮೂರನೇ ಪ್ರಧಾನಯಾಜಕ ಓನೀಯನ ಕಾಲದಿಂದ ನಿಕನೋರನ ಮರಣದವರೆಗೆ, ಕ್ರಿ.ಪೂ. 180ರಿಂದ ಕ್ರಿ.ಪೂ. 161ರವರೆಗೆ, ಯೆಹೂದ್ಯರ ಚರಿತ್ರೆಯಲ್ಲಿನ ಮುಖ್ಯ ಘಟನೆಗಳನ್ನು ಈ ಗ್ರಂಥ ವರದಿ ಮಾಡುತ್ತದೆ. ಮಕ್ಕಬಿಯರ ಒಂದನೇ ಗ್ರಂಥದಲ್ಲಿರುವ ಸಮಾನಾಂತರ ಘಟನೆಗಳನ್ನು ಸಹ ಸ್ವಲ್ಪಮಟ್ಟಿಗೆ ಇದರಲ್ಲಿ ಕಾಣಬಹುದು. ಇದನ್ನು ಆ ಒಂದನೇ ಗ್ರಂಥದ ಮುಂದುವರೆದ ಭಾಗವೆಂದು ಕರೆಯಲಾಗದು.

ಧರ್ಮಶಾಸ್ತ್ರಕ್ಕೆ ಪ್ರಾಮಾಣಿಕತೆ ಹಾಗು ಧರ್ಮಕ್ಕಾಗಿ ಪ್ರಾಣತ್ಯಾಗ ಮಾಡಿದವರಿಗೆ ದೇವರು ನೀಡುವ ಸಂಭಾವನೆ ಇವು ಈ ಗ್ರಂಥದ ಮುಖ್ಯಾಂಶಗಳು.

## ಪರಿವಿಡಿ


| | | | | |
|---|---|---|---|---|
| (ಅ) ಈಜಿಪ್ಟಿನಲ್ಲಿದ್ದ ಯೆಹೂದ್ಯರಿಗೆ ಬರೆದ ಪತ್ರಗಳು ಹಾಗು ಪ್ರಸ್ತಾವನೆ | – | 1.1 | – | 2.32 |
| (ಆ) ಪ್ರಧಾನಯಾಜಕತ್ವಕ್ಕಾಗಿ ಹೋರಾಟ | – | 3.1 | – | 4.50 |
| (ಇ) ಅಂತಿಯೋಕ ಎಪಿಫನೆಸನು ಮತ್ತು ಯೆಹೂದ್ಯರಿಗಾದ ಚಿತ್ರಹಿಂಸೆ | – | 5.1 | – | 7.42 |
| (ಈ) ಯೂದನ ವಿಜಯಯಾತ್ರೆಗಳು | – | 8.1 | – | 15.90 |


### ಈಜಿಪ್ಟಿನಲ್ಲಿದ್ದ ಯೆಹೂದ್ಯರಿಗೆ ಪತ್ರ

**1** "ಜೆರುಸಲೇಮ್ ಮತ್ತು ಜುದೇಯ ಪ್ರಾಂತ್ಯದ ಯೆಹೂದ್ಯ ಸಹೋದರರಿಂದ ಈಜಿಪ್ಟಿನಲ್ಲಿರುವ
ಯೆಹೂದ್ಯ ಬಾಂಧವರಿಗೆ ಶುಭಾಶಯ ಹಾಗೂ ದೀರ್ಘಶಾಂತಿ!
2 "ದೇವರು ನಿಮಗೆ ಒಳಿತನ್ನು ಮಾಡಲಿ; ತಮ್ಮ ಪ್ರಾಮಾಣಿಕ ದಾಸರಾದ ಅಬ್ರಹಾಮ್, ಇಸಾಕ್
ಮತ್ತು ಯಕೋಬರೊಂದಿಗೆ ದೇವರು ಮಾಡಿದ ಒಡಂಬಡಿಕೆಯನ್ನು ನೀವು ನೆನಪಿಗೆ ತಂದುಕೊಳ್ಳಿರಿ. 3ಅದೇ
ದೇವರು ತಮಗೆ ಆರಾಧನೆ ಸಲ್ಲಿಸಲು ಹಾಗು ಪೂರ್ಣ ಮನಸ್ಸಿನಿಂದ ಮತ್ತು ಸದ್ಭಾವನೆಯಿಂದ ಅವರ
ಚಿತ್ತವನ್ನು ನೆರವೇರಿಸಲು ಸುಮನಸ್ಸನ್ನು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ದಯಪಾಲಿಸಲಿ. 4ಅವರ
ಧರ್ಮಶಾಸ್ತ್ರದ ನಿಯಮಗಳನ್ನು ಪ್ರಾಮಾಣಿಕವಾಗಿ ಅನುಸರಿಸಲು ನಿಮ್ಮ ಹೃದಯವನ್ನು ತೆರೆಯಲಿ. ನಿಮಗೆ
ಶಾಂತಿ ಸಮಾಧಾನವನ್ನು ದಯಪಾಲಿಸಲಿ. 5ಅವರು ನಿಮ್ಮ ಪ್ರಾರ್ಥನೆಗಳಿಗೆ ಕಿವಿಗೊಟ್ಟು ಪಾಪಕ್ಷಮೆ ನೀಡಲಿ.
ಕಷ್ಟಕಾಲದಲ್ಲಿ ನಿಮ್ಮನ್ನು ಕೈಬಿಡದೆ ಕಾಪಾಡಲಿ! 6ಈ ಉದ್ದೇಶದಿಂದ ನಾವು ನಿಮಗೋಸ್ಕರ ಪ್ರಾರ್ಥನೆ
ಮಾಡುತ್ತಿದ್ದೇವೆ.
7 "169ನೇ ವರ್ಷದಲ್ಲಿ ಎರಡನೇ ದೆಮೆತ್ರಿಯನು ಸಿರಿಯಾದ ಅರಸನಾಗಿದ್ದಾಗ, ನಾವು
ನಿಮಗೊಂದು ಪತ್ರ ಕಳುಹಿಸಿದೆವು. ಪವಿತ್ರ ನಾಡಿನಲ್ಲಿ, ಯಾಸೋನನು ಅಧಿಕಾರಿಗಳ ವಿರುದ್ಧ ದಂಗೆಯೆದ್ದು,
ರಾಜ್ಯವನ್ನು ಬಿಟ್ಟು ತೆರಳಿದ ನಂತರ ನಮಗುಂಟಾದ ಚಿತ್ರಹಿಂಸೆಯ ಹಾಗು ಬಿಕ್ಕಟ್ಟಿನ ಪರಿಸ್ಥಿತಿಯ ಬಗ್ಗೆ

ನಿಮಗೆ ಆ ಪತ್ರದಲ್ಲಿ ವಿವರಿಸಿದೆವು. 8ಯಾಸೋನ್ ಮತ್ತು ಅವನ ಸಂಗಡಿಗರು ದೇವಾಲಯದ ಬಾಗಿಲುಗಳಿಗೆ ಬೆಂಕಿಯಿಟ್ಟರು. ನಿರಪರಾಧಿಗಳನ್ನು ಹತಮಾಡಿದರು. ಆಗ ನಾವು ದೇವರಲ್ಲಿ ಮೊರೆಯಿಟ್ಟೆವು; ಅವರು ನಮ್ಮ ಪ್ರಾರ್ಥನೆಗೆ ಕಿವಿಗೊಟ್ಟರು. ನಾವು ಬಲಿಯನ್ನೂ ಧಾನ್ಯನೈವೇದ್ಯಗಳನ್ನೂ ದೇವರಿಗೆ ಅರ್ಪಿಸಿದೆವು. ಮಹಾದೇವಾಲಯದಲ್ಲಿ ದೀಪಗಳನ್ನು ಉರಿಸಿ, ರೊಟ್ಟಿಯನ್ನು ವೇದಿಕೆಯಲ್ಲಿ ಇರಿಸಿದೆವು. 9ಆದುದರಿಂದ, ನಮ್ಮ ಪರ್ಣ ಕುಟೀರಗಳ ಹಬ್ಬದಂತೆ ನೀವು ಸಹ ಕಿಸ್ಲೇವ್ ತಿಂಗಳಲ್ಲಿ ಹಬ್ಬವನ್ನು ಆಚರಿಸಬೇಕೆಂದು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಈ ಪತ್ರವನ್ನು 188ನೇ ವರ್ಷದಲ್ಲಿ ಬರೆಯಲಾಗಿದೆ.”

**ಅರಿಸ್ಟೋಬುಲನಿಗೆ ಪತ್ರ**

(ಅರಸ ಅಂತಿಯೋಕನ ಮರಣ)

10 “ಜೆರುಸಲೇಮ್ ಮತ್ತು ಜುದೇಯದಲ್ಲಿ ಇರುವ ಯೆಹೂದ್ಯರಿಂದ, ಯೆಹೂದ್ಯ ಶಾಸಕ ಸಭೆಯಿಂದ ಹಾಗು ಯೂದ ಮಕ್ಕಬಿಯನಿಂದ ಅಭಿಷಿಕ್ತ ಯಾಜಕರ ವಂಶಕ್ಕೆ ಸೇರಿದವನು ಹಾಗೂ ಅರಸ ಪ್ಟೊಲೆಮೇಯನ ಗುರುವು ಆದ ಅರಿಸ್ಟೋಬುಲನಿಗೆ: ಅಂತೆಯೇ ಈಜಿಪ್ಟಿನಲ್ಲಿ ಇರುವ ಯೆಹೂದ್ಯ ಬಾಂಧವರಿಗೆ ಶುಭಾಶಯ ಹಾಗು ಯೋಗಕ್ಷೇಮವನ್ನು ಕೋರುತ್ತೇವೆ.

11 “ನಾವು ದೇವರಿಗೆ ವಂದನೆಗಳನ್ನು ಸಲ್ಲಿಸುತ್ತೇವೆ. ಅವರು ನಮಗೆ ಸಕಾಲದಲ್ಲಿ ನೆರವಿತ್ತು ಘೋರ ಆಪತ್ತಿನಿಂದ ನಮ್ಮನ್ನು ಪಾರುಮಾಡಿದ್ದಾರೆ. ಇಷ್ಟು ದೊಡ್ಡ ಅರಸನಿಗೆ ಎದುರಾಗಿ ನಿಂತು ಯುದ್ಧಮಾಡಲು ನಮಗೆ ಧೈರ್ಯವನ್ನು ನೀಡಿದ್ದಾರೆ. 12ದೇವರೇ ಆ ಶತ್ರುವನ್ನು ಪವಿತ್ರ ನಗರದಿಂದ ಹೊರಕ್ಕಟ್ಟಿದರು. 13ಅರಸ ಅಂತಿಯೋಕನು ಪರ್ಷಿಯಾ ನಾಡನ್ನು ಸೇರಿದಾಗ, ಅವನ ಸೈನ್ಯವನ್ನು ಸೋಲಿಸಲು ಅಸಾಧ್ಯವಾಗಿತ್ತು. ಆದರೆ ನಾನೆಯ ದೇವತೆಯ ಗುಡಿಯಲ್ಲಿ ಅವರು ತುಂಡು ತುಂಡಾಗಿ ಕಡಿಯಲ್ಪಟ್ಟರು. ಅಲ್ಲಿನ ಪೂಜಾರಿಗಳ ತಂತ್ರೋಪಾಯದಿಂದ ಅದು ಸಾಧ್ಯವಾಯಿತು. 14ನಾನೆಯ ಆ ದೇವತೆಯನ್ನು ವಿವಾಹ ಮಾಡಿಕೊಂಡು ಆ ಗುಡಿಯಲ್ಲಿದ್ದ ನಿಧಿನಿಕ್ಷೇಪಗಳನ್ನು ವರದಕ್ಷಿಣೆಯಾಗಿ ದಕ್ಕಿಸಿಕೊಳ್ಳಬೇಕೆಂಬ ಉಪಾಯದಿಂದ ಅರಸ ಅಂತಿಯೋಕ ತನ್ನ ಅತಿ ನಂಬಿಕಸ್ಥ ಸಲಹೆಗಾರರೊಂದಿಗೆ ನಾನೆಯ ದೇವಾಲಯಕ್ಕೆ ಹೋಗಿದ್ದನು. 15ಪೂಜಾರಿಗಳು ಭಂಡಾರದಲ್ಲಿನ ನಿಧಿನಿಕ್ಷೇಪಗಳನ್ನು ಹೊರಗೆ ತಂದಿಟ್ಟ ನಂತರ ಅಂತಿಯೋಕನು ಅವುಗಳನ್ನು ದೋಚಿಕೊಳ್ಳಲು ತನ್ನ ಸಂಗಡಿಗರೊಂದಿಗೆ ದೇವಾಲಯದೊಳಕ್ಕೆ ಹೋದನು. ಆಗ ಪೂಜಾರಿಗಳು ಹಿಂದಿನಿಂದ ಬಾಗಿಲುಗಳನ್ನು ಮುಚ್ಚಿಬಿಟ್ಟರು. 16ಮಾಳಿಗೆಯಲ್ಲಿನ ರಹಸ್ಯ ಕಿಂಡಿಗಳ ಮೂಲಕ ಅವನ ಮೇಲೂ ಅವನ ಸಂಗಡಿಗರ ಮೇಲೂ ಕಲ್ಲುಗಳನ್ನು ತೂರಿ ಅವರನ್ನೆಲ್ಲ ಕೊಂದುಹಾಕಿದರು; ಅವರ ಕೈ ಕಾಲುಗಳನ್ನು ಕಡಿದುಹಾಕಿ, ತಲೆಗಳನ್ನು ಬೇರ್ಪಡಿಸಿ, ಕೆಳಗೆ ನಿಂತಿದ್ದ ಜನರ ಕಡೆಗೆ ಎಸೆದುಬಿಟ್ಟರು. 17ಆ ಅಕ್ರಮಿಗಳಿಗೆ ಸರಿಯಾಗಿ ಶಾಸ್ತಿಮಾಡಿದ ದೇವರಿಗೆ ಸ್ತುತಿಯಾಗಲಿ! ಎಲ್ಲ ವಿಧದಲ್ಲೂ ಅವರಿಗೆ ಸ್ತುತಸಲ್ಲಲಿ!

**ಅಳಿಯದೆ ಉಳಿದ ಪವಿತ್ರಾಗ್ನಿ**

18 “ಕಿಸ್ಲೇವಿನ ಮಾಸದ 25ನೇ ದಿನ ನಾವು ಮಹಾದೇವಾಲಯದ ಶುದ್ಧೀಕರಣದ ಹಬ್ಬವನ್ನು ಕೊಂಡಾಡುತ್ತೇವೆ. ಪರ್ಣಕುಟೀರಗಳ ಹಬ್ಬದಂತೆಯೇ ಆ ಹಬ್ಬವನ್ನು ಸಹ ನೀವು ಆಚರಿಸುವಂತೆ ನಿಮಗೆ ಇದನ್ನು ಕುರಿತು ತಿಳಿಸುವುದು ಒಳ್ಳೆಯದೆಂದು ನಮಗೆ ತೋರುತ್ತದೆ. ಮಹಾದೇವಾಲಯವನ್ನೂ ಬಲಿಪೀಠವನ್ನೂ ಪುನಃ ಕಟ್ಟಿದ ಸಮಯದಲ್ಲಿ, ನೆಹೆಮೀಯನು ಬಲಿಯರ್ಪಣೆ ಮಾಡಿದಾಗ, ಅಗ್ನಿ ಕಾಣಿಸಿಕೊಂಡ ಘಟನೆಯನ್ನು ನೀವು ಆಗ ನೆನಪಿಗೆ ತಂದುಕೊಂಡಂತಾಗುತ್ತದೆ.

19 “ನಮ್ಮ ಪೂರ್ವಜರು ಪರ್ಷಿಯಾ ನಾಡಿಗೆ ಸೆರೆಯಾಗಿ ಕೊಂಡೊಯ್ಯಲ್ಪಟ್ಟಾಗ ಕೆಲವು ಶ್ರದ್ಧೆಯುಳ್ಳ ಯಾಜಕರು ಬಲಿಪೀಠದಿಂದ ಅಗ್ನಿಯನ್ನು ತೆಗೆದುಕೊಂಡು ರಹಸ್ಯವಾಗಿ ನೀರಿಲ್ಲದ ಬಾವಿಯೊಂದರಲ್ಲಿ ಅಡಗಿಸಿಟ್ಟರು. ಅದನ್ನು ಯಾರೂ ಕಂಡುಹಿಡಿಯದಷ್ಟು ರಹಸ್ಯವಾಗಿತ್ತು. 20ಕೆಲವು ವರ್ಷಗಳ ನಂತರ, ದೈವೇಚ್ಛೆಗನುಗುಣವಾಗಿ ಪರ್ಷಿಯಾದ ಅರಸನು ನೆಹೆಮೀಯನನ್ನು ಜೆರುಸಲೇಮಿಗೆ ಮರಳಿ ಕಳುಹಿಸಿದಾಗ, ಯಾಜಕರ ಸಂತಾನದವರಿಗೆ ಅಗ್ನಿಯನು ಹುಡುಕಬೇಕೆಂದು ಹೇಳಿದನು. ಅವರಿಗೆ

ಆ ಅಗ್ನಿ ಸಿಕ್ಕಲಿಲ್ಲವೆಂದೂ ಅದಕ್ಕೆ ಬದಲು ಎಣ್ಣೆಯಂತಿರುವ ದ್ರವಮಾತ್ರ ಸಿಕ್ಕಿದೆಯೆಂದೂ ನಮಗೆ ವರದಿಮಾಡಿದರು. ಅದನ್ನೆ ಸ್ವಲ್ಪ ತೆಗೆದುಕೊಂಡು ತರಬೇಕೆಂದು ನೆಹೆಮೀಯನು ಅವರಿಗೆ ಹೇಳಿದನು.

21 "ಬಲಿವಸ್ತುಗಳನ್ನೆಲ್ಲ ಪೀಠದ ಮೇಲೆ ತಂದಿಟ್ಟಾಗ, ಆ ದ್ರವವನ್ನು ಕಟ್ಟಿಗೆಯ ಹಾಗು ಬಲಿವಸ್ತುವಿನ ಮೇಲೆ ಸುರಿಯಬೇಕೆಂದು ನೆಹೆಮೀಯನು ಯಾಜಕರಿಗೆ ಹೇಳಿದನು. 22ಯಾಜಕರು ಹಾಗೆಯೇ ಮಾಡಿದಾಗ ಸ್ವಲ್ಪಹೊತ್ತಿನಲ್ಲೇ ಮೇಘಗಳ ಹಿಂದಿನಿಂದ ಸೂರ್ಯನು ಕಾಣಿಸಿಕೊಂಡನು. ತಕ್ಷಣವೇ, ಪೀಠದ ಮೇಲೆ ಇದ್ದುದೆಲ್ಲವೂ ಬೆಂಕಿಯಿಂದ ಉರಿಯಲು ಆರಂಭಿಸಿತು. ಅದನ್ನು ನೋಡಿ ಎಲ್ಲರೂ ಅವಾಕ್ಕಾದರು. 23ಆ ಅಗ್ನಿಯು ಬಲಿಯನ್ನು ದಹಿಸುತ್ತಿರುವಾಗ, ಪ್ರಧಾನಯಾಜಕ ಯೋನಾತನನು ಪ್ರಾರ್ಥನೆಯನ್ನು ಪ್ರಾರಂಭಿಸಿದನು. ನೆಹೆಮೀಯನೂ ಸಭಿಕರೆಲ್ಲರೂ ಪ್ರತ್ಯುತ್ತರವಿತ್ತರು.

### ನೆಹೆಮೀಯನ ಪ್ರಾರ್ಥನೆ

24 "ನೆಹೆಮೀಯನ ಪ್ರಾರ್ಥನೆ ಹೀಗಿತ್ತು: 'ಸರ್ವೇಶ್ವರನಾದ ದೇವರೇ, ಸಕಲವನ್ನೂ ಸೃಷ್ಟಿಸಿದ ಪ್ರಭುವೇ, ನೀವು ಭಯಭಕ್ತಿಗೆ ಪಾತ್ರರು, ಸರ್ವಶಕ್ತರು! ಆದರೂ ಕರುಣಾಳು ಹಾಗು ಸತ್ಯ ಸ್ವರೂಪಿ. ನೀವೊಬ್ಬರೇ ಅರಸರು, ದಯಾಪರರು. 25ನೀವಲ್ಲದೆ ಬೇರಾರೂ ಕೃಪಾಳು, ನ್ಯಾಯವಂತರು ಇಲ್ಲ. ನೀವು ಸರ್ವಶಕ್ತರು, ಸದಾಕಾಲಕ್ಕೂ ಇರುವವರು. ಇಸ್ರಯೇಲನ್ನು ಸಕಲ ಆಪತ್ತಿನಿಂದ ಬಿಡುಗಡೆಮಾಡಲು ಸದಾ ಸಿದ್ಧರು. ನಮ್ಮ ಪೂರ್ವಜರನ್ನು ನಿಮ್ಮ ಸ್ವಕೀಯ ಪ್ರಜೆಯನ್ನಾಗಿ ಆರಿಸಿಕೊಂಡಿರಿ, ಶುದ್ಧೀಕರಿಸಿದಿರಿ. 26ಇಸ್ರಯೇಲ್ ಸಮಾಜದ ಪರವಾಗಿ ನಾವು ಅರ್ಪಿಸುತ್ತಿರುವ ಬಲಿದಾನವನ್ನು ಅಂಗೀಕರಿಸಿರಿ. ನೀವು ಆರಿಸಿಕೊಂಡ ಪ್ರಜೆಯನ್ನು ಕಾಪಾಡಿ, ನಮ್ಮನ್ನು ನಿಮ್ಮ ಪ್ರಜೆಯನ್ನಾಗಿ ಪವಿತ್ರೀಕರಿಸಿರಿ. 27ಪರಕೀಯ ರಾಜ್ಯಗಳಲ್ಲಿ ಅಡಿಯಾಳಾಗಿರುವ ನಮ್ಮ ಜನರನ್ನು ಬಿಡುಗಡೆ ಮಾಡಿರಿ. ಚದರಿಹೋದ ನಮ್ಮ ಬಾಂಧವರನ್ನು ಒಂದುಗೂಡಿಸಿರಿ. ಚಿತ್ರಹಿಂಸೆಗೂ ತಾತ್ಸಾರಕ್ಕೂ ಗುರಿಯಾಗಿರುವ ನಮ್ಮ ಜನತೆಯ ಮೇಲೆ ಕರುಣೆ ತೋರಿರಿ. ಹೀಗೆ ಸರ್ವರಾಷ್ಟ್ರಗಳವರು ಇದನ್ನು ಕಂಡು ನೀವೇ ನಮ್ಮ ದೇವರೆಂದು ತಿಳಿದುಕೊಳ್ಳುವರು. 28ಉದ್ಧಟತನದಿಂದ, ಅಹಂಕಾರದಿಂದ ಮೆರೆದು ನಮ್ಮನ್ನು ಶೋಷಿಸುವಂಥವರು ಸಂಕಟಕ್ಕೆ ಒಳಗಾಗುವಂತೆ ಮಾಡಿರಿ. 29ಮೋಶೆಯು ಮುಂತಿಳಿಸಿದ ಪ್ರಕಾರ ನಿಮ್ಮ ಜನರನ್ನು ನಿಮ್ಮ ಪವಿತ್ರ ನಾಡಿನಲ್ಲಿ ನೆಲೆಗೊಳಿಸಿರಿ.'

### ಪವಿತ್ರ ದ್ರವ ದೊರಕಿದ ಸ್ಥಳ – ಅರಸನಿಗೆ ಪುಣ್ಯಕ್ಷೇತ್ರ

30 "ಆ ಅಗ್ನಿಯು ಬಲಿಯನ್ನು ದಹಿಸುವವರೆಗೂ ಯಾಜಕರು ಭಕ್ತಿಗೀತೆಗಳನ್ನು ಹಾಡಿದರು. 31ಎಲ್ಲವೂ ಸುಟ್ಟು ಬೂದಿಯಾದ ನಂತರ, ಮಿಕ್ಕಿದ್ದ ದ್ರವವನ್ನು ಕೆಲವು ದೊಡ್ಡಕಲ್ಲುಗಳ ಮೇಲೆ ಸುರಿಯಲು ನೆಹೆಮೀಯನು ಆಜ್ಞೆ ಇತ್ತನು. 32ತಕ್ಷಣವೇ ಧಗಧಗನೆ ಬೆಂಕಿ ಉರಿಯಿತು. ಅದನ್ನು ಪೀಠದ ಮೇಲಿನ ಅಗ್ನಿ ಆವರಿಸಿತು.

33 "ನಡೆದ ಈ ಘಟನೆ ಎಲ್ಲಾಕಡೆ ಸುದ್ದಿಯಾಯಿತು. ಸೆರೆಹೋಗುವ ಮುನ್ನ ಯಾಜಕರು ಮರೆಯಾಗಿ ಅಗ್ನಿಯನ್ನು ಅಡಗಿಸಿಟ್ಟಿದ್ದ ಸ್ಥಳದಲ್ಲಿ ಒಂದು ಅಪೂರ್ವವಾದ ದ್ರವ ಕಂಡುಬಂದಿದೆ ಎಂದು ಪರ್ಷಿಯಾದ ಅರಸನಿಗೆ ಗೊತ್ತಾಯಿತು. ಅಂತೆಯೇ, ನೆಹೆಮೀಯನು ಹಾಗು ಅವನ ಸಂಗಡಿಗರು ಬಲಿಯನ್ನು ಪೀಠದ ಮೇಲೆ ದಹಿಸುವುದಕ್ಕೆ ಆ ದ್ರವವನ್ನು ಬಳಸಿದರೆಂದು ಇವನಿಗೆ ತಿಳಿಯಿತು. 34ಅರಸನು ಈ ವಿಷಯವನ್ನು ಪರಿಶೀಲನೆಗೆ ಒಳಪಡಿಸಿದನು. ಸಂಗತಿ ನಿಜವೆಂದು ಕಂಡುಬಂದದ್ದರಿಂದ, ಅವನು ಆ ಸ್ಥಳದ ಸುತ್ತಲೂ ಬೇಲಿ ಹಾಕಿಸಿ, ಅದನ್ನು ಪುಣ್ಯಕ್ಷೇತ್ರವನ್ನಾಗಿ ಮಾರ್ಪಡಿಸಿದನು. 35ಈ ಪುಣ್ಯಕ್ಷೇತ್ರದಿಂದ ಹೇರಳವಾದ ಧನ ಉತ್ಪತ್ತಿಯಾಯಿತು. ಅರಸನು ತನಗೆ ಬೇಕಾದವರಿಗೆ ಕೊಡುಗೆಗಳನ್ನು ನೀಡಲು ಈ ಹಣವನ್ನು ಬಳಸಿಕೊಂಡನು. 36ಆ ಅಪೂರ್ವವಾದ ದ್ರವಕ್ಕೆ ನೆಹೆಮೀಯನು ಮತ್ತು ಅವನ ಸಂಗಡಿಗರು 'ನೆಫ್ತರ್' ಎಂದು ಹೆಸರಿಟ್ಟರು. ಆದರೆ ಅನೇಕರು ಅದನ್ನು 'ನಫ್ತ' ಎಂದು ಕರೆಯಲಾರಂಭಿಸಿದರು.

## ಗುಹೆಯಲ್ಲಿ ದೇವದರ್ಶನದ ಗುಡಾರ

**2** “ಬಲಿಪೀಠದ ಅಗ್ನಿಯನ್ನು ಮರೆಯಲ್ಲಿ ಇಡಲು ಪ್ರವಾದಿ ಯೆರೆಮೀಯನು ಸೆರೆ ಹೋಗಲಿದ್ದ ಜನರಿಗೆ
ಆಜ್ಞಾಪಿಸಿದ್ದನೆಂದು ಪುರಾತನ ದಾಖಲೆಗಳಿಂದ ವೇದ್ಯವಾಗುತ್ತದೆ. 2ದೇವರ ಧರ್ಮಶಾಸ್ತ್ರವನ್ನು ಕುರಿತು
ಬೋಧನೆ ಮಾಡಿದ ನಂತರ, ‘ಸರ್ವೇಶ್ವರನ ಆಜ್ಞೆಗಳನ್ನು ಮರೆಯಬಾರದು; ಅನ್ಯಧರ್ಮೀಯರ
ನಾಡಿನಲ್ಲಿರುವ ಬೆಳ್ಳಿಬಂಗಾರದಿಂದ ಮಾಡಿದ ಹಾಗೂ ಆಭರಣಗಳಿಂದ ಅಲಂಕೃತವಾದ ವಿಗ್ರಹಗಳಿಗೆ
ಮಾರುಹೋಗಿ ದಾರಿತಪ್ಪಿ ನಡೆಯಬಾರದು’ ಎಂಬುದಾಗಿ ಸೆರೆಹೋದ ಜನರಿಗೆ ಯೆರೆಮೀಯನು ಎಚ್ಚರಿಕೆ
ನೀಡಿದ್ದನೆಂದು ಸಹ ಆ ದಾಖಲೆಗಳಿಂದ ತಿಳಿದು ಬರುತ್ತದೆ. 3ಇವೇ ಮುಂತಾದ ಮಾತುಗಳಿಂದ ಜನರು
ಧರ್ಮಶಾಸ್ತ್ರವನ್ನು ತಮ್ಮ ಹೃನ್ಮನಗಳಿಂದ ತೊರೆದುಬಿಡಬಾರದೆಂದು ಪ್ರವಾದಿಯು ಪ್ರಚೋದಿಸಿದ್ದನು.
4 “ಆ ದಾಖಲೆಗಳಿಂದ ನಾವು ಅರಿಯತಕ್ಕ ಇನ್ನೊಂದು ವಿಷಯ ಯಾವುದೆಂದರೆ: ಪ್ರವಾದಿ
ಯೆರೆಮೀಯನಿಗೆ ಕೇಳಿಬಂದ ದೈವವಾಣಿಯ ಪ್ರಕಾರ, ದೇವದರ್ಶನ ಗುಡಾರವನ್ನು ಮತ್ತು ಒಡಂಬಡಿಕೆಯ
ಮಂಜೂಷವನ್ನು ಅವನು ಹೋದೆಡೆಯೆಲ್ಲಾ ಹಿಂದೆಯೇ ಹೊತ್ತುಕೊಂಡು ಹೋಗಬೇಕಾಗಿತ್ತು; ದೇವರು
ವಾಗ್ದಾನ ಮಾಡಿದ ನಾಡನ್ನು ಯಾವ ಬೆಟ್ಟದ ಮೇಲಿಂದ ಮೋಶೆಗೆ ತೋರಿಸಿದರೋ, ಆ ಬೆಟ್ಟಕ್ಕೆ
ಕೊಂಡೊಯ್ಯಬೇಕಾಗಿತ್ತು. 5ಯೆರೆಮೀಯನು ಆ ಬೆಟ್ಟವನ್ನು ಸೇರಿದಾಗ ಅಲ್ಲಿ ಒಂದು ಗುಹೆಯನ್ನು
ಕಂಡನು. ದೇವದರ್ಶನದ ಗುಡಾರವನ್ನು, ಒಡಂಬಡಿಕೆಯ ಮಂಜೂಷವನ್ನು ಹಾಗೂ ಧೂಪವೇದಿಕೆಯನ್ನು
ಆ ಗುಹೆಯಲ್ಲಿಟ್ಟು ಅದರ ದ್ವಾರವನ್ನು ಮುಚ್ಚಿ ಭದ್ರಪಡಿಸಿದ್ದನು.
6 “ಯೆರೆಮೀಯನನ್ನು ಹಿಂಬಾಲಿಸಿದ ಕೆಲವರು ಆ ದಾರಿಯ ಗುರುತನ್ನು ಪತ್ತೆಹಚ್ಚಲು
ಪ್ರಯತ್ನಿಸಿದರು. ಆದರೆ ಆ ಗುಹೆಯನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ. 7ಇದನ್ನು ಅರಿತ
ಯೆರೆಮೀಯನು ಅವರನ್ನು ಗದರಿಸುತ್ತಾ: ‘ದೇವರು ಕರುಣೆತೋರಿ ತಮ್ಮ ಜನರನ್ನು ಪುನಃ
ಒಟ್ಟುಗೂಡಿಸುವವರೆಗೂ ಆ ಸ್ಥಳ ಅಜ್ಞಾತವಾಗಿರಬೇಕು. 8ಆಗ ಇವುಗಳನ್ನು ದೇವರು ಬಹಿರಂಗ
ಪಡಿಸುವರು; ಮೋಶೆಯ ಕಾಲದಲ್ಲಿ ದೇವರು ತೋರಿಸಿದಂತೆ ಸರ್ವೇಶ್ವರನ ತೇಜಸ್ಸು ಹಾಗು ಮೇಘ
ಕಂಡುಬರುತ್ತವೆ. ಸೊಲೊಮೋನನ ಕಾಲದಲ್ಲಿ ಸಹ ಮಹಾದೇವಾಲಯವು ಪ್ರತಿಷ್ಠಾಪಿತವಾಗಲಿ ಎಂದು
ಪ್ರಾರ್ಥಿಸಿದಾಗ ಇದೇ ರೀತಿ ಸಂಭವಿಸಿತ್ತು ಎಂದು ಹೇಳಿದ್ದನು.

## ಸೊಲೊಮೋನನೂ ಹಬ್ಬವನ್ನು ಆಚರಿಸಿದನು

9 “ಮಹಾದೇವಾಲಯವನ್ನು ಕಟ್ಟಿ ಪೂರೈಸಿದ ಸಂದರ್ಭದಲ್ಲಿ ಅದನ್ನು ಪ್ರತಿಷ್ಠಾಪಿಸುವಾಗ,
ಜ್ಞಾನಿಯಾದ ಸೊಲೊಮೋನನು ಬಲಿದಾನವನ್ನು ಅರ್ಪಿಸಿದನು ಎಂಬುದು ದಾಖಲೆಯಿಂದ ಗೊತ್ತಾಗುತ್ತದೆ.
10ಮೋಶೆ ಸರ್ವೇಶ್ವರನಿಗೆ ಪ್ರಾರ್ಥನೆ ಮಾಡಿದಾಗ ಆಕಾಶದಿಂದ ಅಗ್ನಿ ಇಳಿದು ಬಂದು, ಬಲಿಯನ್ನು
ದಹಿಸಿದ ಪ್ರಕಾರವೇ, ಸೊಲೊಮೋನನು ಪ್ರಾರ್ಥನೆ ಮಾಡಿದಾಗ ಅಗ್ನಿ ಇಳಿದು ಬಂದು ಬಲಿಯನ್ನೆಲ್ಲ
ದಹಿಸಿಬಿಟ್ಟಿತು. 11ಪಾಪಪರಿಹಾರಕ್ಕಾಗಿ ಅರ್ಪಿಸಿದ ಬಲಿಯನ್ನು ಯಾರೂ ಭುಜಿಸಲಿಲ್ಲ. ಆದ್ದರಿಂದ ಆ
ಅಗ್ನಿಯೇ ಅದನ್ನು ದಹಿಸಿಬಿಟ್ಟಿತೆಂದು ಮೋಶೆ ಹೇಳಿದ್ದನು. 12ಸೊಲೊಮೋನನು ಅಂತೆಯೇ ಆ ಹಬ್ಬವನ್ನು
ಎಂಟು ದಿನಗಳವರೆಗೆ ಕೊಂಡಾಡಿದನು.

## ನೆಹೆಮೀಯನ ಪುಸ್ತಕ ಭಂಡಾರ

13 “ಈ ಘಟನೆಗಳನ್ನು ರಾಜ್ಯದ ದಾಖಲೆಗಳಲ್ಲೂ ಮತ್ತು ನೆಹೆಮೀಯನ ದಿನಚರಿ ಪುಸ್ತಕಗಳಲ್ಲೂ
ವರದಿಮಾಡಲಾಗಿದೆ. ನೆಹೆಮೀಯನು ಪುಸ್ತಕ ಭಂಡಾರವೊಂದನ್ನು ಸ್ಥಾಪಿಸಿದ್ದನು. ರಾಜರುಗಳ ಹಾಗು
ಪ್ರವಾದಿಗಳ ಕುರಿತ ಪುಸ್ತಕಗಳನ್ನು, ದಾವೀದನ ಕೃತಿಗಳನ್ನು, ಕಾಣಿಕೆಗಳ ವಿಷಯವಾಗಿ ರಾಜರುಗಳು ಬರೆದ
ಪತ್ರಗಳನ್ನು ಈ ಮುಂತಾದುವುಗಳನ್ನು ಅದರಲ್ಲಿ ಶೇಖರಿಸಿದ್ದನು. 14ಅದೇ ಪ್ರಕಾರ, ನಮಗೆ ಸಂಭವಿಸಿದ
ಯುದ್ಧದ ಸಂದರ್ಭದಲ್ಲಿ ಕಳೆದುಹೋದ ಆ ಪುಸ್ತಕಗಳನ್ನು ಯೂದ ಮಕ್ಕಬಿಯನು ಸಂಗ್ರಹಿಸಿದನು. ಅವು

ಈಗ ನಮ್ಮಲ್ಲಿವೆ. 15ಅವು ನಿಮಗೆ ಬೇಕಾದಲ್ಲಿ, ಜನರನ್ನು ಕಳುಹಿಸಿರಿ, ನಾವು ಅವರ ಮುಖಾಂತರ ಕಳುಹಿಸಿಕೊಡುತ್ತೇವೆ.

**ಹಬ್ಬವನ್ನು ಕೊಂಡಾಡಲು ಆಹ್ವಾನ**

16 "ಮಹಾದೇವಾಲಯದ ಶುದ್ಧೀಕರಣದ ಹಬ್ಬವನ್ನು ನಾವೀಗ ಕೊಂಡಾಡುವುದರಿಂದ ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇವೆ. ದಯವಿಟ್ಟು ನೀವು ಈ ಹಬ್ಬವನ್ನು ಆಚರಿಸಬೇಕೆಂದು ವಿನಂತಿಸುತ್ತೇವೆ. 17ದೇವರೇ ನಮ್ಮನ್ನು ರಕ್ಷಿಸಿದವರು; ನಮ್ಮ ಬಾಧ್ಯತೆಯ ನಾಡನ್ನು ಮರಳಿ ಕೊಟ್ಟವರು; ರಾಜ್ಯ, ಯಾಜಕತ್ವ ಮತ್ತು ಶುದ್ಧೀಕರಣ ವಿಧಿಗಳನ್ನು ಪುನಃ ಕೊಟ್ಟವರೂ ಅವರೇ. 18ಧರ್ಮಶಾಸ್ತ್ರದಲ್ಲಿ ಅವರು ನೀಡಿದ ವಾಗ್ದಾನದ ಪ್ರಕಾರ ಅವರು ಇದೆಲ್ಲವನ್ನು ಮಾಡಿರುವವರು. ಶೀಘ್ರದಲ್ಲಿ ದೇವರು ನಮಗೆ ದಯೆತೋರಿ ಲೋಕದ ಎಲ್ಲೆಡೆಗಳಿಂದ ನಮ್ಮನ್ನು ಆ ಮಹಾ ಪವಿತ್ರದೇವಾಲಯದಲ್ಲಿ ಒಂದುಗೂಡಿಸುವರೆಂಬ ನಂಬಿಕೆ ನನಗಿದೆ; ಅವರು ನಮ್ಮನ್ನು ಘೋರ ಆಪತ್ತುಗಳಿಂದ ಕಾಪಾಡಿದ್ದಾರೆ. ನಮ್ಮ ಮಹಾದೇವಾಲಯವನ್ನು ಶುದ್ಧೀಕರಿಸಿದ್ದಾರೆ."

**ಗ್ರಂಥಕರ್ತನ ಮುನ್ನುಡಿ**

19 ಸಿರೇನಿನ ಯಾಸೋನನು, ಮಕ್ಕಬಿಯನಾದ ಯೂದನ ಹಾಗು ಅವನ ಸಹೋದರರ ಕಥೆಯನ್ನು ಮತ್ತು ಮಹಾದೇವಾಲಯದ ಶುದ್ಧೀಕರಣ ಹಾಗು ಬಲಿಪೀಠದ ಪ್ರತಿಷ್ಠಾಪನೆ ಕುರಿತ ವಿಷಯವನ್ನು ಐದು ಸಂಪುಟಗಳಲ್ಲಿ ದಾಖಲುಮಾಡಿದ್ದಾನೆ. 20ಹಾಗೆಯೇ ಅಂತಿಯೋಕ ಎಪಿಫನೆಸ್ ಮತ್ತು ಅವನ ಮಗ ಯೂಪತೋರ್ ಎಂಬವರ ವಿರುದ್ಧ ಮಾಡಿದ ಯುದ್ಧದ ಬಗ್ಗೆ ವರದಿ ಮಾಡಿದ್ದಾನೆ. 21ಅದೇ ಪ್ರಕಾರ, ಯೆಹೂದ್ಯ ಧರ್ಮಕ್ಕಾಗಿ ಧೈರ್ಯದಿಂದ ಹೋರಾಡಿದವರು ಕಂಡ ದಿವ್ಯದರ್ಶನಗಳು ಸಹ ದಾಖಲಾಗಿವೆ. ನಮ್ಮ ಜನರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರೂ ಅವರು ಅನ್ಯರ ಇಡೀ ನಾಡನ್ನು ಧ್ವಂಸಗೊಳಿಸಿ, ಅನ್ಯರ ಬರ್ಬರ ಪಡೆಗಳನ್ನು ನಿರ್ನಾಮಗೊಳಿಸಿದರು. 22ಅವರು ಲೋಕದಲ್ಲೆಲ್ಲ ಪ್ರಖ್ಯಾತವಾದ ಮಹಾದೇವಾಲಯವನ್ನು ಪುನರಾಕ್ರಮಿಸಿಕೊಂಡರು; ಜೆರುಸಲೇಮ್ ನಗರವನ್ನು ಬಿಡುಗಡೆಮಾಡಿದರು; ರದ್ದಾಗಲಿದ್ದ ವಿಧಿನಿಯಮಗಳನ್ನು ಪುನಃ ಜಾರಿಗೆ ತಂದರು. ಸರ್ವೇಶ್ವರಸ್ವಾಮಿ ಅವರಿಗೆ ತೋರಿದ ಅಪಾರ ಕೃಪೆಯಿಂದ ಇದೆಲ್ಲ ಸಾಧ್ಯವಾಯಿತು.

23 ಈ ವೃತ್ತಾಂತವನ್ನೆಲ್ಲ ಸಿರೇನಿನ ಯಾಸೋನನು ಐದು ಸಂಪುಟಗಳಲ್ಲಿ ಬರೆದಿಟ್ಟಿದ್ದಾನೆ. ನಾನು ಅದೆಲ್ಲವನ್ನು ಒಂದೇ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ಬರೆಯಲು ಪ್ರಯತ್ನಿಸುತ್ತಿದ್ದೇನೆ. 24ಅತ್ಯಧಿಕವಾದ ಅಂಕಿಅಂಶಗಳು, ಚಾರಿತ್ರಿಕ ವಿವರಗಳು ಓದುಗರಿಗೆ ಬೇಸರವನ್ನುಂಟುಮಾಡಬಹುದು. 25ಆದುದರಿಂದ ಓದಲಿಚ್ಛಿಸುವವರನ್ನು ಮೆಚ್ಚಿಸುವಂತೆ, ಬಾಯಿಪಾಠ ಮಾಡುವವರಿಗೆ ಸುಲಭಸಾಧ್ಯವಾಗುವಂತೆ, ಒಟ್ಟಾರೆ ಎಲ್ಲಾ ಓದುಗರಿಗೆ ಉಪಯುಕ್ತವಾಗುವಂತೆ ಈ ಗ್ರಂಥವನ್ನು ಬರೆಯಲು ಪ್ರಯತ್ನಸಿದ್ದೇನೆ. 26ಸಂಕ್ಷಿಪ್ತವಾಗಿ ಬರೆಯುವ ಕಾರ್ಯವನ್ನು ಕೈಗೊಂಡಿರುವ ನನಗೆ ಇದೇನೂ ಸರಳವಾದ ವಿಷಯವಲ್ಲ. ಬೆವರು ಸುರಿಸಿ, ನಿದ್ರೆಯಿಲ್ಲದೆ ಕೆಲಸ ಮಾಡಬೇಕಾಗಿದೆ. 27ಬೇರೆ ಬೇರೆ ರುಚಿಯಿಂದ ಕೂಡಿದ ಅತಿಥಿಗಳಿಗೆ ತೃಪ್ತಿತರುವ ಔತಣವನ್ನು ತಯಾರಿಸುವುದು ಎಷ್ಟು ಕಷ್ಟಕರವಾದ ಕೆಲಸವೋ ಅಂಥ ಕೆಲಸವನ್ನು ಕೈಗೊಂಡಿದ್ದೇನೆ. 28ಪ್ರತಿಯೊಂದು ಅಂಶದ ಸತ್ಯತೆಯನ್ನು ಮೂಲ ಗ್ರಂಥಕರ್ತರಿಗೆ ಬಿಟ್ಟು ಘಟನೆಗಳ ಸಾರಾಂಶವನ್ನು ಮಾತ್ರ ನೀಡಲು ಇಲ್ಲಿ ಪ್ರಯತ್ನ ಮಾಡುತ್ತೇನೆ. 29ಹೊಸಮನೆಯೊಂದನ್ನು ಕಟ್ಟುವವನು ಇಡೀ ಕಟ್ಟಡದ ವಿವರಗಳನ್ನು ಗಮನಿಸಬೇಕಾಗುತ್ತದೆ. ಬಣ್ಣ ಬಳಿಯುವವನಾದರೋ ಕಟ್ಟಡದ ಅಲಂಕಾರವನ್ನು ಮಾತ್ರ ಗಮನಿಸುತ್ತಾನೆ. ನನ್ನದು ಬಣ್ಣ ಬಳಿಯುವವರ ಕೆಲಸವೆಂದೇ ಎಣಿಸಿಕೊಳ್ಳಿ. 30ಮೂಲಚರಿತ್ರಗಾರನು ಈ ವಿಷಯದಲ್ಲಿ ಸ್ವಾಮಿತ್ವವನ್ನು ಹೊಂದಿರಬೇಕು. ಎಲ್ಲಾ ದೃಷ್ಟಿಕೋನಗಳಿಂದ ವಿಷಯವನ್ನು ಚರ್ಚೆ ಮಾಡಬೇಕು. ಕೂಲಂಕುಷವಾಗಿ ವಿವರಿಸಬೇಕು. ಇದು ಅವನ ಕರ್ತವ್ಯ. 31ಆದರೆ ಅದೇ ಕಥನವನ್ನು ಪುನಃ ರಚಿಸುವವನಿಗೆ ವಿಷಯಗಳನ್ನು ಸಂಕ್ಷೇಪಿಸುವುದಕ್ಕೂ ಸವಿಸ್ತಾರವಾದ ಬರವಣಿಗೆಯನ್ನು ತ್ಯಜಿಸುವುದಕ್ಕೂ ಅನುಮತಿ ನೀಡಬೇಕು. 32ಇದೀಗ ಚರಿತ್ರೆಯನ್ನು ಪ್ರಾರಂಭಿಸೋಣ. ಮುನ್ನುಡಿಯಾಗಿ

ಇದುವರೆಗೆ ಬರೆದದ್ದು ಸಾಕು. ಚರಿತ್ರೆಯನ್ನೇ ಸಂಕ್ಷೇಪಿಸುವಾಗ ಮುನ್ನುಡಿಯನ್ನು ಉದ್ದ ಮಾಡುವುದು ಹುಚ್ಚುತನ.

### ಓನೀಯ ಮತ್ತು ಸಿಮೋನನ ನಡುವೆ ವಿವಾದ

**3** ಪ್ರಧಾನ ಯಾಜಕ ಓನೀಯನು ಬಹಳ ಭಕ್ತಿವಂತ, ಪಾಪಕೃತ್ಯಗಳನ್ನು ಬಹಳವಾಗಿ ಹೇಸುತ್ತಿದ್ದ.
ಆದುದರಿಂದ ಪವಿತ್ರನಗರದಲ್ಲಿ ಶಾಂತಿಸಮಾಧಾನ ನೆಲೆಸಿತ್ತು. ಅಲ್ಲದೆ ವಿಧಿ ನಿಯಮಗಳನ್ನು ಜನರು
ಪ್ರಾಮಾಣಿಕವಾಗಿ ಅನುಸರಿಸುತ್ತಿದ್ದರು. 2ಹೀಗಿರಲಾಗಿ, (ಸಿರಿಯಾ ಹಾಗು ಈಜಿಪ್ಟಿನ) ಅರಸರುಗಳು ಮತ್ತು
ದೇಶದ ಮುಖಂಡರು ಮಹಾದೇವಾಲಯಕ್ಕೆ ಅತ್ಯುತ್ತಮವಾದ ಕೊಡುಗೆಗಳನ್ನಿತ್ತು ಗೌರವಸಲ್ಲಿಸಿದ್ದರು.
3ಏಷ್ಯಾದ ಅರಸ ಸೆಲ್ಯೂಕಸನು ಸಹ ಪೂಜೆ ಪುರಸ್ಕಾರಗಳಿಗೂ ಬಲಿಯರ್ಪಣೆಗಳಿಗೂ ಆಗುತ್ತಿದ್ದ ವೆಚ್ಚವನ್ನು
ತನ್ನ ರಾಜ್ಯಾದಾಯದಿಂದಲೇ ಭರಿಸಿಕೊಡುತ್ತಿದ್ದನು.

4 ಆದರೆ ದೇವಾಲಯದ ಮುಖ್ಯ ಆಡಳಿತಾಧಿಕಾರಿಯಾಗಿ ನೇಮಕಗೊಂಡಿದ್ದ ಬೆನ್ಯಾಮೀನನ
ಗೋತ್ರದ ಸಿಮೋನ್ ಎಂಬವನಿಗೂ ಪ್ರಧಾನ ಯಾಜಕ ಓನೀಯನಿಗೂ ನಗರದ ಮಾರುಕಟ್ಟೆಯ ಕಾನೂನು
ವ್ಯವಸ್ಥೆಯ ಬಗ್ಗೆ ಭಿನ್ನಾಭಿಪ್ರಾಯವಿತ್ತು. 5ಓನೀಯನೊಂದಿಗೆ ಮಾಡಿದ ವಾದದಲ್ಲಿ ಸೋತುಹೋಗಿದ್ದರಿಂದ
ಸಿಮೋನನು ಸೆಲೇಸಿರಿಯಾ ಹಾಗು ಫೆನೀಷಿಯ ನಾಡುಗಳ ರಾಜ್ಯಪಾಲನಾಗಿದ್ದ ತಾರ್ಸೆಸ್ಸನ ಮಗ
ಅಪೊಲ್ಲೋನಿಯನ ಬಳಿಗೆ ಹೋಗಿ, 6"ಜೆರುಸಲೇಮಿನ ದೇವಾಲಯದ ಬೊಕ್ಕಸ ಹೇರಳವಾದ ಹಣದಿಂದ
ತುಂಬಿದೆ; ಅದನ್ನು ಎಣಿಸುವುದಕ್ಕೂ ಅಸಾಧ್ಯವಾಗಿದೆ; ಅಷ್ಟೊಂದು ಹಣ ಬಲಿಯರ್ಪಣೆಗೆ
ಅನಾವಶ್ಯಕವಾದುದ್ದರಿಂದ ಅದನ್ನು ಅರಸನ ಮೇಲ್ವಿಚಾರಣೆಗೆ ಒಳಪಡಿಸಬೇಕು," ಎಂದು ದೂರಿತ್ತನು.

### ಜೆರುಸಲೇಮಿನಲ್ಲಿ ಹೆಲೆಯೋಡೊರಸ್

7 ಅಪೊಲ್ಲೋನಿಯನು ಅರಸನಿಗೆ ಹಣದ ವಿಷಯವನ್ನು ತಿಳಿಯಪಡಿಸಿದಾಗ, ಅರಸನು ತನ್ನ
ಮುಖ್ಯಮಂತ್ರಿ ಹೆಲೆಯೋಡೊರಸನನ್ನು ಕರೆದು, "ಹೋಗಿ ಆ ಹಣವನ್ನು ತೆಗೆದುಕೊಂಡು ಬಾ," ಎಂದು
ಆಜ್ಞಾಪಿಸಿದನು. 8ಹೆಲೆಯೋಡೊರಸನು ರಾಜಾಜ್ಞೆಯನ್ನು ಈಡೇರಿಸಲು ತಕ್ಷಣ ಹೊರಟನು; ಆದರೆ
ಸೆಲೆಸಿರಿಯಾ ಮತ್ತು ಫೆನಿಷಿಯಾ ನಗರಗಳ ತನಿಖಾಧಿಕಾರಿಯ ಸೋಗಿನಿಂದ ಪ್ರಯಾಣ ಮಾಡಿದನು.
9ಅವನು ಜೆರುಸಲೇಮನ್ನು ತಲುಪಿದಾಗ, ನಗರದ ಪ್ರಧಾನ ಯಾಜಕನಿಂದ ಅವನಿಗೆ ಸುಸ್ವಾಗತ ಲಭಿಸಿತು.
ಬಳಿಕ ತಾನು ಬಂದ ಕಾರಣವನ್ನು ತಿಳಿಸಿ, ಪರಿಸ್ಥಿತಿ ನಿಜವೋ ಎಂದು ವಿಚಾರಿಸಿದನು. 10ಪ್ರಧಾನ
ಯಾಜಕನು ಉತ್ತರಿಸುತ್ತಾ, "ವಿಧವೆಯರಿಗೂ ಅನಾಥರಿಗೂ ಮೀಸಲಾದ ಹಣ ಠೇವಣಿ ಇಡಲಾಗಿದೆ.
11ಅದರ ಜೊತೆ, ಅಗ್ರಗಣ್ಯನಾದ ತೊಬೀಯನ ಮಗ ಹಿರ್ಕಾನುಸನ ಹಣವೂ ಸೇರಿದೆ. ಅವುಗಳ ಮೊತ್ತ
13,000 ಕಿಲೋಗ್ರಾಮ್ ಬೆಳ್ಳಿ ಮತ್ತು 6,500 ಕಿಲೋಗ್ರಾಮ್ ಚಿನ್ನವಾಗುತ್ತದೆ. ಹೀಗಿರಲು, ದುಷ್ಟ ಸಿಮೋನನು
ನೀಡಿದ ಹೇಳಿಕೆ ಸತ್ಯಕ್ಕೆ ದೂರವಾದದ್ದು. 12ಪುಣ್ಯಕ್ಷೇತ್ರದ ಪವಿತ್ರತೆಯಲ್ಲಿ, ಲೋಕವಿಖ್ಯಾತ
ಮಹಾದೇವಾಲಯದ ಸತ್ಯತೆ ಹಾಗು ಧಾರ್ಮಿಕತೆಯಲ್ಲಿ ನಂಬಿಕೆಯಿಟ್ಟ ಜನರಿಗೆ ಮೋಸಮಾಡಿ ಆ
ಹಣವನ್ನು ತೆಗೆದು ಇತರರಿಗೆ ಕೊಡುವುದು ಎಂದಿಗೂ ಸಾಧ್ಯವಿಲ್ಲ," ಎಂದು ಹೇಳಿದನು.

### ಮಹಾದೇವಾಲಯವನ್ನು ಪ್ರವೇಶಿಸಲು ಯೋಜನೆ

13 ಆದರೂ ರಾಜಾಜ್ಞೆಯನ್ನು ಈಡೇರಿಸಲು ಬದ್ಧನಾದ ಹೆಲೆಯೋಡೊರಸ್ ಹೇಗಾದರೂ ಮಾಡಿ
ಹಣವನ್ನು ವಶಪಡಿಸಿಕೊಂಡು ರಾಜನ ಖಜಾನೆಗೆ ಸೇರಿಸಬೇಕಾಗಿದೆ ಎಂದು ಒತ್ತಿ ಹೇಳಿದನು.
14ಆದುದರಿಂದ ಅವನು ನೇರವಾಗಿ ನಿಧಿಯನ್ನು ಪರೀಕ್ಷಿಸಲು ದಿನವನ್ನು ಗೊತ್ತುಮಾಡಿ
ಮಹಾದೇವಾಲಯವನ್ನು ಪ್ರವೇಶಿಸಿದನು. ಇದರಿಂದ ನಗರದಲ್ಲೆಲ್ಲಾ ದೊಡ್ಡ ಗೊಂದಲ ಉಂಟಾಯಿತು.
15ಯಾಜಕರು, ತಮ್ಮ ಯಾಜಕ ವಸ್ತ್ರಗಳನ್ನು ಧರಿಸಿಕೊಂಡು, ಬಲಿಪೀಠದ ಮುಂದೆ ಸಾಷ್ಟಾಂಗವೆರಗಿ,
ಕಾಣಿಕೆಗಳ ಹಾಗು ಠೇವಣಿಗಳ ಬಗ್ಗೆ ನಿಯಮಗಳನ್ನಿತ್ತ ದೇವರಿಗೆ ಮೊರೆಯಿಟ್ಟರು: ಠೇವಣಿಗಳನ್ನು ಕೊಟ್ಟವರ

ಹಿತಕ್ಕಾಗಿ ಸುರಕ್ಷಿತವಾಗಿರಿಸಬೇಕೆಂದು ಪ್ರಾರ್ಥನೆಮಾಡಿದರು. 16–17ಪ್ರಧಾನಯಾಜಕನ ಮನಸ್ಸು ತತ್ತರಿಸಿತು; ಮುಖ ಬಿಳಿಚಿಕೊಂಡಿತು; ಅವನ ದೇಹ ನಡುಗಲಾರಂಭಿಸಿತು. ಅವನ ಹೃದಯ ಅಷ್ಟು ಕಂಗೆಟ್ಟಿತ್ತು. ಈ ದೃಶ್ಯ ನಿಜಕ್ಕೂ ಹೃದಯವಿದ್ರಾವಕವಾಗಿತ್ತು. 18ಮಹಾದೇವಾಲಯ ಅಪವಿತ್ರತೆಗೆ ಈಡಾಗದಂತೆ ಪ್ರಾರ್ಥಿಸಲು ಜನರು ಗುಂಪುಗುಂಪಾಗಿ ಓಡಿಬಂದರು. 19ಹೆಂಗಸರು ಬರೀ ಗೋಣಿತಟ್ಟಿನ ಲಂಗಗಳನ್ನುಟ್ಟುಕೊಂಡು ಬೀದಿಗಳಲ್ಲಿ ಗುಂಪುಗೂಡಿದರು, ಮನೆಯಿಂದ ಹೊರಕ್ಕೆ ಎಂದೂ ಬಾರದ ಯುವತಿಯರು ಬಾಗಿಲ ಬಳಿಯಲ್ಲೂ ನಗರದ ಗೋಡೆಯ ಬಳಿಯಲ್ಲೂ ಸೇರಿದರು. ಇನ್ನೂ ಕೆಲವರು ಕಿಟಕಿಗಳ ಮೂಲಕ ದುರುಗುಟ್ಟಿ ನೋಡಿದರು. 20ಇವರೆಲ್ಲರು ಸ್ವರ್ಗದತ್ತ ತಮ್ಮ ಕರಗಳನ್ನು ಎತ್ತಿ ಪ್ರಾರ್ಥಿಸಿದರು. 21ಇತ್ತ ಅತೀವ ಬಿಕ್ಕಟ್ಟಿನಲ್ಲೂ ಯಾತನೆಯಲ್ಲೂ ಸಿಕ್ಕಿಕೊಂಡ ಪ್ರಧಾನಯಾಜಕನು; ಅತ್ತ ಭ್ರಮೆಗೊಂಡು ಮೊಕ್ಕಡೆಯಾಗಿ ನೆಲದಮೇಲೆ ಬಿದ್ದಿದ್ದ ನಗರದ ನಿವಾಸಿಗಳ; ಎಂಥಾ ಚಿಂತಾಜನಕ ದೃಶ್ಯ!

### ಸರ್ವೇಶ್ವರನಿಂದ ಅಪೂರ್ವ ರಕ್ಷಣೆ

22 ಜನರೆಲ್ಲರು ಹೀಗೆ ವಿಶ್ವಾಸದಿಂದ ಕಾಣಿಕೆಗಳ ಭದ್ರತೆಗಾಗಿ, ಠೇವಣಿಯಿಟ್ಟವರ ಹಿತಕ್ಕಾಗಿ, ಸರ್ವಶಕ್ತ ಸರ್ವೇಶ್ವರನನ್ನು ಪ್ರಾರ್ಥನೆ ಮಾಡುತ್ತಾ ಇರುವಾಗ 23ಹೆಲೆಯೋಡೊರಸನು ತನ್ನ ನಿರ್ಧರಿತ ಯೋಜನೆಯನ್ನು ಈಡೇರಿಸತೊಡಗಿದನು. 24ಅವನು ಅಂಗರಕ್ಷಕರೊಂದಿಗೆ ಖಜಾನೆಯೊಳಕ್ಕೆ ಬಂದಾಕ್ಷಣವೇ, ಆಧ್ಯಾತ್ಮಿಕ ಶಕ್ತಿಗಳ ಒಡೆಯರಾದ ಸರ್ವೇಶ್ವರ ನೀಡಿದ ದರ್ಶನದ ಪರಿಣಾಮವಾಗಿ ಹೆಲೆಯೋಡೊರಸನೊಂದಿಗೆ ಪ್ರವೇಶಿಸಿದವರೆಲ್ಲ ಭಯಭ್ರಾಂತರಾದರು, ನಿಬ್ಬೆರಗಾದರು! 25ಆ ದರ್ಶನದಲ್ಲಿ ಒಂದು ಕುದುರೆಯೂ ಅದರ ಸವಾರನೂ ಕಾಣಿಸಿಕೊಂಡನು. ಕುದುರೆಯ ಲಗಾಮು ಅಪೂರ್ವ ವಸ್ತುಗಳಿಂದ ಅಲಂಕೃತವಾಗಿದ್ದು, ಸವಾರನು ಬಂಗಾರದ ವಜ್ರಕವಚವನ್ನು ತೊಟ್ಟಿದ್ದನು. ದೃಶ್ಯವು ನಿಜಕ್ಕೂ ಭಯಂಕರವಾಗಿತ್ತು! ಇದ್ದಕ್ಕಿದ್ದಂತೆ ಆ ಕುದುರೆ, ಹೆಲೆಯೋಡೊರಸನ ಕಡೆಗೆ ನುಗ್ಗಿ ಮುಂಗಾಲಿನಿಂದ ಒದೆಯಿತು. 26ಹೆಲೆಯೋಡೊರಸನು ಇಬ್ಬರು ಬಲಾಢ್ಯ ಹಾಗು ಆಕರ್ಷಕ ಯುವಕರನ್ನು ಕಂಡನು. ಅವರು ಅಮೂಲ್ಯವಾದ ನಾರುಮಡಿಯನ್ನು ಧರಿಸಿಕೊಂಡಿದ್ದರು. ಅವರಲ್ಲಿ ಒಬ್ಬನು ಬಲಗಡೆಯಲ್ಲೂ ಮತ್ತೊಬ್ಬನು ಎಡಗಡೆಯಲ್ಲೂ ನಿಂತುಕೊಂಡು ಹೆಲೆಯೋಡೊರಸನನ್ನು ನಿರ್ದಯೆಯಿಂದ ಹೊಡೆದು ಅತಿಯಾಗಿ ಘಾಯಗೊಳಿಸಿದರು. 27ತಕ್ಷಣವೇ ಅವನು ನೆಲದ ಮೇಲೆ ಬಿದ್ದು ಮೂರ್ಛೆಹೋದನು. 28ಅವನ ಜನರು ಬಂದು ಅವನನ್ನು ಹಾಸಿಗೆಯಲ್ಲಿ ಹೊತ್ತುಕೊಂಡು ಹೋದರು. ಸ್ವಲ್ಪ ಹೊತ್ತಿಗೆ ಮುಂಚೆಯೇ ಜನರ ದೊಡ್ಡ ಗುಂಪಿನೊಂದಿಗೆ, ಅಂಗರಕ್ಷಕರ ಜೊತೆಯಲ್ಲೇ ರಾಜಾರೋಷವಾಗಿ ಖಜಾನೆಯ ಕೋಣೆಯನ್ನು ಪ್ರವೇಶಿಸಿದ ಹೆಲೆಯೋಡೊರಸನು, ಈಗ ನಿಸ್ಸಹಾಯಕನಾಗಿ ಹಾಸಿಗೆಯಲ್ಲಿ ಕೊಂಡೊಯ್ಯಲ್ಪಟ್ಟನು. ದೇವರ ಮಹಿಮಾಶಕ್ತಿ ಎಂತಹುದೆಂದು ಅವರೆಲ್ಲರಿಗೆ ವೇದ್ಯವಾಯಿತು!

### ಹೆಲೆಯೋಡೊರಸನಿಗಾಗಿ ಓನೀಯನ ಪ್ರಾರ್ಥನೆ

29 ಹೆಲೆಯೋಡೊರಸನಿಗೆ ಮಾತಾಡಲು ಅಸಾಧ್ಯವಾಗಿತ್ತು. ಪುನಶ್ಚೇತನಗೊಳ್ಳುವ ನಿರೀಕ್ಷೆಯೇ ಇರಲಿಲ್ಲ. ದೇವರ ಶಕ್ತಿಪ್ರದರ್ಶನ ಅಷ್ಟು ಪ್ರಬಲವಾಗಿತ್ತು! 30ಹೀಗೆ ಸರ್ವಶಕ್ತ ದೇವರು ತಮ್ಮ ಪವಿತ್ರಾಲಯವನ್ನು ಸಂರಕ್ಷಿಸಿದರು; ಕೆಲವೇ ನಿಮಿಷಗಳಿಗೆ ಮುಂಚೆ ಭಯವೂ ಭ್ರಮೆಯೂ ತುಂಬಿದ ವಾತಾವರಣದಲ್ಲಿ ಸಂತೋಷವನ್ನೂ ಸಂತೃಪ್ತಿಯನ್ನೂ ತಂದರು. ಇದಕ್ಕಾಗಿ ಯೆಹೂದ್ಯರು ಆ ಸರ್ವಶಕ್ತ ದೇವರನ್ನು ಹಾಡಿ ಹೊಗಳಿದರು. 31ಹೆಲೆಯೋಡೊರಸನ ಕೆಲವು ಸ್ನೇಹಿತರು ಓನೀಯನ ಬಳಿಗೆ ಬಂದು, ಮರಣದ ದವಡೆಯಲ್ಲಿದ್ದ ಆ ಮನುಷ್ಯನ ಪ್ರಾಣವನ್ನು ರಕ್ಷಿಸುವಂತೆ ದೇವರಲ್ಲಿ ಪ್ರಾರ್ಥಿಸಬೇಕೆಂದು ವಿನಂತಿಸಿದರು. 32ಅಂತೆಯೇ ದೇವರು ಹೆಲೆಯೋಡೊರಸನನ್ನು ಕಾಪಾಡಬೇಕೆಂದು ಓನೀಯನು ಬಲಿಯನ್ನು ಅರ್ಪಿಸಿದನು. ಯೆಹೂದ್ಯರು ಕುತಂತ್ರದಿಂದ ಹೆಲೆಯೋಡೊರಸನನ್ನು ಸಾಯಿಸಲು ಪ್ರಯತ್ನಿಸಿದರೆಂದು ರಾಜನು ಶಂಕಿಸಬಾರದೆಂದು ಹಾಗೆ ಮಾಡಿದನು. 33ಪ್ರಧಾನಯಾಜಕನು ಪರಿಹಾರ ಬಲಿಯನ್ನು ಅರ್ಪಿಸುತ್ತಿದ್ದಾಗ, ಪುನಃ ಅದೇ ಯುವಕರು ಅದೇ ತರಹದ ಬಟ್ಟೆಯನ್ನು ಧರಿಸಿಕೊಂಡು, ಹೆಲೆಯೋಡೊರಸನಿಗೆ ದರ್ಶನವಿತ್ತರು. ಅವರು ಅವನಿಗೆ, "ಪ್ರಧಾನ ಯಾಜಕ ಓನೀಯನಿಗೆ ಕೃತಜ್ಞತೆಯನ್ನು

ಸಲ್ಲಿಸು; ಕಾರಣ – ಆತನ ನಿಮಿತ್ತವೇ ಸರ್ವೇಶ್ವರ ನಿನಗೆ ಪ್ರಾಣದಾನ ಮಾಡಿದ್ದಾರೆ. 34ನಿನ್ನನ್ನು ಶಿಕ್ಷಿಸಿದವರು ಸ್ವರ್ಗೀಯ ದೇವರು; ಈಗ ಅವರ ಮಹೋನ್ನತ ಶಕ್ತಿಯನ್ನು ಎಲ್ಲಾ ಜನರಿಗೆ ಸಾರು," ಎಂದು ಹೇಳಿ ಅದೃಶ್ಯರಾದರು.

### ಹೆಲೆಯೋಡೊರಸನಿಂದ ಧನ್ಯವಾದ

35 ಅನಂತರ ಹೆಲೆಯೋಡೊರಸನು ಸರ್ವೇಶ್ವರನಿಗೆ ಬಲಿಯನ್ನು ಅರ್ಪಿಸಿದನು. ತನ್ನ ಜೀವವನ್ನು ಕಾಪಾಡಿದ ಆ ಉದ್ಧಾರಕನಿಗೆ ದೊಡ್ಡ ಹರಕೆಗಳನ್ನು ಹೊತ್ತನು. ಓನೀಯನನ್ನು ಬೀಳ್ಕೊಟ್ಟು ತನ್ನ ಸೈನ್ಯದೊಂದಿಗೆ ಅರಸನ ಬಳಿಗೆ ಹಿಂದಿರುಗಿದನು. 36ಸ್ವತಃ ಕಣ್ಣಾರೆ ಕಂಡ ಮಹೋನ್ನತ ದೇವರ ಕಾರ್ಯಗಳನ್ನು ಕುರಿತು ಜನರಿಗೆ ವರದಿಮಾಡಿದನು.

37 "ಮತ್ತೊಂದು ನಿಯೋಗವನ್ನು ಜೆರುಸಲೇಮಿಗೆ ಕಳುಹಿಸುವುದಕ್ಕೆ ಯಾವ ವ್ಯಕ್ತಿ ಅರ್ಹನಾಗಿರಬಹುದು?" ಎಂದು ಅರಸನು ವಿಚಾರಿಸಿದನು. ಅದಕ್ಕೆ ಹೆಲೆಯೋಡೊರಸನು, 38"ನಿಮಗೆ ಶತ್ರುವಾಗಲೀ, ನಿಮ್ಮ ರಾಜ್ಯಾಡಳಿತಕ್ಕೆ ವಿರುದ್ಧ ದಂಗೆಯೆದ್ದ ವ್ಯಕ್ತಿಯಾಗಲೀ ಇದ್ದರೆ, ಅಂಥವನನ್ನು ಅಲ್ಲಿಗೆ ಕಳುಹಿಸಿರಿ; ಅವನು ಸಂಪೂರ್ಣವಾಗಿ ಹೊಡೆತವನ್ನು ತಿಂದು ಹಿಂದಿರುಗುವನು; ಅದು ಸಹ ಹಿಂದಿರುಗಲು ಬದುಕಿದ್ದರೆ ಮಾತ್ರ. ಏಕೆಂದರೆ, ನಿಜವಾಗಿಯೂ ಆ ಸ್ಥಳದಲ್ಲಿ ಯಾವುದೋ ದೈವಿಕ ಶಕ್ತಿ ಇದೆ. 39ಸ್ವರ್ಗದಲ್ಲಿ ವಾಸವಾಗಿರುವಂಥ ದೇವರು ಆ ಸ್ಥಳವನ್ನು ಸ್ವತಃ ತಾವೇ ಕಾಪಾಡುತ್ತಿದ್ದಾರೆ; ನೆರವನ್ನು ನೀಡುತ್ತಿದ್ದಾರೆ; ಅದಕ್ಕೆ ಅಪಾಯ ಒಡ್ಡುವವರನ್ನು ಬಡಿದು ನಾಶಗೊಳಿಸುತ್ತಾರೆ," ಎಂದನು. 40ಹೆಲೆಯೋಡೊರಸನ ಯಾತ್ರೆಯ ಪರಿಣಾಮವಾಗಿ ದೇವಾಲಯದ ಖಜಾನೆ ಹೀಗೆ ಸುರಕ್ಷಿತವಾಯಿತು.

### ಸಿಮೋನನಿಂದ ದೂಷಣೆ

**4** ಮೊದಲೇ ಪ್ರಸ್ತಾಪಿಸಿದಂತೆ, (ದೇವಾಲಯದ ಹಣದ ಬಗ್ಗೆ ಅಪೊಲ್ಲೋನಿಯನಿಗೆ ವರದಿಮಾಡಿ ತನ್ನ ರಾಷ್ಟ್ರದ ಮೇಲೆ ಇಂಥ ಆಪತ್ತನ್ನು ಬರಮಾಡಿದ್ದ) ಸಿಮೋನನು ಓನೀಯನ ಮೇಲೆ ಮತ್ತೆ ಸುಳ್ಳು ಅಪರಾಧ ಹೊರಿಸಿದನು. ಹೆಲೆಯೋಡೊರಸನನ್ನು ಮಂಕು ಬಡಿಸಿ, ದುರಂತಕ್ಕೆ ಈಡಾಗುವಂತೆ ಮಾಡಿದವನು ಅವನೇ ಎಂದು ವಾದಿಸಿದನು. 2ನಗರಕ್ಕೆ ಎಷ್ಟೋ ಉಪಕಾರಗಳನ್ನು ಮಾಡಿದ್ದ, ತನ್ನ ಜನರನ್ನು ಕಾಪಾಡಿದ್ದ ಹಾಗು ನಿಯಮದ ಪಾಲನೆಯನ್ನು ಶ್ರದ್ಧೆಯಿಂದ ಜಾರಿಗೊಳಿಸಿದ್ದ ಓನೀಯನನ್ನು ರಾಜ್ಯಕ್ಕೆ ವಿರುದ್ಧನಾದ ದಂಗೆಕೋರನೆಂದು ದೂರಿದನು. 3ಅವನ ಹಗೆತನ ಯಾವ ಹಂತವನ್ನು ಮುಟ್ಟಿತೆಂದರೆ, ಸಿಮೋನನ ಆಪ್ತ ಕಾರಭಾರಿಗಳಲ್ಲೊಬ್ಬನು ಕೆಲವು ಕೊಲೆಗಳನ್ನು ಸಹ ಮಾಡಿದ್ದನು. 4ಪರಿಸ್ಥಿತಿ ಗಂಭೀರವಾಗಿದೆ ಎಂದು ಓನೀಯನು ಅರಿತುಕೊಂಡನು. ಸೆಲೆಸಿರಿಯಾ ಮತ್ತು ಫೆನೀಷಿಯಾದ ರಾಜ್ಯಪಾಲನಾದ ಅಪೊಲ್ಲೋನಿಯುಸ್ ಸಿಮೋನನ ದುಷ್ಟತನವನ್ನು ಪ್ರಚೋದಿಸಿದ್ದನು. 5ಆದುದರಿಂದ ಓನೀಯನು ರಾಜನ ಬಳಿಗೇ ಹೋದನು. ತನ್ನ ಸಹಪ್ರಜೆಗಳ ವಿರುದ್ಧ ದೂರು ಕೊಡುವುದಕ್ಕಲ್ಲ. ಬದಲಿಗೆ ಜನಸಾಮಾಯರ ಸಾಮಾಜಿಕ ಹಾಗೂ ವೈಯಕ್ತಿಕ ಕ್ಷೇಮವನ್ನು ಕಾಪಾಡುವುದಕ್ಕೆಂದೇ ಹೋದನು. 6ಅರಸನ ಮಧ್ಯಸ್ಥಿಕೆಯಿಲ್ಲದೆ, ಆಡಳಿತ ವ್ಯವಹಾರ ಶಾಂತಿಯುತ ರೀತಿಯಲ್ಲಿ ನಡೆಯಲು ಸಾಧ್ಯವಿಲ್ಲವೆಂದೂ ಸಿಮೋನನು ತನ್ನ ಹುಚ್ಚು ಕೆಲಸವನ್ನು ನಿಲ್ಲಿಸಲಾರನೆಂದೂ ಅವನು ಮನಗಂಡಿದ್ದನು.

### ಅನ್ಯಧರ್ಮೀಯರ ಸಂಪ್ರದಾಯಗಳ ಆಚರಣೆ

7 ಸ್ವಲ್ಪಕಾಲದ ನಂತರ ಸೆಲ್ಯೂಕಸ್ ಅರಸನು ಸತ್ತುಹೋದನು. ಎಪಿಫನೆಸ್ ಎಂದು ಕರೆಯಲಾದ ಅಂತಿಯೋಕನು ರಾಜ್ಯದ ಗದ್ದುಗೆಯನ್ನೇರಿದನು; ಓನೀಯನ ಸಹೋದರ ಯಾಸೋನನು ಭ್ರಷ್ಟಾಚಾರದಿಂದ ಪ್ರಧಾನಯಾಜಕನಾದನು. 8ಅದಕ್ಕಾಗಿ ಅವನು ರಾಜನ ಬಳಿಗೆ ಹೋಗಿ 12,000 ಕಿಲೋಗ್ರಾಂ ಬೆಳ್ಳಿಯನ್ನು ಸದ್ಯಕ್ಕೆ ಲಂಚವಾಗಿ ಕೊಟ್ಟು, ಸ್ವಲ್ಪ ಕಾಲದ ನಂತರ ಇನ್ನೂ 5,000 ಕಿಲೋಗ್ರಾಂ ಬೆಳ್ಳಿಯನ್ನು ಕೊಡುವುದಾಗಿ ವಾಗ್ದಾನ ಮಾಡಿದ್ದನು. 9ಇದಲ್ಲದೆ ಒಂದು ವ್ಯಾಯಾಮ ಶಾಲೆಯನ್ನೂ

ಅದರಲ್ಲಿ ತರಪೇತು ಪಡೆಯಲು ಒಂದು ಯುವಕರ ಸಂಘವನ್ನೂ ಸ್ಥಾಪಿಸುವುದಕ್ಕೆ ಹಾಗೂ ಜೆರುಸಲೇಮಿನ ಯುವಕರು 'ಅಂತಿಯೋಕದ ಪ್ರಜೆ' ಎಂದು ದಾಖಲು ಮಾಡುವುದಕ್ಕೆ ರಾಜನಿಂದ ಅಪ್ಪಣೆ ದೊರೆತರೆ ಇನ್ನೂ 5,000 ಕಿಲೋಗ್ರಾಂ ಬೆಳ್ಳಿಯನ್ನು ಕೊಡುವುದಾಗಿಯೂ ಮಾತು ಕೊಟ್ಟಿದ್ದನು.

10 ಅರಸನು ಒಪ್ಪಿಗೆಯನ್ನು ನೀಡಿದ ಕೂಡಲೆ ಯಾಸೋನನು ಅಧಿಕಾರವನ್ನು ವಹಿಸಿಕೊಂಡು, ಯೆಹೂದ್ಯರು ಗ್ರೀಕ್ ಪದ್ಧತಿಯನ್ನು ಅನುಸರಿಸಬೇಕೆಂದು ಒತ್ತಾಯಪಡಿಸಿದನು. 11ರೋಮನರೊಂದಿಗೆ ಸಂಧಾನ ಮಾಡುವ ರಾಯಭಾರವನ್ನು ವಹಿಸಿಕೊಂಡಿದ್ದ ಯುಪೊಲೇಮಸನ ಮಗ ಯೊವಾನ್ನನು ಯೆಹೂದ್ಯರಿಗೆ ಹಿತಕರವಾದ ಶಾಸನವನ್ನು ಪಡೆದಿದ್ದನು, ಹಾಗು ಅದನ್ನು ಜಾರಿಗೆ ತಂದಿದ್ದನು. ಇದನ್ನೆಲ್ಲಾ ಈ ಯಾಸೋನನು ರದ್ದುಗೊಳಿಸಿ, ಧರ್ಮಾನುಸಾರವಾದ ರೀತಿನೀತಿಗಳನ್ನು ಬಿಟ್ಟು, ಧರ್ಮಶಾಸ್ತ್ರಕ್ಕೆ ವಿರುದ್ಧವಾದ ಹೊಸ ಆಚರಣೆಗಳನ್ನು ಜಾರಿಗೆ ತಂದನು. 12ಕೋಟೆಯ ಪಕ್ಕದಲ್ಲೇ ಒಂದು ವ್ಯಾಯಾಮ ಶಾಲೆಯೊಂದನ್ನು ಕಟ್ಟಿಸಿದನು; ಅತಿ ಕುಲೀನ ಯೆಹೂದ್ಯ ಯುವಕರು ಗ್ರೀಕರ ಟೋಪಿ ಹಾಕಿಕೊಳ್ಳುವಂತೆ ಪ್ರಚೋದಿಸಿದನು. 13ಹೀಗೆ ವಿಶ್ವಾಸರಹಿತನು ಹಾಗೂ ಪ್ರಧಾನ ಯಾಜಕನೂ ಆಗಿದ್ದ ಯಾಸೋನನು ಮಿತಿಮೀರಿದ ಹೊಲೆಗೆಲಸಕ್ಕೆ ಕಾರಣನಾದನು. ಗ್ರೀಕರ ಸಂಸ್ಕೃತಿ ಹೆಚ್ಚಾಗಿ ಪರಕೀಯರ ಅನುಕರಣೆ ಬೆಳೆಯುತ್ತಾ ಬಂದಿತು. 14ಇದರಿಂದಾಗಿ ಯಾಜಕರಿಗೆ ಪೀಠ ಸೇವೆಯಲ್ಲಿ ಆಸಕ್ತಿಯೇ ಇರಲಿಲ್ಲ. ಮಹಾದೇವಾಲಯವನ್ನು ತಾತ್ಸಾರಮಾಡಿ, ಬಲಿದಾನಗಳ ಚಿಂತೆಯನ್ನೇ ಬಿಟ್ಟು, ಎಸೆಚಕ್ರದ ಪಂದ್ಯಕ್ಕೆ ಸೂಚನಾ ಘಂಟೆಯಾದ ತಕ್ಷಣ, ಕ್ರೀಡಾಂಗಣದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು, ನಿಷಿದ್ಧ ಎಣ್ಣೆಯನ್ನು ಸ್ವೀಕರಿಸಲು ಧಾವಿಸುತ್ತಿದ್ದರು. 15ಹೀಗೆ ಅವರ ಪೂರ್ವಜರು ಅಮೂಲ್ಯವೆಂದು ಪರಿಗಣಿಸುತ್ತಿದ್ದ ಎಲ್ಲವನ್ನೂ ಕಡೆಗಣಿಸಿ, ಗ್ರೀಕರ ಪ್ರತಿಷ್ಠಿತ ಪದ್ಧತಿಗಳೇ ಶ್ರೇಷ್ಠವೆಂದು ಎಣಿಸಿ ಅನುಸರಿಸುತ್ತಿದ್ದರು. 16ಈ ಕಾರಣದಿಂದ ಅವರ ಮೇಲೆ ಘೋರ ವಿಪತ್ತು ಬಂದೊದಗಿತು. ಯಾರ ಆಚಾರಗಳನ್ನು ಮೆಚ್ಚುತ್ತಿದ್ದರೋ, ಯಾರ ಪದ್ಧತಿಗಳನ್ನು ಅನುಕರಣೆ ಮಾಡಲು ಅಪೇಕ್ಷಿಸುತ್ತಿದ್ದರೋ, ಅವರೇ ಶತ್ರುಗಳಾಗಿ ಪರಿಣಮಿಸಿದರು, ಅವರೇ ಆ ಯೆಹೂದ್ಯರನ್ನು ಶಿಕ್ಷಿಸಲಾರಂಭಿಸಿದರು. 17ಏಕೆಂದರೆ ದೇವರ ಆಜ್ಞೆಗಳನ್ನು ತಾತ್ಸಾರಮಾಡುವುದು ಅಲ್ಪವಿಷಯವಲ್ಲ. ಇದನ್ನು ಈ ಕೆಳಕಂಡ ಘಟನೆಗಳು ಸ್ಪಷ್ಟೀಕರಿಸುವುವು:

### ಜೆರುಸಲೇಮಿನ ಮೇಲೆ ಸಿರಿಯನ್ನರ ಪ್ರಭಾವ

18 ನಾಲ್ಕು ವರ್ಷಗಳಿಗೊಮ್ಮೆ ಟೈರ್ ನಗರದಲ್ಲಿ ನಡೆಯುತ್ತಿದ್ದ ಕ್ರೀಡಾಕೂಟದಲ್ಲಿ ಒಮ್ಮೆ ಅರಸನೂ ಉಪಸ್ಥಿತನಿದ್ದನು. 19ಆಗ ದುಷ್ಟ ಯಾಸೋನನು ಕೆಲವು ಪ್ರತಿನಿಧಿಗಳನ್ನು ಕಳುಹಿಸಿದನು. ಈ ವ್ಯಕ್ತಿಗಳು ಹರ್ಕ್ಯುಲಿಸ್ ದೇವರಿಗೆ ಬಲಿಅರ್ಪಣೆ ಮಾಡುವುದಕ್ಕೆಂದು 10,000 ಕಿಲೋಗ್ರಾಂ ಬೆಳ್ಳಿನಾಣ್ಯಗಳನ್ನು ತೆಗೆದುಕೊಂಡು ಹೋಗಿದ್ದರು. ಆ ಜೆರುಸಲೇಮಿನವರನ್ನು 'ಅಂತಿಯೋಕದ ಪ್ರಜೆ'ಗಳೆಂದು ದಾಖಲು ಮಾಡಲಾಗಿತ್ತು. ಹಣವನ್ನು ತೆಗೆದುಕೊಂಡು ಹೋದವರಾದರೋ ಬಲಿಯರ್ಪಣೆಗೆ ಅದನ್ನು ಉಪಯೋಗಿಸಲು ಅನುಚಿತವೆಂದೆಣಿಸಿ ಬೇರೊಂದು ಉದ್ದೇಶಕ್ಕಾಗಿ ಬಳಸಲೆತ್ನಿಸಿದರು. 20ಹಣವನ್ನು ಕಳುಹಿಸಿದವನು ಹರ್ಕ್ಯುಲಿಸ್ ದೇವರಿಗೆ ಬಲಿ ಅರ್ಪಿಸುವುದಕ್ಕೆಂದು ಉದ್ದೇಶಿಸಿದ್ದರೂ, ತೆಗೆದುಕೊಂಡು ಹೋದವರು ಅದರಿಂದ ಯುದ್ಧದ ಹಡಗುಗಳನ್ನು ತಯಾರಿಸುವುದು ಸೂಕ್ತವೆಂದು ನಿರ್ಧರಿಸಿದರು.

21 ಫಿಲೋಮಿಟರ್ ಎಂಬವನಿಗೆ ರಾಜನಾಗಿ ಕಿರೀಟಧಾರಣೆಯಾಗುವ ಸಮಾರಂಭದಲ್ಲಿ ಭಾಗಿಯಾಗಲು ಮೆನೆಸ್ಥೆಯುಸನ ಮಗ ಅಪೊಲ್ಲೋನಿಯನು ಈಜಿಪ್ಟಿಗೆ ಕಳುಹಿಸಲ್ಪಟ್ಟನು; ಫಿಲೋಮಿಟರನು ತನ್ನ ಆಳ್ವಿಕೆಗೆ ವಿರೋಧಿಯಾಗಿದ್ದಾನೆಂದು ಅಂತಿಯೋಕನು ತಿಳಿದು, ತನ್ನ ಸುರಕ್ಷತೆಗಾಗಿ ಸೂಕ್ತ ಕ್ರಮವನ್ನು ಕೈಗೊಂಡನು. ಆದುದರಿಂದ ಅವನು ಮೊದಲು ಜೊಪ್ಪಕ್ಕೆ ಅನಂತರ ಜೆರುಸಲೇಮಿಗೆ ಪ್ರಯಾಣ ಮಾಡಿದನು. 22ಯಾಸೋನನೂ ನಗರದ ಜನರೂ ಅವನಿಗೆ ಆಡಂಬರವಾದ ಸ್ವಾಗತವನ್ನು ನೀಡಿದರು; ದೀವಟಿಗೆಗಳನ್ನು ಹಿಡಿದುಕೊಂಡು ಜಯಘೋಷ ಮಾಡಿದರು. ಜೆರುಸಲೇಮಿನಿಂದ ಅಂತಿಯೋಕನು ತನ್ನ ಸೈನ್ಯದೊಂದಿಗೆ ಫೆನೀಷಿಯಕ್ಕೆ ಹೋದನು.

## ಪ್ರಧಾನ ಯಾಜಕನಾಗಿ ಮೆನೆಲಾವ್ಸ್

23 ಮೂರು ವರ್ಷಗಳಾದ ನಂತರ, ಈ ಮೊದಲೇ ಪ್ರಸ್ತಾಪಿಸಲಾದ ಸಿಮೋನ್ ಎಂಬವನ ಸಹೋದರ ಮೆನೆಲಾವ್ಸನನ್ನು ಯಾಸೋನನು ರಾಜನ ಬಳಿಗೆ ಕಳುಹಿಸಿದನು. ಅತೀ ಮುಖ್ಯವಾದ ವಿಷಯಗಳ ಬಗ್ಗೆ ರಾಜನಿರ್ಣಯವನ್ನು ತಿಳಿದು ಬರುವುದಕ್ಕಾಗಿಯೂ ರಾಜನಿಗೆ ಸಲ್ಲಿಸಬೇಕಾಗಿದ್ದ ಹಣವನ್ನು ಸಲ್ಲಿಸುವುದಕ್ಕಾಗಿಯೂ ಅವನನ್ನು ಕಳುಹಿಸಿದನು. 24ಮೆನೆಲಾವ್ಸನು ರಾಜನ ಮುಂದೆ ನಿಂತು ಅಧಿಕಾರ ದರ್ಪದಿಂದ ಅವನನ್ನು ಹೊಗಳಿ, ಯಾಸೋನನು ಕೊಟ್ಟಿದ್ದಕ್ಕಿಂತ ಹೆಚ್ಚಾಗಿ 10,000 ಕಿಲೋಗ್ರಾಂ ಬೆಳ್ಳಿನಾಣ್ಯವನ್ನು ಕೊಟ್ಟನು. ಇದರ ಪರಿಣಾಮವಾಗಿ, ಪ್ರಧಾನ ಯಾಜಕನ ಪದವಿಯನ್ನು ರಾಜನಿಂದ ದಕ್ಕಿಸಿಕೊಂಡನು. 25ರಾಜಾಜ್ಞೆಯನ್ನು ಪಡೆದಮೇಲೆ, ಪ್ರಧಾನ ಯಾಜಕತ್ವಕ್ಕೆ ಯಾವ ಅರ್ಹತೆಯೂ ಇಲ್ಲದೆ ಕೇವಲ ದಬ್ಬಾಳಿಕೆಯ ದೊರೆಯಂತೆ ಹಾಗೂ ಕಾಡುಮೃಗದ ಕ್ರೂರತ್ವದೊಂದಿಗೆ ಹಿಂದಿರುಗಿದನು. 26ಹೀಗೆ ತನ್ನ ಸ್ವಂತ ಸಹೋದರನನ್ನೇ ಪದಚ್ಯುತಿಗೊಳಿಸಿದ ಯಾಸೋನನು, ತಾನೇ ಇನ್ನೊಬ್ಬನಿಂದ ಪದಚ್ಯುತಿ ಹೊಂದಿದನು. ಅವನು ಅಮ್ಮೋನಿಯರ ದೇಶಕ್ಕೆ ಹೋಗಿ ಆಶ್ರಯ ಪಡೆಯಬೇಕಾಯಿತು. 27ಮೆನೆಲಾವ್ಸನು ಪ್ರಧಾನ ಯಾಜಕನಾಗಿ ಮುಂದುವರೆದರೂ, ರಾಜನಿಗೆ ವಾಗ್ದಾನ ಮಾಡಿದ ಹಣವನ್ನು ಸರಿಯಾಗಿ ಪಾವತಿ ಮಾಡಲಿಲ್ಲ. 28ಕೋಟೆಯ ದಳವಾಯಿಯಾಗಿದ್ದ ಸೊಸ್ರಾತನು ಹಣವನ್ನು ತೀರಿಸಬೇಕೆಂದು ಪದೇಪದೇ ಕೇಳುತ್ತಿದ್ದನು; ಕಾರಣ, ಕಂದಾಯ ವಸೂಲಿಯ ಜವಾಬ್ದಾರಿ ಅವನದಾಗಿತ್ತು. ಈ ಹಗರಣದಿಂದಾಗಿ ಅವರು ಇಬ್ಬರೂ ರಾಜನ ಮುಂದೆ ಬರಬೇಕೆಂದು ಆಜ್ಞೆಯಾಯಿತು. 29ಮೆನೆಲಾವ್ಸನು ತನ್ನ ಸಹೋದರ ಲಿಸಿಮಾಕಸನನ್ನು ತಾತ್ಕಾಲಿಕ ಪ್ರಧಾನಯಾಜಕತ್ವಕ್ಕೆ ನೇಮಿಸಿದನು; ಅಂತೆಯೇ ಸೊಸ್ರಾತನು ಸೈಪ್ರಸ್ಸಿನ ಕೂಲಿಪಡೆಗಳ ನಾಯಕನಾಗಿದ್ದ ಕ್ರೇಟನನ್ನು ತನ್ನ ಸ್ಥಾನದಲ್ಲಿರಿಸಿದನು.

## ಓನೀಯನ ಕೊಲೆ

30 ಪರಿಸ್ಥಿತಿ ಹೀಗಿರುವಲ್ಲಿ, ಸಿಲಿಸಿಯಾದ ಟಾರ್ಸಸ್ ಮತ್ತು ಮಾಲ್ಲಸ್ ನಗರದ ಜನರು ದಂಗೆಯೆದ್ದರು. ಕಾರಣ ಈ ನಗರಗಳನ್ನು ಅರಸನ ಉಪಪತ್ನಿಯಾಗಿದ್ದ ಅಂತಿಯೋಕಿಸಳಿಗೆ ಉಡುಗೊರೆಯಾಗಿ ಕೊಡಲಾಗಿತ್ತು. 31ಆದುದರಿಂದ ಅರಸನು ಉನ್ನತ ಅಧಿಕಾರಿಗಳಲ್ಲೊಬ್ಬನಾದ ಅಂದ್ರೋನಿಕಸನನ್ನು ಆಸ್ಥಾನದಲ್ಲಿರಿಸಿ, ಸಮಸ್ಯೆಯನ್ನು ಬಗೆಹರಿಸಲು ಸಿಲಿಸಿಯಾಕ್ಕೆ ಧಾವಿಸಿದನು. 32ಮೆನೆಲಾವ್ಸನು ಈ ಅವಕಾಶವನ್ನು ಬಳಸಿಕೊಂಡು ದೇವಾಲಯದಿಂದ ಕೆಲವು ಚಿನ್ನದ ಪಾತ್ರೆಗಳನ್ನು ಕದ್ದು ಅಂದ್ರೋನಿಕಸನಿಗೆ ಉಡುಗೊರೆಯಾಗಿಕೊಟ್ಟನು. ಈಗಾಗಲೇ ಹಲವು ಪಾತ್ರೆಗಳನ್ನು ಟೈರ್ ಮತ್ತು ಇತರ ನಗರಗಳಿಗೆ ಕೊಟ್ಟುಬಿಟ್ಟಿದ್ದನು. 33ಓನಿಯನು ಇದರ ಕುರಿತು ತಿಳಿದಾಗ ಅಂತಿಯೋಕದ ಬಳಿಯಿದ್ದ ದಾಫ್ನೆ ದೇವಾಲಯದಲ್ಲಿ ಆಶ್ರಯಪಡೆದು, ಮೆನೆಲಾವ್ಸನ ಕೃತ್ಯಗಳನ್ನು ಬಹಿರಂಗವಾಗಿ ಹೊರಗೆಡಹಿದನು. 34ಆಗ ಮೆನೆಲಾವ್ಸನು ಅಂದ್ರೋನಿಕಸನನ್ನು ಗುಟ್ಟಾಗಿ ಕರೆಸಿ, ಓನೀಯನನ್ನು ಕೊಲ್ಲಬೇಕೆಂದು ಒತ್ತಾಯಿಸಿದನು. ಅಂದ್ರೋನಿಕಸನು ಓನೀಯನ ಬಳಿಗೆ ಬಂದು ವಂಚನೆಯಿಂದ ಪ್ರಮಾಣ ಮಾಡಿ, ಬಲಗೈಯಿಂದ ಓನೀಯನ ಕೈಕುಲುಕಿದನು. ಓನಿಯನು ಸಂಶಯ ಪಟ್ಟರೂ ಅವನನ್ನು ಪವಿತ್ರಾಲಯದಿಂದ ಹೊರ ಬರುವಂತೆ ಮಾಡಿ, ನ್ಯಾಯನೀತಿ ಎಂಬುದಕ್ಕೆ ಎಳ್ಳಷ್ಟೂ ಬೆಲೆಕೊಡದೆ ಒಂದೇ ಸಾರಿಗೆ ಹೊಡೆದು ಅವನನ್ನು ಕೊಂದು ಹಾಕಿದನು.

## ಅಂದ್ರೋನಿಕಸನಿಗಾದ ಶಿಕ್ಷೆ

35 ಈ ಕಾರಣದಿಂದಾಗಿ, ಯೆಹೂದ್ಯರು ಮಾತ್ರವಲ್ಲ, ಅನೇಕ ಇತರ ರಾಷ್ಟ್ರಗಳವರು ಸಹ ಅನ್ಯಾಯವಾಗಿ ಹತನಾದ ಆ ಮನುಷ್ಯನ ಬಗ್ಗೆ ವ್ಯಥೆಪಟ್ಟರು, ಮತ್ತು ತೀವ್ರ ಕಳವಳವನ್ನು ವ್ಯಕ್ತಪಡಿಸಿದರು. 36ಅರಸನು ಸಿಲಿಸಿಯಾ ಪ್ರಾಂತ್ಯದಿಂದ ಹಿಂದಿರುಗಿದಾಗ ಓನೀಯನ ನಿಷ್ಕಾರುಣ್ಯ ಕೊಲೆಯ ವಿಷಯವಾಗಿ ನಗರದ ಯೆಹೂದ್ಯರು ಅವನ ಮೊರೆಹೊಕ್ಕರು. ಗ್ರೀಕರು ಸಹ ಈ ಅಪರಾಧವನ್ನು ಬಹುವಾಗಿ ಖಂಡಿಸಿದರು. 37ಆದುದರಿಂದ ಅಂತಿಯೋಕನು ಮನನೊಂದನು, ಕನಿಕರಪಟ್ಟನು. ಮೃತನಾದವನ ಸನ್ನಡತೆ ಹಾಗು ಸಂಯಮವನ್ನು ಸ್ಮರಿಸಿಕೊಂಡು ಕಣ್ಣೀರು ಸುರಿಸಿದನು. 38ಅನಂತರ ಕೋಪದಿಂದ ಕೆರಳಿ

ಅಂದ್ರೋನಿಕಸನ ರಾಜವಸ್ತ್ರವನ್ನು ಬಲವಂತದಿಂದ ಕಿತ್ತು, ಹರಿದುಹಾಕಿದನು. ಬೆತ್ತಲೆಯಾಗಿ ಊರಿನ ಬೀದಿಗಳಲ್ಲಿ ಅವನನ್ನು ಮೆರವಣಿಗೆ ಮಾಡಿಸಿ, ಓನೀಯನ ಘೋರಕೊಲೆಯಾದ ಸ್ಥಳದಲ್ಲೇ ಅವನನ್ನು ಕೊಂದುಹಾಕಿದನು. ಹೀಗೆ ಸರ್ವೇಶ್ವರ ಅವನಿಗೆ ಶಿಕ್ಷೆಯನ್ನು ವಿಧಿಸಿದರು.

**ಲಿಸಿಮಾಕನ ಕೊಲೆ**

39 ಏತನ್ಮಧ್ಯೆ ತನ್ನ ಸಹೋದರ ಮೆನೆಲಾವ್ಸನ ಬೆಂಬಲದಿಂದ ಜೆರುಸಲೇಮಿನ ಮಹಾ ದೇವಾಲಯದಲ್ಲಿ ಲಿಸಿಮಾಕನು, ಅನೇಕಸಾರಿ ದರೋಡೆ ಮಾಡಿದ್ದನು; ಹಲವಾರು ಚಿನ್ನದ ಪಾತ್ರೆಗಳು ನಾಪತ್ತೆ ಆಗಿದ್ದವು. ಈ ಸಮಾಚಾರ ಎಲ್ಲಾ ಕಡೆ ಹರಡಿತ್ತು. ಲಿಸಿಮಾಕನ ವಿರುದ್ಧ ಪ್ರತಿಭಟನೆ ಸೂಚಿಸಲು ಜನರು ಗುಂಪು ಸೇರಿದರು. 40ಕೋಪೋದ್ರೇಕಗೊಂಡ ಜನರನ್ನು ಹತೋಟಿಗೆ ತರಲು ಅಸಾಧ್ಯವಾಗಿತ್ತು. ಪರಿಸ್ಥಿತಿ ಗಂಭೀರವಾಗಿರಲು, ಜನರ ಮೇಲೆ ಮುತ್ತಿಗೆ ಹಾಕಲು ಲಿಸಿಮಾಕನು 3,000 ಸುಸಜ್ಜಿತ ಜನರನ್ನು ಕಳುಹಿಸಿದನು. ಅವರಿಗೆ ಅವ್ರಾನಸ್ ಎಂಬವನನ್ನು ನಾಯಕನಾಗಿ ನೇಮಿಸಲಾಗಿತ್ತು. ಅವ್ರಾನಸನಿಗೆ ವಯಸ್ಸಾಗಿತ್ತು. ಅವನು ಅಷ್ಟೇ ಮೂರ್ಖನು ಸಹ. 41ಲಿಸಿಮಾಕನು ತಮ್ಮ ಮೇಲೆ ಧಾಳಿ ಮಾಡುತ್ತಿದ್ದಾನೆಂದು ಯೆಹೂದ್ಯರು ಅರಿತಾಗ, ಕೆಲವರು ಕಲ್ಲು ತೂರಿದರು, ಇನ್ನು ಕೆಲವರು ಮರದ ತುಂಡುಗಳನ್ನು ಎಸೆದರು. ಮತ್ತೆ ಕೆಲವರು ಬಲಿಪೀಠದಿಂದ ಬೂದಿಯನ್ನು ತೆಗೆದುಕೊಂಡು ಲಿಸಿಮಾಕನ ಹಾಗು ಅವನ ಸಂಗಡಿಗರ ಮೇಲೆ ಚೆಲ್ಲಿದರು. ಇದರಿಂದ ಅವರೆಲ್ಲರೂ ಗಲಿಬಿಲಿಗೊಂಡರು. 42ತತ್ಪರಿಣಾಮವಾಗಿ, ಅವರಲ್ಲಿ ಅನೇಕರನ್ನು ಗಾಯಗೊಳಿಸಿದರು, ಕೆಲವರನ್ನು ಕೊಂದುಹಾಕಿದರು, ಮಿಕ್ಕ ಎಲ್ಲರನ್ನೂ ಓಡಿಸಿಬಿಟ್ಟರು. ಮಹಾ ದೇವಾಲಯದಲ್ಲಿ ಕನ್ನ ಹಾಕಿದ ಲಿಸಿಮಾಕನನ್ನು ಅದರ ಖಜಾನೆಯ ಬಳಿಯೇ ಕೊಂದುಹಾಕಿದರು.

**ಮೆನೆಲಾವ್ಸನ ವಿಚಾರಣೆ**

43 ಈ ಘಟನೆಯ ಬಗ್ಗೆ ಮೆನೆಲಾವ್ಸನ ಮೇಲೆ ಮೊಕದ್ದಮೆಯನ್ನು ಹೂಡಲಾಯಿತು. 44ಅರಸನು ಟೈರಿಗೆ ಬಂದಾಗ ಅವನ ಮುಂದೆ ದೂರನ್ನು ಸಾಬೀತುಮಾಡಲು ಜೆರುಸಲೇಮಿನ ಶಾಸಕ ಸಭೆಯವರು ಮೂರು ಮಂದಿ ಜನರನ್ನು ಕಳುಹಿಸಿಕೊಟ್ಟರು. 45ಸೋಲುವುದೇನೋ ಖಂಡಿತವೆಂದು ಅರಿತ ಮೆನೆಲಾವ್ಸನು ಅರಸನ ಮೇಲೆ ಪ್ರಭಾವಬೀರಿ ಒಲಿಸಿಕೊಳ್ಳಲು ದೊರಿಮೇನೆಯ ಮಗ ಪ್ತೊಲೆಮೇಯನಿಗೆ ಭಾರೀ ಮೊತ್ತದ ಲಂಚವನ್ನು ಕೊಡುವುದಾಗಿ ಮಾತುಕೊಟ್ಟನು. 46ಪ್ತೊಲೆಮೇಯನು ತಂಗಾಳಿಯನ್ನು ಸೇವಿಸಲೆಂದು ನ್ಯಾಯಾಲಯದಿಂದ ರಾಜನನ್ನು ಹೊರಕ್ಕೆ ಕರೆತಂದು, ಅವನ ಮನಸ್ಸನ್ನು ಬದಲಾಯಿಸಲು ಪ್ರಯತ್ನಿಸಿದನು. ಮೆನೆಲಾವ್ಸನು ನಿರ್ದೋಷಿ ಎಂದು ತೀರ್ಪುನೀಡುವಂತೆ ಪುಸಲಾಯಿಸಿದನು. ಅಂತೆಯೇ ರಾಜನು, ಇಷ್ಟೆಲ್ಲಾ ದುಷ್ಕೃತ್ಯಗಳಿಗೆ ಕಾರಣಕರ್ತನಾಗಿದ್ದ ಮೆನೆಲಾವ್ಸನ ವಿರುದ್ಧ ಜನರು ಹೂಡಿದ್ದ ಮೊಕದ್ದಮೆಗಳನ್ನು ವಜಾಮಾಡಿ 47ಅವನಿಗೆ ವಿರುದ್ಧ ದೂರು ತಂದಿದ್ದ ಮೂವರು ಮಂದಿಯನ್ನೇ ಗಲ್ಲಿಗೇರಿಸಲು ನಿರ್ಣಯಿಸಿದನು. ದುರದೃಷ್ಟವಶಾತ್, ಆ ಮೂವರುಮಂದಿ ದುರ್ಮರಣಕ್ಕೊಳಗಾದರು. ಕ್ರೂರ, ಶೀತಿಯನ್ನರ ಬಳಿ ಅವರು ದೂರುಕೊಟ್ಟಿದ್ದರೂ ಜಯಶೀಲರಾಗಬಹುದಾಗಿತ್ತು. 48ನಗರದ ಪರವಾಗಿ, ಗ್ರಾಮಗಳ ಪರವಾಗಿ ಹಾಗು ದೇವಾಲಯದ ಪವಿತ್ರ ಪಾತ್ರೆಗಳ ಪರವಾಗಿ, ವಾದಿಸಿದ ಈ ಮೂವರಿಗೆ ಅನ್ಯಾಯವಾದ ಶಿಕ್ಷೆಯಾಯಿತು. 49ಟೈರಿನ ಜನರು ಕೂಡ ಅವರ ಶವಸಂಸ್ಕಾರವನ್ನು ಆಡಂಬರವಾಗಿ ಈಡೇರಿಸಲು ನೆರವು ನೀಡಿದರು; ಅವರಿಗಾದ ಅನ್ಯಾಯವನ್ನು ಖಂಡಿಸಿದರು. 50ಆದರೆ, ದುರಾಶೆಯುಳ್ಳ ಅಧಿಕಾರಿಗಳ ಬೆಂಬಲದಿಂದ ತನ್ನ ಸ್ಥಾನದಲ್ಲಿ ಭದ್ರವಾಗಿದ್ದ ಮೆನೆಲಾವ್ಸನು ದಿನೇದಿನೇ ದುಷ್ಟನಾಗಿ ಸ್ವಜನರ ಮುಖ್ಯ ಶತ್ರುವಾಗಿ ಮಾರ್ಪಟ್ಟನು.

### ವಿಚಿತ್ರವಾದ ಯುದ್ಧದರ್ಶನ

**5** ಆ ದಿನಗಳಲ್ಲಿ (ನಾಲ್ಕನೇ) ಅಂತಿಯೋಕನು ಈಜಿಪ್ಟಿನ ಮೇಲೆ ಎರಡನೇ ಬಾರಿ ದಾಳಿಮಾಡಿದನು.
2ಆಗ ಸುಮಾರು 40 ದಿನಗಳವರೆಗೂ ಜೆರುಸಲೇಮಿನ ಜನರು ವಿಚಿತ್ರವಾದ ದರ್ಶನಗಳನ್ನು ಕಂಡರು;
ಬಂಗಾರದ ವಸ್ತ್ರಗಳನ್ನು ಧರಿಸಿಕೊಂಡಿದ್ದ ಕುದುರೆಸವಾರರು ಕೈಗಳಲ್ಲಿ ಭರ್ಜಿಗಳನ್ನೂ ಕತ್ತಿಗಳನ್ನೂ
ಹಿಡಿದುಕೊಂಡು ಆಕಾಶದಲ್ಲಿ ಓಡಾಡುತ್ತಿದ್ದರು. 3ಆ ರಾಹುತರು ಗುರಾಣಿಗಳನ್ನು ಹಿಡಿದು, ಈಟಿಗಳನ್ನು
ಝಳಪಿಸುತ್ತಾ ಅತ್ತಿಂದ ಇತ್ತ, ಇತ್ತಿಂದ ಅತ್ತ ಓಡಾಡಿ ಕಾಳಗ ಮಾಡುತ್ತಿದ್ದರು. ಅವರ ಶಸ್ತ್ರಗಳು
ವಿವಿಧವಾಗಿದ್ದವು. ಕುದುರೆಗಳ ಲಗಾಮುಗಳು ಚಿನ್ನದ್ದಾಗಿದ್ದವು. 4ಈ ದರ್ಶನಗಳು ಶುಭಶಕುನವಾಗಲೆಂದು
ಪ್ರತಿಯೊಬ್ಬರು ಪ್ರಾರ್ಥನೆ ಮಾಡುತ್ತಿದ್ದರು.

### ಜೆರುಸಲೇಮಿಗೆ ಯಾಸೋನನ ಮುತ್ತಿಗೆ

5 ಆಗ ಅಂತಿಯೋಕನು ಸತ್ತನೆಂದು ಸುಳ್ಳು ಸಮಾಚಾರ ಹರಡಿತು. ಯಾಸೋನನು ಸುಮಾರು
ಒಂದು ಸಾವಿರ ಸೈನಿಕರೊಂದಿಗೆ ಜೆರುಸಲೇಮಿಗೆ ಅನಿರೀಕ್ಷಿತವಾಗಿ ಹೋಗಿ ನಗರದ ಮೇಲೆ ಮುತ್ತಿಗೆ
ಹಾಕಿದನು. ಕೋಟೆಗೋಡೆಗಳ ಮೇಲಿದ್ದ ಸೈನಿಕರನ್ನು ಚದರಿಸಿ ನಗರವನ್ನು ವಶಪಡಿಸಿಕೊಳ್ಳಲಾಯಿತು.
ಮೆನೆಲಾವ್ಸನು ದುರ್ಗದಲ್ಲಿ ಆಶ್ರಯಪಡೆದನು. 6ಯಾಸೋನನೂ ಅವನ ಸೈನಿಕರೂ ನಿರ್ದಯೆಯಿಂದ
ಸ್ವಂತಜನರನ್ನೇ ಸಾಯಿಸುತ್ತಿದ್ದರು. ಸ್ವಜನರ ಮೇಲೆ ಗಳಿಸಿದ ಜಯ ತೀರಾ ಅವಮಾನಕರವಾದ ಸೋಲೆಂದು
ಯಾಸೋನನಿಗೆ ಹೊಳೆಯಲಿಲ್ಲ. ಸ್ವಂತ ಜನರು ಅವನಿಂದ ಸೋತರೆಂಬುದನ್ನು ಎಣಿಸದೆ, ಅದು ತಾನು
ಶತ್ರುಗಳ ಮೇಲೆ ಗಳಿಸಿದ ವಿಜಯ ಸಾಧನೆಯೆಂದು ಭಾವಿಸಿದನು. 7ಆದರೆ ಯಾಸೋನನು ಆಡಳಿತವನ್ನು
ವಹಿಸಿಕೊಳ್ಳಲಿಲ್ಲ. ಅಂತ್ಯದಲ್ಲಿ, ಪಿತೂರಿಯಿಂದ ಅಪಕೀರ್ತಿಯನ್ನೇ ತಂದುಕೊಂಡು ಅಮ್ಮೋನಿಯರ ದೇಶಕ್ಕೆ
ಪಲಾಯನ ಮಾಡಿದನು. 8ಕೊನೆಗೆ ಅವನಿಗೆ ದುರವಸ್ಥೆಯೇ ಕಾದಿತ್ತು. ಅರಬ್ಬೀಯರ ಅರಸ ಅರೇತನ
ಮುಂದೆ ಅವನ ಮೇಲೆ ದೂರುಕೊಡಲಾಯಿತು. ಅವನು ನಗರದಿಂದ ನಗರಕ್ಕೆ ಓಡಿಹೋಗಬೇಕಾಯಿತು.
ಎಲ್ಲರೂ ಅವನ ಮೇಲೆ ಬೀಳುತ್ತಿದ್ದರು. ಕಾನೂನನ್ನು ಉಲ್ಲಂಘಿಸುವವನು, ತನ್ನ ಸ್ವಂತ ಜನರನ್ನು ಕೊಲೆ
ಮಾಡಿದವನು ಎಂದು ಅವನನ್ನು ಹಂಗಿಸುತ್ತಿದ್ದರು. ಕೊನೆಯಲ್ಲಿ ಅವನು ಈಜಿಪ್ಟಿಗೆ ಪಲಾಯನಗೈದನು.
9ಅಲ್ಲಿಂದ, ಯೆಹೂದ್ಯರ ಸಂಬಂಧಿಕರಾದ ಸ್ಪಾರ್ಟನರಲ್ಲಿ ಆಶ್ರಯ ದೊರಕುವುದೆಂಬ ನಿರೀಕ್ಷೆಯಿಂದ, ಗ್ರೀಸಿಗೆ
ಹೋದನು. ಅಂತಿಮವಾಗಿ, ಹಲವಾರು ಮಂದಿ ಸೆರೆಹೋಗಲು ಕಾರಣನಾಗಿದ್ದ ಈತನು ತಾನೇ ಪರಕೀಯ
ನಾಡಿನಲ್ಲಿ ಸೆರೆಯಾಳಾಗಿ ಸಾಯಬೇಕಾಯಿತು. 10ಯಾಸೋನನು ಎಷ್ಟೋ ಜನರನ್ನು ಸಾಯಿಸಿ ಅವರ
ಶವಗಳನ್ನು ಸಮಾಧಿ ಮಾಡಿಸಲಿಲ್ಲ. ಆದರೆ ಈಗ ಅವನೇ ಶವಸಂಸ್ಕಾರವಿಲ್ಲದೆ ಸಾಯಬೇಕಾಯಿತು. ಅವನ
ಪೂರ್ವಜರ ಸಮಾಧಿಯಲ್ಲಿ ಅವನ ಭೂಸ್ಥಾಪನೆಯಾಗಲಿಲ್ಲ.

### ಜೆರುಸಲೇಮಿಗೆ ಅಂತಿಯೋಕನ ದಾಳಿ

(1 ಮಕ್ಕಬಿ. 1.20–63)

11 ನಡೆದ ಘಟನೆಗಳ ಸುದ್ದಿ ಅರಸನಿಗೆ ಮುಟ್ಟಲು, ಜುದೇಯ ನಾಡೇ ದಂಗೆಯೆದ್ದಿದೆ ಎಂದು
ಅವನು ಭಾವಿಸಿದನು. ಕಾಡುಮೃಗದಂತೆ ಉದ್ರೇಕಗೊಂಡು, ಅವನು ಈಜಿಪ್ಟಿನಿಂದ ಹೊರಟು
ಬಿರುಗಾಳಿಯಂತೆ ಜೆರುಸಲೇಮ್ ನಗರವನ್ನು ವಶಪಡಿಸಿಕೊಂಡನು. 12ಸಿಕ್ಕಿದವರನ್ನೆಲ್ಲ ಕ್ರೂರವಾಗಿ
ಕಡಿದುಹಾಕಬೇಕು. ಮನೆಯೊಳಗೆ ಹೋಗುವವರನ್ನು ಅಲ್ಲೇ ಸಾಯಿಸಿಬಿಡಬೇಕು ಎಂದು ಸೈನಿಕರಿಗೆ
ಆಜ್ಞೆಮಾಡಿದನು. 13ಹೀಗೆ ಹಿರಿಯರು–ಕಿರಿಯರು, ಎಲ್ಲರು ಕತ್ತಿಗೆ ತುತ್ತಾದರು. ಬಾಲಕ–ಬಾಲಕಿಯರು,
ಮಹಿಳೆಯರು ಹತರಾದರು; ಪುಟ್ಟ ಹೆಣ್ಣುಮಕ್ಕಳು, ಶಿಶುಗಳು ಎಲ್ಲರೂ ಸತ್ತು ಹೋದರು. 14ಮೂರು
ದಿನಗಳೊಳಗೆ 80,000 ಜನರು ನಾಶವಾದರು. ಸುಮಾರು 40,000 ಮಂದಿ ಹೋರಾಟದಲ್ಲೇ ಮಡಿದರು:
ಅಷ್ಟೇ ಜನರನ್ನು ಗುಲಾಮರನ್ನಾಗಿ ಮಾರಾಟಮಾಡಲಾಯಿತು.

15 ಇಷ್ಟಾಗಿದ್ದರೂ ಸಾಲದೆಂದು ಅಂತಿಯೋಕನು ಲೋಕಪ್ರಸಿದ್ಧವಾದ ಅತಿ ಪವಿತ್ರ ಮಹಾದೇವಾಲಯವನ್ನು ಧೈರ್ಯದಿಂದ ಪ್ರವೇಶಿಸಿದನು. ಧರ್ಮಕ್ಕೂ ಜನರಿಗೂ ದ್ರೋಹಿಯಾಗಿದ್ದ ಮೆನೆಲಾವ್ಸನು ಅವನಿಗೆ ಮಾರ್ಗದರ್ಶನ ನೀಡುತ್ತಿದ್ದನು. 16ಮಲಿನವಾದ ತನ್ನ ಕರಗಳಿಂದ ಪವಿತ್ರ ಪಾತ್ರೆಗಳನ್ನು ಅಲ್ಲಿಂದ ತೆಗೆದುಕೊಂಡನು; ಇತರ ಅರಸರುಗಳು ದೇವಾಲಯದ ಮಹಿಮೆಗಾಗಿ, ಕ್ಷೇತ್ರದ ಯಶಸ್ಸಿಗಾಗಿ, ದಾನಮಾಡಿದ್ದ ವಸ್ತುಗಳನ್ನೆಲ್ಲ ಹೊಲೆಯಾದ ಕೈಗಳಿಂದ ಅಪಹರಿಸಿಕೊಂಡನು. 17ಅಂತಿಯೋಕನು ಇದರಿಂದ ಬಹುವಾಗಿ ಪುಳಕಿತನಾದನು. 'ನಗರನಿವಾಸಿಗಳ ಪಾಪಗಳ ನಿಮಿತ್ತ ದೇವರಿಗೆ ಕೋಪವುಂಟಾಗಿದೆ; ಈ ಕಾರಣದಿಂದಲೇ ಆ ಪುಣ್ಯಕ್ಷೇತ್ರದ ಬಗ್ಗೆ ಅವರಿಗೆ ಕಾಳಜಿಯಿಲ್ಲದಂತಾಗಿದೆ' ಎಂದು ಅಂತಿಯೋಕನು ತಿಳಿದುಕೊಳ್ಳಲಿಲ್ಲ. 18ಅವರು ಅಷ್ಟೊಂದು ಪಾಪಗಳನ್ನು ಮಾಡಿರದಿದ್ದರೆ, ಅರಸ ಸೆಲ್ಯೂಕಸ್ ಕಳುಹಿಸಿದ್ದ ಹೆಲೆಯೋಡೊರಸನು ದೇವಾಲಯದ ಖಜಾನೆಯನ್ನು ನೋಡಲು ಹೋಗಿದ್ದಾಗ ಅವನಿಗೆ ಸಂಭವಿಸಿದ್ದಂತೆ ಅಂತಿಯೋಕನಿಗೂ ಅಂಥ ದುಂಡಾವರ್ತಿಯ ಕಾರ್ಯಕ್ಕೆ ಕೈಹಾಕದಂತೆ ಛಡಿಯೇಟು ಸಿಕ್ಕುತ್ತಿತ್ತು. 19ಆದರೆ ದೇವರು ತಮ್ಮ ಮಹಾದೇವಾಲಯಕ್ಕಾಗಿ ರಾಷ್ಟ್ರವನ್ನು ಆರಿಸಿಕೊಳ್ಳಲಿಲ್ಲ, ಬದಲಿಗೆ ರಾಷ್ಟ್ರದ ಜನತೆಗಾಗಿ ಮಹಾದೇವಾಲಯವನ್ನು ಸ್ಥಾಪಿಸಿದರು. 20ಆದುದರಿಂದ ಆ ಮಹಾದೇವಾಲಯ ಜನರ ಕಷ್ಟಸಂಕಟಗಳಲ್ಲಿ ಭಾಗಿಯಾದಂತೆ ಸಕಾಲದಲ್ಲಿ ಜನರ ಸುಯೋಗದಲ್ಲಿ ಭಾಗಿಯಾಯಿತು. ಸರ್ವಶಕ್ತ ದೇವರ ಕೋಪದ ನಿಮಿತ್ತ ಅದನ್ನು ಕೈಬಿಡಲಾಯಿತಾದರೂ ಪುನಃ ಮಹೋನ್ನತರ ಕೋಪ ಶಮನವಾದಾಗ ಸರ್ವಮಹಿಮೆಯೊಂದಿಗೆ ಅದನ್ನು ಪೂರ್ವಸ್ಥಿತಿಗೆ ತರಲಾಯಿತು.

### ಜೆರುಸಲೇಮಿನ ಮೇಲೆ ಮತ್ತೊಮ್ಮೆ ದಾಳಿ

21 ಅಂತಿಯೋಕನು ದೇವಾಲಯದಿಂದ 62,000 ಕಿಲೋಗ್ರಾಂ ಬೆಳ್ಳಿಯನ್ನು ತೆಗೆದುಕೊಂಡು ಬೇಗನೆ ಅಂತಿಯೋಕ್ಯಕ್ಕೆ ಹಿಂದಿರುಗಿದನು. ಅವನು ಎಷ್ಟು ಅಹಂಕಾರಪಟ್ಟನೆಂದರೆ, ನೆಲದಲ್ಲಿ ಹಡಗನ್ನು ಚಲಿಸುವುದು ಹಾಗು ಸಮುದ್ರವನ್ನು ಕಾಲುನಡೆಯಲ್ಲಿ ದಾಟುವುದು ತನ್ನಿಂದ ಸಾಧ್ಯವೆಂದು ಕೊಚ್ಚಿಕೊಳ್ಳುತ್ತಿದ್ದನು. 22ಜನರನ್ನು ದಂಡಿಸುವುದಕ್ಕೆ ಅಧಿಕಾರಿಗಳನ್ನು ನೇಮಿಸಿದನು. ತನ್ನನ್ನು ನೇಮಿಸಿದವನಿಗಿಂತಲೂ ಹೆಚ್ಚು ಕ್ರೂರಿಯಾದ ಫಿಲಿಪ್ಪನನ್ನು ಜೆರುಸಲೇಮಿಗೆ ನೇಮಿಸಿದನು. ಫಿಲಿಪ್ಪನು ಫ್ರೀಜಿಯದವನು. 23ಅಂದ್ರೋನಿಕ ಅರಸನನ್ನು ಗೆರೆಜೀಮಿಗೆ ನೇಮಿಸಿದನು; ಮಾತ್ರವಲ್ಲ, ಸ್ವಂತ ಜನರ ಮೇಲೆ ಇತರರಿಗಿಂತಲೂ ಹೆಚ್ಚು ದಬ್ಬಾಳಿಕೆ ನಡೆಸುವಂಥ ಮೆನೆಲಾವ್ಸನನ್ನೂ ನೇಮಿಸಿದನು. ಯೆಹೂದ್ಯರನ್ನು ಅಂತಿಯೋಕನು ಎಷ್ಟು ದ್ವೇಷಿಸುತ್ತಿದ್ದನೆಂದರೆ; 24ಯುವಜನರನ್ನು ಸಾಯಿಸಬೇಕು; ಹೆಂಗಸರನ್ನೂ ಮಕ್ಕಳನ್ನೂ ಗುಲಾಮರನ್ನಾಗಿ ಮಾರಬೇಕು ಎಂಬ ಆಜ್ಞೆಯಿತ್ತು, ಅದಕ್ಕಾಗಿ ಸೇನಾಧಿಕಾರಿಯಾಗಿದ್ದ ಅಪೊಲ್ಲೋನಿಯನನ್ನು 22,000 ಕೂಲಿ ಸೈನಿಕರೊಂದಿಗೆ ಮಿಸಿಯಾದಿಂದ ಜೆರುಸಲೇಮಿಗೆ ಕಳುಹಿಸಿದನು. 25ಅಪೊಲ್ಲೋನಿಯನು ಜೆರುಸಲೇಮಿಗೆ ಬಂದಾಗ ಶಾಂತಿ ನಿಯೋಗಕ್ಕಾಗಿ ಬಂದಿರುವಂತೆ ನಟಿಸಿದನು. ಸಬ್ಬತ್ ದಿನದವರೆಗೆ ಕಾದುಕೊಂಡಿದ್ದನು. ಪವಿತ್ರದಿನದಂದು ಜನರು ವಿಶ್ರಾಂತಿ ದಿನವನ್ನು ಆಚರಿಸುತ್ತಿದ್ದಾಗ, ಸಶಸ್ತ್ರ ಸೈನಿಕರನ್ನು ಬೀದಿಗಳಲ್ಲಿ ನಡೆಸಿದನು. ಅವರನ್ನು ನೋಡಲು ಹೊರಬಂದವರನ್ನು ತಟ್ಟನೆ ಕತ್ತಿಯಿಂದ ಕೊಂದರು; ಅನಂತರ ಆ ಸೈನಿಕರು ನಗರದೊಳಕ್ಕೆ ನುಗ್ಗಿ ಅನೇಕ ಜನರನ್ನು ಸಾಯಿಸಿದರು.

26 ಆದರೆ ಮಕ್ಕಬಿಯನೆಂದು ಕರೆಯಲಾದ ಯೂದನು ಒಂಬತ್ತು ಜನರೊಂದಿಗೆ ಮರಳುಗಾಡಿಗೆ ತಪ್ಪಿಸಿಕೊಂಡು ಹೋದನು. ಅವನೂ ಅವನ ಸಂಗಡಿಗರೂ ಕಾಡುಮೃಗಗಳಂತೆ ಗುಡ್ಡಗಳಲ್ಲಿ ತಂಗಿದ್ದರು. ಮೈಲಿಗೆಯಾಗದಂತೆ ಅಲ್ಲಿ ಬೆಳೆಯುವ ಗಿಡಮೂಲಿಕೆಗಳನ್ನು ಮಾತ್ರ ತಿನ್ನುತ್ತಿದ್ದರು.

### ಧರ್ಮಕ್ಕಾಗಿ ಚಿತ್ರ ಹಿಂಸೆ

**6** ಸ್ವಲ್ಪಕಾಲದ ನಂತರ, ಸನಾತನ ಆಚಾರಗಳನ್ನು ಉಲ್ಲಂಘಿಸುವಂತೆ, ದೇವರ ನಿಯಮಗಳನ್ನು ಮೀರಿ ಬಾಳುವಂತೆ ಯೆಹೂದ್ಯರನ್ನು ಬಲವಂತಪಡಿಸಬೇಕೆಂದು ಅರಸನು, ಅಥೆನ್ಸಿನ ಶಾಸಕಸಭೆಯ ಸದಸ್ಯ ಗೆರೋನ್ ಎಂಬವನನ್ನು ಕಳುಹಿಸಿದನು. 2ಜೆರುಸಲೇಮಿನ ಮಹಾದೇವಾಲಯವನ್ನು ಭ್ರಷ್ಟಗೊಳಿಸಿ ಅದನ್ನು

ಒಲಿಂಪಿಯದ 'ಜೆವುಸ್' ದೇವರಿಗೆ ಪ್ರತಿಷ್ಠಾಪಿಸಬೇಕು, ಗೆರಿಜ್ಜೀಮ್ ಬೆಟ್ಟದ ದೇವಾಲಯವನ್ನು ಸ್ಥಳೀಯ ಜನರ ಕೋರಿಕೆಯ ಮೇರೆಗೆ, ವಲಸೆ ಬಂದವರ ಪಾಲಕನಾದ 'ಜೆವುಸ್' ದೇವರಿಗೆ ಪ್ರತಿಷ್ಠಾಪಿಸಬೇಕು ಎಂದು ಅವನು ಅಪ್ಪಣೆ ಪಡೆದಿದ್ದನು.

3 ಈ ಹಿಂಸೆಗಳನ್ನೆಲ್ಲ ತಾಳಿಕೊಳ್ಳು ಸರ್ವರಿಗೂ ಅಸಹನೀಯವಾಗಿದ್ದವು. 4ಹೇಗೆಂದರೆ, ಅನ್ಯಧರ್ಮೀಯರ ದುಷ್ಕೃತ್ಯಗಳಿಂದ ಮಹಾದೇವಾಲಯವು ಭೋಜನಾಕೂಟಗಳಿಂದ ತುಂಬಿಹೋಯಿತು. 5ಆ ದೇವಾಲಯದ ಆವರಣದಲ್ಲಿ ಜನರು ವ್ಯಭಿಚಾರದಿಂದ ತೃಪ್ತಿಹೊಂದಲು ಸ್ತ್ರೀಯರೊಂದಿಗೆ ಅನೈತಿಕ ಸಂಬಂಧ ಮಾಡುವುದಕ್ಕೆ ತೊಡಗಿದರು. ಇದಲ್ಲದೆ, ಇತರ ಅನೇಕ ದುಷ್ಕೃತ್ಯಗಳನ್ನು ಅಲ್ಲಿ ಮಾಡಲಾರಂಭಿಸಿದರು. 6ಧರ್ಮಶಾಸ್ತ್ರದಲ್ಲಿ ಮಲಿನವೆಂದು ನಿಷಿದ್ಧವಾದ ಕಾಣಿಕೆ ವಸ್ತುಗಳನ್ನು ಬಲಿಪೀಠದ ಮೇಲೆ ಹೇರುತ್ತಿದ್ದರು. ಸಬ್ಬತ್ ದಿನಗಳನ್ನು ಆಚರಿಸುವುದಕ್ಕೆ, ಸಾಂಪ್ರದಾಯಿಕ ಹಬ್ಬಗಳನ್ನು ಕೊಂಡಾಡುವುದಕ್ಕೆ ಯಾರಿಗೂ ಅನುಮತಿಯಿರಲಿಲ್ಲ; ತಾನು ಯೆಹೂದ್ಯನೆಂದು ಸಹ ಯಾರೂ ಒಪ್ಪಿಕೊಳ್ಳುವಂತಿರಲಿಲ್ಲ. 7ಪ್ರತಿ ತಿಂಗಳು ಅರಸನ ಜಯಂತಿಯನ್ನು ಕೊಂಡಾಡುವ ಸಂದರ್ಭದಲ್ಲಿ ಕಟುವಾಗಿಯೂ ಬಲವಂತವಾಗಿಯೂ ಬಲಿಭೋಜನದಲ್ಲಿ ಭಾಗವಹಿಸಲು ಯೆಹೂದ್ಯರನ್ನು ಕೊಂಡೊಯ್ಯಲಾಗುತ್ತಿತ್ತು. ದಿಯೊನಿಸಿಯನ ಹಬ್ಬದಂದು 'ಐವೀ' ಬಳ್ಳಿಗಳಿಂದ ತಯಾರಿಸಿದ ಪುಷ್ಪ ಕಿರೀಟಗಳನ್ನು ಧರಿಸಿಕೊಂಡು ಮೆರವಣಿಗೆಯಲ್ಲಿ ಭಾಗವಹಿಸಬೇಕಿತ್ತು. 8ಪ್ಟೊಲೆಮೇಯನ ಸಲಹೆಯ ಪ್ರಕಾರ ನೆರೆರಾಜ್ಯದ ಗ್ರೀಕ್ ಪಟ್ಟಣಗಳಲ್ಲಿ ಸಹ ಯೆಹೂದ್ಯರು ಅನ್ಯರ ಪೂಜಾ ಬಲಿಯಲ್ಲಿ ಪಾಲ್ಗೊಂಡು ಭೋಜನ ಮಾಡಬೇಕಿತ್ತು. 9ಗ್ರೀಕರ ಪದ್ಧತಿಗಳನ್ನು ಸ್ವಯಂ ಪ್ರೇರಣೆಯಿಂದ ಅನುಸರಿಸದವರನ್ನು ಸಾಯಿಸಬೇಕೆಂದು ಆಜ್ಞೆಹೊರಡಿಸಲಾಗಿತ್ತು. ಹೀಗೆ ತಮಗೆ ಆಪತ್ಕಾಲ ಸನ್ನಿಹಿತವಾಯಿತೆಂದು ಎಲ್ಲರಿಗೂ ವೇದ್ಯವಾಯಿತು.

10 ಉದಾಹರಣೆಗೆ, ಮಕ್ಕಳಿಗೆ ಸುನ್ನತಿ ಸಂಸ್ಕಾರ ಮಾಡಿದ್ದಕ್ಕಾಗಿ ಇಬ್ಬರು ಸ್ತ್ರೀಯರನ್ನು ದಸ್ತಗಿರಿ ಮಾಡಲಾಯಿತು. ಮಕ್ಕಳನ್ನು ಅವರ ಎದೆಗೆ ತೂಗುಹಾಕಿ, ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ, ನಗರದ ಗೋಡೆಮೇಲಿಂದ ಅವರನ್ನು ಆಚೆ ಎಸೆಯಲಾಯಿತು. 11ಇನ್ನೊಂದು ಸಂದರ್ಭದಲ್ಲಿ ಸಬ್ಬತ್ತನ್ನು ರಹಸ್ಯವಾಗಿ ಆಚರಿಸಲು ಕೆಲವು ಮಂದಿ ಯೆಹೂದ್ಯರು ಗುಹೆಗಳಲ್ಲಿ ಅಡಗಿದ್ದಾರೆಂಬ ಸುದ್ದಿ ಫಿಲಿಪ್ಪನಿಗೆ ಮುಟ್ಟಲು, ಆ ಜನರನ್ನು ಒಟ್ಟಿಗೆ ಜೀವಂತವಾಗಿ ಸುಟ್ಟುಹಾಕಲಾಯಿತು. ಅವರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಈ ಸಬ್ಬತ್ ದಿನದ ಬಗ್ಗೆ ಅವರಿಗೆ ಅಷ್ಟು ಅಭಿಮಾನವಿತ್ತು! ಮನಸ್ಸಾಕ್ಷಿ ಅಷ್ಟು ಸೂಕ್ಷ್ಮವಾಗಿತ್ತು!

### ಶಿಕ್ಷಿಸಿದರೂ ಸರ್ವೇಶ್ವರಸ್ವಾಮಿ ದಯಾಪರನು

(12 ಈ ಗ್ರಂಥವನ್ನು ಓದುವವರು ಇಂಥ ದುಃಖಕರ ಘಟನೆಗಳಿಂದ ಧೃತಿಗೆಡದೆ, ದೇವರು ಜನರನ್ನು ಶಿಕ್ಷೆಗೆ ಒಳಪಡಿಸಿದ್ದು ಅವರ ವಿನಾಶಕ್ಕಾಗಿ ಅಲ್ಲ, ಶಿಸ್ತಿನಿಂದ ನಡೆಸುವುದಕ್ಕಾಗಿ ಎಂದು ಭಾವಿಸಬೇಕೆಂದು ಒತ್ತಿಹೇಳುತ್ತೇನೆ.) 13ನಿಜಕ್ಕೂ ಒಬ್ಬನ ತಪ್ಪಿಗಾಗಿ ಶಿಕ್ಷಿಸುವುದಕ್ಕೆ ಬಹುಕಾಲ ಕಾದಿರುವುದಕ್ಕಿಂತಲೂ ತಕ್ಷಣವೇ ಶಿಕ್ಷಿಸುವುದು ಕರುಣೆಯ ಚಿಹ್ನೆ ಎನ್ನಬೇಕು. 14ಇತರ ರಾಷ್ಟ್ರಗಳಿಗೆ ಮಾಡುವಂತೆ ದೇವರು ನಮ್ಮೊಡನೆ ವರ್ತಿಸುವುದಿಲ್ಲ. ಶಿಕ್ಷಿಸುವುದಕ್ಕೆ ಮುಂಚೆ ಅವರು ಪಾಪದಲ್ಲಿ ಸಂಪೂರ್ಣವಾಗಿ ಮುಳುಗಲೆಂದು ಬಹಳಕಾಲ ಸಹನೆಯಿಂದ ಕಾದಿರುತ್ತಾರೆ. 15ಆದರೆ ನಾವು ಹೆಚ್ಚಾಗಿ ಪಾಪವನ್ನು ಕಟ್ಟಿಕೊಳ್ಳಲು ಬಿಡದೆ, ನಮ್ಮನ್ನು ಶಿಕ್ಷಿಸುತ್ತಾರೆ. 16ಆದುದರಿಂದ ಸರ್ವೇಶ್ವರಸ್ವಾಮಿ ತಮ್ಮ ಕೃಪೆಯನ್ನು ನಮ್ಮಿಂದ ಹಿಂತೆಗೆದುಕೊಳ್ಳುವುದಿಲ್ಲ. ಆಪತ್ತುಗಳನ್ನು ನಮ್ಮ ಮೇಲೆ ಬರಮಾಡಿ ನಮ್ಮನ್ನು ಶಿಕ್ಷಿಸಿದರೂ, ಅವರ ಸ್ವಂತ ಜನರಾದ ನಮ್ಮನ್ನು ಕೈ ಬಿಡುವುದಿಲ್ಲ. 17ನಾನು ಮೇಲೆ ಹೇಳಿದವುಗಳೆಲ್ಲ ನಿಮಗೆ ಜ್ಞಾಪಕಪಡಿಸುವುದಕ್ಕೆಂದು ತಿಳಿಯಿರಿ. ಈಗ ಚರಿತ್ರೆಯನ್ನು ಮುಂದುವರಿಸೋಣ.

### ಎಲ್ಲಾಜಾರನ ಧರ್ಮನಿಷ್ಠೆ

18 ಧರ್ಮಶಾಸ್ತ್ರ ಪಂಡಿತರಲ್ಲಿ ಅತೀ ನಿಪುಣನಾದ ಎಲ್ಲಾಜಾರನು ವಯೋವೃದ್ಧನು, ಉಜ್ವಲರೂಪ ಉಳ್ಳವನು. ಅವನು ಹಂದಿ ಮಾಂಸವನ್ನು ತಿನ್ನಲು ಬಲಾತ್ಕಾರದಿಂದ ಬಾಯ್ದೆರೆದು ಮಾಡಿದರು.

19ಅವನಾದರೋ, ಹೊಲಸಾದ ಜೀವನ ನಡೆಸುವುದಕ್ಕಿಂತ ಮರ್ಯಾದೆಯಿಂದ ಸಾಯುವುದು ಲೇಸೆಂದು
ಎಣಿಸಿದನು. ಬಾಯೊಳಗಿಂದ ಆ ಮಾಂಸವನ್ನು ಉಗಿದುಬಿಟ್ಟನು. 20ಬದುಕುವುದಕ್ಕಿಂತ ಹೆಚ್ಚಾಗಿ
ನಿಷೇಧಿಸಲಾದ ಆಹಾರವನ್ನು ರುಚಿಸಲು ಧೈರ್ಯದಿಂದ ನಿರಾಕರಿಸಿದನು. ಹೀಗೆ, ತಾನೇ ಯಾತನೆಯ
ಸ್ಥಳಕ್ಕೆ ಮುನ್ನಡೆದು ಬಂದನು. 21ನಿಷಿದ್ಧ ಬಲಿಭೋಜನದ ಉಸ್ತುವಾರಿ ನೋಡುವಂಥವರು,
ಎಲ್ಲಾಜಾರನನ್ನು ಬಹುಕಾಲ ಅರಿತವರಾದ್ದರಿಂದ, ಅವನನ್ನು ರಹಸ್ಯವಾಗಿ ಕೊಂಡೊಯ್ದು ಬೇರೆ
ಯಾವುದಾದರೂ ತಿನ್ನಬಹುದಾದ ಮಾಂಸವನ್ನು ಸ್ವೀಕರಿಸಿ, ಅರಸನ ಆಜ್ಞೆಗನುಗುಣವಾಗಿ ಬಲಿಭೋಜನ
ಆಹಾರವನ್ನು ತಿನ್ನುವಂತೆ ನಟಿಸಬೇಕೆಂದು ಗುಟ್ಟಾಗಿ ಸಲಹೆಕೊಟ್ಟರು. 22ಹೀಗೆ ಅವರೊಂದಿಗಿದ್ದ ಸ್ನೇಹದ
ನಿಮಿತ್ತ, ಅವನನ್ನು ಮರಣಶಿಕ್ಷೆಯಿಂದ ತಪ್ಪಿಸಲು ಕರುಣೆಯ ಒಂದು ದಾರಿಯನ್ನು ತೋರಿಸಿದರು. 23ಆದರೆ
ಅವನು ತನ್ನ ವಯಸ್ಸಿನ ಯೋಗ್ಯತೆಗೆ, ಮುಪ್ಪಿನ ಘನತೆಗೆ, ನರೆಕೂದಲಿಗೆ ಸಲ್ಲತಕ್ಕ ಗೌರವಕ್ಕೆ,
ಬಾಲ್ಯದಿಂದಲೂ ಕಾಪಾಡಿಕೊಂಡು ಬಂದ ಸನ್ನಡತೆಗೆ ತಕ್ಕಂತೆ, ಎಲ್ಲಕ್ಕಿಂತಲೂ ಹೆಚ್ಚಾಗಿ ದೇವರು ತಾವೇ
ನೀಡಿದ ಪವಿತ್ರ ನಿಯಮಕ್ಕೆ ಅನುಗುಣವಾಗಿ, ಉದಾತ್ತ ನಿರ್ಧಾರವನ್ನು ಕೈಗೊಂಡು, ಕೂಡಲೇ
ಮೃತ್ಯುಲೋಕಕ್ಕೆ ತನ್ನನ್ನು ಕಳುಹಿಸಿಬಿಡಬೇಕೆಂದು ಕೇಳಿಕೊಂಡನು. 24 "ಇಂಥಾ ನಟನೆ ವಯೋವೃದ್ಧನಾದ
ನನಗೆ ತಕ್ಕುದಲ್ಲ. 90 ವರ್ಷದ ವ್ಯಕ್ತಿಯಾದ ಎಲ್ಲಾಜಾರನೇ ತನ್ನ ಧರ್ಮವನ್ನು ಉಲ್ಲಂಘಿಸಿ, ಪರಕೀಯರ
ಪದ್ಧತಿಯನ್ನು ಅನುಸರಿಸಿದ್ದಾನೆಂದು ಹೇಳುತ್ತಾರೆ. 25ಬದುಕಲು ಸ್ವಲ್ಪಕಾಲಕ್ಕೆ ಈ ರೀತಿ ವರ್ತಿಸುವುದರಿಂದ
ಯುವಕರನ್ನು ತಪ್ಪುದಾರಿಗೆ ಎಳೆದಂತಾಗುತ್ತದೆ. ನನ್ನ ಮುಪ್ಪಿಗೆ ಕಳಂಕವನ್ನೂ ನಿಂದೆಯನ್ನೂ
ತಂದುಕೊಂಡಂತಾಗುತ್ತದೆ. 26ತಾತ್ಕಾಲಿಕವಾಗಿ ನಾನು ನರಮಾನವರ ಶಿಕ್ಷೆಯಿಂದ ಸಧ್ಯಕ್ಕೆ ತಪ್ಪಿಸಿಕೊಂಡರೂ,
ಸರ್ವಶಕ್ತ ದೇವರ ಕೈಯಿಂದ ಜೀವಂತವಾಗಿ ಆಗಲಿ, ಸತ್ತಾಗ ಆಗಲಿ, ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.
27ಆದುದರಿಂದ, ಅವರು ಈಗ ನನ್ನ ಪ್ರಾಣತೆಗೆಯುವುದಕ್ಕೆ ನಾನೇ ಧೈರ್ಯದಿಂದ ಸಮ್ಮತಿಸುವುದರಿಂದ
ನನ್ನ ಮುಪ್ಪಿನ ಘನತೆಗೆ ಯೋಗ್ಯನೆಂದು ಸ್ಪಷ್ಟೀಕರಿಸುತ್ತೇನೆ. 28ಹೀಗೆ ಪೂಜ್ಯ ಹಾಗೂ ಪವಿತ್ರ ನಿಯಮಕ್ಕಾಗಿ
ಆಸಕ್ತಿಯಿಂದ ಮತ್ತು ಧಾರಾಳಮನಸ್ಸಿನಿಂದ ಒಳ್ಳೆಯವನಾಗಿ ಹೇಗೆ ಮರಣಹೊಂದಬಹುದು ಎಂಬ ಭವ್ಯ
ಆದರ್ಶವನ್ನು ಚಿಕ್ಕವರಿಗೆ ನೀಡಿದಂತಾಗುತ್ತದೆ," ಎಂದನು.

ಇಷ್ಟನ್ನು ಹೇಳಿದ ಮೇಲೆ ಅವನು ವಧ್ಯಸ್ಥಾನಕ್ಕೆ ನೆಟ್ಟಗೆ ಹೋದನು. 29ಸ್ವಲ್ಪಹೊತ್ತಿಗೆ ಮುಂಚೆ ಸ್ನೇಹ
ಪರರಾಗಿ ವರ್ತಿಸುತ್ತಿದ್ದ ಆ ಬೆಂಗಾವಲಿನವರು, ಅವನು ಮಾತಾಡಿದ್ದು ಹುಚ್ಚುತನದಿಂದ ಎಂದೆಣಿಸಿ ಅವನ
ಮೇಲೆ ತಿರುಗಿಬಿದ್ದರು. 30ಮರಣದ ಹಂತವನ್ನು ತಲುಪುವವರೆಗೆ ಅವನನ್ನು ಹೊಡೆದರು. ಆಗ
ಎಲ್ಲಾಜಾರನು ನಿಟ್ಟುಸಿರು ಬಿಡುತ್ತಾ, "ನಾನು ಮರಣದಿಂದ ತಪ್ಪಿಸಿಕೊಳ್ಳಬಹುದಾಗಿದ್ದರೂ
ಸರ್ವೇಶ್ವರನಲ್ಲಿರುವ ಭಯಭಕ್ತಿಯ ನಿಮಿತ್ತವೇ ಚಾಟಿಯಿಂದಾದ ಈ ದೈಹಿಕ ಯಾತನೆಯನ್ನು
ಸಂತೋಷದಿಂದ ಸಹಿಸಿಕೊಳ್ಳುತ್ತೇನೆ; ಹೀಗೆ ಹಿಂಸೆಯನ್ನು ಹೃತ್ಪೂರ್ವಕವಾಗಿ ಅನುಭವಿಸುತ್ತಿದ್ದೇನೆ
ಎಂಬುದು ಪರಮಪವಿತ್ರ ಜ್ಞಾನಿಯಾದ ಸರ್ವೇಶ್ವರನಿಗೆ ತಿಳಿದಿದೆ," ಎಂದನು.

31 ಹೀಗೆ ಎಲ್ಲಾಜಾರನು ಸಾವನ್ನು ಅಪ್ಪಿದನು; ಅವನ ಮರಣ ಚಿಕ್ಕವರಿಗೆ ಮಾತ್ರವಲ್ಲ, ಜನಾಂಗದ
ಬಹುಭಾಗದವರಿಗೆ ಉದಾತ್ತ ಆದರ್ಶವಾಗಿತ್ತು. ಚಿರಸ್ಮರಣೆಯ ಪುಣ್ಯ ದಾಖಲೆ ಆಗಿತ್ತು.

## ಧರ್ಮಕ್ಕಾಗಿ ಪ್ರಾಣತ್ಯಾಗ

### ಏಳು ಮಂದಿ ಸಹೋದರರ ಮರಣ

**7** ಆ ಕಾಲದಲ್ಲಿ ಏಳುಮಂದಿ ಸಹೋದರರನ್ನು ಅವರ ತಾಯಿಯೊಂದಿಗೆ, ಅರಸನ ಅಪ್ಪಣೆಯ ಮೇರೆಗೆ
ದಸ್ತಗಿರಿ ಮಾಡಲಾಯಿತು. ನಿಷೇಧಿಸಲಾಗಿದ್ದ ಹಂದಿಯ ಮಾಂಸವನ್ನು ತಿನ್ನಬೇಕೆಂದು ಅವರನ್ನು ಬಲವಂತ
ಪಡಿಸಲಾಗಿತ್ತು. ಚಾಟಿಯಿಂದಲೂ ಬಾರುಗಳಿಂದಲೂ ಹೊಡೆದು ಅವರನ್ನು ಬಾಧಿಸಿದರು. 2ಅವರಲ್ಲೊಬ್ಬನು
ಇತರರ ಪರವಾಗಿ ಮಾತನಾಡುತ್ತಾ, "ನಮ್ಮಿಂದ ನೀವು ಏನನ್ನು ತಿಳಿದುಕೊಳ್ಳಬಯಸುತ್ತೀರಿ? ನಮ್ಮ
ಪೂರ್ವಜರ ಧರ್ಮವಿಧಿಗಳನ್ನು ಉಲ್ಲಂಘಿಸುವುದಕ್ಕೆ ಬದಲು, ನಾವು ಸಾಯುವುದಕ್ಕೆ ಸಿದ್ದ" ಎಂದನು.

3 ಅರಸನು ಇದರಿಂದ ಕಡುಗೋಪಗೊಂಡು ಕಂಚಿನ ಹಂಡೆಗಳನ್ನೂ ಬಾಣಲೆಗಳನ್ನೂ ಕಾಯಿಸಬೇಕೆಂದು ಆಜ್ಞಾಪಿಸಿದನು. 4ತಕ್ಷಣವೇ ಅವುಗಳನ್ನು ಕಾಯಿಸಲಾಯಿತು. ಮೊದಲು ಮಾತನಾಡಿದವನ ನಾಲಗೆಯನ್ನು ಕೊಯ್ಯಲು, ತಲೆಯ ಚರ್ಮವನ್ನು ಸುಲಿಯಲು, ಕೈಕಾಲುಗಳನ್ನು ಕತ್ತರಿಸಿ ಹಾಕಲು ಅಜ್ಞಾಪಿಸಿದನು. ಅವನ ಇತರ ಸಹೋದರರೂ ತಾಯಿಯೂ ಅದನ್ನು ನೋಡುತ್ತಾ ನಿಂತಿರಬೇಕೆಂದು ಅಪ್ಪಣೆ ಮಾಡಿದನು. 5ಇದರಿಂದ ಸಂಪೂರ್ಣ ನಿಶ್ಶಕ್ತನಾಗಿರುವಾಗ ಇನ್ನೂ ಉಸಿರಾಡುತ್ತಿರುವಾಗಲೇ ಒಲೆಯ ಬಳಿ ತೆಗೆದುಕೊಂಡು ಹೊಗಿ, ಬಾಣಲೆಯಲ್ಲಿ ಅವನನ್ನು ಹಾಕಿ ಹುರಿಯಬೇಕೆಂದು ರಾಜನು ಆಜ್ಞಾಪಿಸಿದನು. ಬಾಣಲೆಯಿಂದ ಎಲ್ಲಾಕಡೆ ಹೊಗೆ ಹರಡಿತು. ಇತರ ಸಹೋದರರೂ ಅವರ ತಾಯಿಯೂ ಸಾಯಲು ಸಿದ್ಧರಾಗಬೇಕೆಂದು ಒಬ್ಬರನ್ನೊಬ್ಬರು ಹುರಿದುಂಬಿಸಿದರು; 6"ದೇವರಾದ ಸರ್ವೇಶ್ವರಸ್ವಾಮಿ ನಮ್ಮನ್ನು ಕಾಯುತ್ತಾರೆ; ನಿಜವಾಗಿಯೂ ನಮ್ಮ ಮೇಲೆ ದಯೆತೋರುತ್ತಾರೆ; ಮೋಶೆಯು, ಜನರ ಮುಂದೆ ಸಾಕ್ಷಿಯಾಗಿ ಹಾಡಿದ ಕೀರ್ತನೆಯಲ್ಲಿ, 'ಅವರು ತಮ್ಮ ದಾಸರಿಗೆ ಕರುಣೆ ತೋರುತ್ತಾರೆ' ಎಂದಂತೆ ನಮಗೂ ಉಪಶಮನವನ್ನೀಯುವರು," ಎಂದು ಹೇಳಿಕೊಂಡರು.

7 ಮೊದಲನೆಯ ಸಹೋದರನು ಈ ರೀತಿ ಸತ್ತನಂತರ, ವಿರೋಧಿಗಳು ಎರಡನೆಯವನನ್ನು ತಮ್ಮ ವಿನೋದಕ್ಕಾಗಿ ಮುಂದೆ ತಂದರು. ಅವನ ತಲೆಯ ಕೂದಲನ್ನು ಚರ್ಮದೊಂದಿಗೆ ಸುಲಿದು, "ಈಗ ಹಂದಿಮಾಂಸವನ್ನು ತಿನ್ನುತ್ತೀಯೋ ಅಥವಾ ಅಂಗಾಂಗಗಳನ್ನು ಒಂದೊಂದಾಗಿ ಕಡಿದು ಹಾಕೋಣವೋ?" ಎಂದು ಕೇಳಿದರು. 8ಆದರೆ ಅವನು ತನ್ನ ಮಾತೃಭಾಷೆಯಲ್ಲಿ, "ಇಲ್ಲ, ನಾನು ತಿನ್ನುವುದಿಲ್ಲ," ಎಂದನು. ಆಗ ಮೊದಲಿನವನಿಗೆ ಮಾಡಿದಂತೆ ಎರಡನೆಯವನಿಗೂ ಚಿತ್ರಹಿಂಸೆ ಕೊಟ್ಟರು. 9ಅವನು ಕೊನೆಯುಸಿರು ಎಳೆಯುತ್ತಿರುವಾಗ ಅರಸನನ್ನು ನೋಡಿ, "ಹೇ ಕಟುಕನೇ, ಇಲ್ಲಿರುವಾಗ ನಮ್ಮ ಜೀವವನ್ನು ತೆಗೆದು ಬಿಡುತ್ತೀಯಾ ಸರಿ; ಆದರೆ ವಿಶ್ವದ ಒಡೆಯರಾದ ದೇವರು, ನಮ್ಮನ್ನು ಅಮರ ಹಾಗೂ ಪುನಶ್ಚೇತನಗೊಳಿಸುವ ಜೀವಕ್ಕೆ ಎಬ್ಬಿಸುತ್ತಾರೆ; ಕಾರಣ, ನಾವು ಅವರ ಆಜ್ಞಾಪಾಲನೆಗಾಗಿ ಪ್ರಾಣಬಿಟ್ಟಿದ್ದೇವೆ," ಎಂದನು.

10 ಅವನ ತರುವಾಯ ಅವರು ವಿನೋದಕ್ಕಾಗಿ ಮೂರನೆಯವನನ್ನು ಹಿಡಿದುಕೊಂಡರು. ನಾಲಗೆ ಚಾಚಬೇಕೆಂದು ಹೇಳಿದಾಗ ಅವನು ತಕ್ಷಣವೇ ನಾಲಗೆಯನ್ನು ಚಾಚಿದನು; ಧೈರ್ಯದಿಂದ ತನ್ನ ಕೈಗಳನ್ನೂ ಮುಂದಕ್ಕೆ ಒಡ್ಡುತ್ತಾ, 11"ನಾನು ಇವುಗಳನ್ನು ಪರಲೋಕದಿಂದ ಪಡೆದೆನು. ಅವರ ನಿಯಮಕ್ಕಾಗಿ ಇವುಗಳನ್ನು ತೊರೆಯುತ್ತೇನೆ. ಆದರೆ ಪುನಃ ನಾನು ಅವುಗಳನ್ನು ಪಡೆಯುವೆನು, ಇದು ನನ್ನ ದೃಢನಂಬಿಕೆ!" ಎಂದನು. 12ತತ್ಪರಿಣಾಮವಾಗಿ, ರಾಜನೂ ಅವನೊಂದಿಗಿದ್ದ ಇತರರೂ ಈ ಯುವಕನ ಧೈರ್ಯವನ್ನು ನೋಡಿ ನಿಬ್ಬೆರಗಾದರು; ಅವನು ತನ್ನ ಉಪದ್ರವಗಳನ್ನು ಕಿಂಚಿತ್ತು ಲೆಕ್ಕಿಸಲಿಲ್ಲ.

13 ಅವನು ಸತ್ತಮೇಲೆ, ನಾಲ್ಕನೆಯವನನ್ನು ಸಹ ಅದೇ ಪ್ರಕಾರ ಹಿಂಸಿಸಿ ಉಪದ್ರವಪಡಿಸಿದರು. 14ಅವನು ಪ್ರಾಣಬಿಡುವಾಗ, "ಮರ್ತ್ಯಮಾನವರ ಕೈಗಳಿಂದ ಸಾವನ್ನು ಅನುಭವಿಸಿ, ದೇವರಿಂದ ಮರಳಿ ಎಬ್ಬಿಸಲ್ಪಡುವೆನೆಂಬ ದೇವದತ್ತ ನಿರೀಕ್ಷೆಯನ್ನು ಎದುರುನೋಡುವುದು ಶ್ರೇಯಸ್ಕರ; ನೀವಾದರೋ ಜೀವಕ್ಕೆ ಪುನಃ ಉತ್ಥಾನವಾಗುವಂತಿಲ್ಲ," ಎಂದನು.

15 ಬಳಿಕ ಐದನೆಯವನನ್ನು ಹಿಡಿದು ಉಪದ್ರವಪಡಿಸಿದರು. 16ಅವನು ರಾಜನನ್ನು ನೋಡಿ, "ನೀನು ಕೇವಲ ನರಮಾನವನಾಗಿ ಇದ್ದರೂ, ನಿನಗೆ ಮಾನವರ ಮೇಲೆ ಅಧಿಕಾರ ಇರುವುದರಿಂದ, ನಿನಗೆ ಇಷ್ಟಬಂದಂತೆ ಮಾಡುತ್ತಿರುವೆ. ಆದರೆ ದೇವರು ತಮ್ಮ ಜನರನ್ನು ತೊರೆದು ಬಿಟ್ಟಿದ್ದಾರೆಂದು ಮಾತ್ರ ನೆನೆಸಬೇಡ. 17ಸ್ವಲ್ಪಕಾಲ ಕಾದಿರು. ದೇವರು ತಮ್ಮ ಮಹಾಶಕ್ತಿಯಿಂದ ನಿನ್ನನ್ನೂ ನಿನ್ನ ಸಂತತಿಯನ್ನೂ ಹೇಗೆ ದಂಡಿಸುವರು ಎಂಬುದನ್ನು ಕಾಣುವಿಯಂತೆ!" ಎಂದನು.

18 ಅವನಾದನಂತರ ಅವರು ಆರನೆಯವನನ್ನು ತಂದರು. ಅವನು ಸಾಯುವುದಕ್ಕೆ ಮುಂಚೆ, "ಅನಾವಶ್ಯಕವಾಗಿ ಮೋಸಹೋಗದಿರು; ನಾವು ನಮ್ಮ ದೇವರ ವಿರುದ್ಧ ಕಟ್ಟಿಕೊಂಡ ಪಾಪಗಳಿಗಾಗಿ ತಕ್ಕ ಯಾತನೆಯನ್ನು ಅನುಭವಿಸುತ್ತಿದ್ದೇವೆ. ವಿಪರೀತವಾದ ಸಂಗತಿಗಳು ನಡೆದುಹೋದವು; 19ನೀನಾದರೋ, ದೇವರಿಗೆ ವಿರುದ್ಧ ಹೋರಾಡಲು ಯತ್ನಿಸಿದ್ದರಿಂದ ಶಿಕ್ಷೆಯಿಂದ ತಪ್ಪಿಸಿಕೊಳ್ಳುವೆ ಎಂದು ನೆನೆಸಬೇಡ," ಎಂದನು.

20 ಎಲ್ಲಕ್ಕಿಂತಲೂ ಮಿಗಿಲಾಗಿ ಅವರ ತಾಯಿಯ ವರ್ತನೆ ಅತೀ ಆಶ್ಚರ್ಯಕರವಾಗಿತ್ತು! ಆಕೆ
ಚಿರಸ್ಮರಣೆಗೆ ಪಾತ್ರಳಾದವಳು. ಒಂದೇ ದಿನದಲ್ಲಿ ತನ್ನ ಏಳು ಮಕ್ಕಳು ಕಣ್ಮುಂದೆ ಸತ್ತಿದ್ದರೂ, ದೇವರಲ್ಲಿ
ಅವಳಿಗಿದ್ದ ನಂಬಿಕೆಯ ನಿಮಿತ್ತ ಎಲ್ಲವನ್ನೂ ಧೈರ್ಯದಿಂದ ಸಹಿಸಿಕೊಂಡಳು. 21ಉದಾತ್ತ
ಮನೋಭಾವದಿಂದ ತುಂಬಿದವಳಾಗಿ, ತನ್ನ ಸ್ತ್ರೀಸಹಜವಾದ ಆವೇಶದೊಂದಿಗೆ ಪೌರುಷತ್ವವನ್ನೂ ಕೂಡಿಸಿ,
ಒಬ್ಬೊಬ್ಬನಿಗೂ ಮಾತೃಭಾಷೆಯಲ್ಲಿ: 22“ನೀವು ಹೇಗೆ ನನ್ನ ಉದರದಲ್ಲಿ ಉದ್ಭವಿಸಿದಿರಿ ಎಂಬುದನ್ನು ನಾನು
ಅರಿಯೆ. ನಿಮಗೆ ಜೀವವನ್ನೂ ಉಸಿರನ್ನೂ ಕೊಟ್ಟದ್ದು ನಾನಲ್ಲ. ನಿಮ್ಮ ದೇಹದ ಅಂಗಾಂಗಗಳನ್ನು
ಜೋಡಿಸಿದ್ದೂ ನಾನಲ್ಲ. 23ಲೋಕವನ್ನು ಸೃಷ್ಟಿಸಿದವರೇ ಅದನ್ನೆಲ್ಲ ಮಾಡಿದ್ದು. ಅವರೇ ಮಾನವ
ಕೋಟಿಯನ್ನು ಉಂಟುಮಾಡಿದವರು. ಸಕಲಕ್ಕೂ ಆದಿಕಾರಣರು ಅವರೇ. ಅವರ ಆಜ್ಞೆಗಳನ್ನು
ಪಾಲಿಸುವುದಕ್ಕಾಗಿ ನೀವು ಹಿಂಸೆಗೊಳಗಾಗುವುದರಿಂದ, ಅವರು ಕರುಣೆಯಿಂದ ನಿಮಗೆ ಜೀವವನ್ನೂ
ಉಸಿರನ್ನೂ ಹಿಂದಕ್ಕೆ ಕೊಡುವರು,” ಎಂದು ಹುರಿದುಂಬಿಸಿದಳು.

24 ಇದರಿಂದ ಅಂತಿಯೋಕನಿಗೆ ಅವಮಾನವಾದಂತೆ ತೋರಿತು. ತನ್ನನ್ನೇ ಅವಳು
ಹೀನೈಸುತ್ತಿದ್ದಾಳೆಂಬುದರ ಬಗ್ಗೆ ಸಂಶಯ ಮೂಡಿತು. ಅವಳ ಕೊನೆಯ ಮಗ ಇನ್ನೂ ಉಳಿದಿದ್ದ.
ಅಂತಿಯೋಕನು ಅವನನ್ನು ಮಾತುಗಳಿಂದ ಪುಸಲಾಯಿಸಿದನು; ಅವನು ತನ್ನ ಪೂರ್ವಜರ ಆಚಾರಗಳನ್ನು
ತೊರೆದು ಬಿಡುವುದಾದರೆ ಅವನನ್ನು ಐಶ್ವರ್ಯವಂತನನ್ನಾಗಿ, ಉನ್ನತ ಪದವಿಯುಳ್ಳವನಾಗಿ
ಮಾಡುವುದಾಗಿಯೂ ಅವನನ್ನು ತನ್ನ ಸ್ನೇಹಿತನೆಂದೆಣಿಸಿ ರಾಜ್ಯದ ವ್ಯವಹಾರಗಳ ಮೇಲ್ವಿಚಾರಕನಾಗಿ
ನೇಮಿಸುವುದಾಗಿಯೂ ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದನು. 25ಆದರೆ ಆ ಯುವಕನು ಅವನಿಗೆ
ಯಾವ ವಿಧದಲ್ಲೂ ಕಿವಿಗೊಡಲಿಲ್ಲ. ಆಗ ಅರಸನು ಆ ತಾಯಿಯನ್ನು ಬಳಿಗೆ ಕರೆಸಿ, ತನ್ನ ಪ್ರಾಣವನ್ನು
ಉಳಿಸಿಕೊಳ್ಳುವಂತೆ ಆ ಹುಡುಗನಿಗೆ ಬುದ್ಧಿ ಹೇಳಬೇಕೆಂದು ಒತ್ತಾಯಿಡಿದನ. 26ಅರಸನು ಬಹಳವಾಗಿ
ಒತ್ತಾಯಿಸಿದ ಮೇಲೆ, ತಾಯಿ ಮಗನಿಗೆ ಬುದ್ಧಿ ಹೇಳಿದಳು. 27ಮಗನ ಮೇಲೆ ಒರಗಿಕೊಂಡು, ಕ್ರೂರಿಯಾದ
ಅರಸನನ್ನು ಪರಿಹಾಸ್ಯ ಮಾಡುತ್ತಾ, ಮಾತೃಭಾಷೆಯಲ್ಲೇ ಹೀಗೆಂದಳು: “ಮಗನೇ, ನನ್ನ ಮೇಲೆ
ಮರುಕವಾಗಿರು. ಒಂಬತ್ತು ತಿಂಗಳು ನಿನ್ನನ್ನು ನನ್ನ ಉದರದಲ್ಲಿ ಹೊತ್ತೆ. ಮೂರು ವರ್ಷ ಮೊಲೆಯುಡಿಸಿ
ನಿನ್ನನ್ನು ಸಾಕಿಸಲಹಿದೆ. ನಿನ್ನ ಜೀವನದ ಈ ಗಳಿಗೆಯವರೆಗೂ ನಿನ್ನನ್ನು ಪೋಷಿಸಿ ಸಾಕಿದೆ. ನಿನ್ನ ಆರೈಕೆ
ಮಾಡಿದೆ. 28ಮಗನೇ, ಸ್ವರ್ಗವನ್ನೂ ಭೂಮಿಯನ್ನೂ ಅದರಲ್ಲಿರುವುದೆಲ್ಲವನ್ನೂ ನೋಡು, ಏನೂ ಇಲ್ಲದೆ
ದೇವರು ಅದೆಲ್ಲವನ್ನೂ ಉಂಟುಮಾಡಿದರು. ಮಾನವ ಕೋಟಿಯು ಸಹ ಅದೇ ರೀತಿ ಉಂಟಾಯಿತು;
ಇದನ್ನು ಒಪ್ಪಿಕೋ. 29ಈ ಕಟುಕನಿಗೆ ನೀನು ಹೆದರಬೇಡ. ನೀನು ನಿನ್ನ ಸಹೋದರರಿಗೆ ಯೋಗ್ಯ
ತಮ್ಮನೆಂದು ಸಾಬೀತು ಪಡಿಸು. ಸಾವನ್ನು ಅಪ್ಪು. ಹೀಗೆ ದೇವರ ಕರುಣೆಯಿಂದ, ನಿನ್ನ ಸಹೋದರರೊಂದಿಗೆ
ನಿನ್ನನ್ನು ನಾನು ಪುನಃ ಪಡೆಯುವಂತಾಗಲಿ!”

30 ಆಕೆ ಇನ್ನೂ ಮಾತಾಡುತ್ತಿರುವಾಗಲೇ, ಆ ಯುವಕನು, “ಏತಕ್ಕಾಗಿ ಇನ್ನೂ ಕಾದಿದ್ದೀರಿ? ನಾನು
ಅರಸನ ಆಜ್ಞೆಯನ್ನು ಪಾಲಿಸುವುದಿಲ್ಲ. ಬದಲಿಗೆ ಮೋಶೆಯ ಮುಖಾಂತರ ನಮ್ಮ ಪೂರ್ವಜರಿಗೆ ಕೊಟ್ಟ
ನಿಯಮವನ್ನು ಅನುಸರಿಸುತ್ತೇನೆ. 31ಹಿಬ್ರಿಯರಾದ ನಮ್ಮ ಜನರಿಗೆ ಇಂಥ ದುಷ್ಕೃತ್ಯಗಳನ್ನು ಎಸಗಿರುವ
ನೀನು ಖಂಡಿತವಾಗಿಯೂ ದೇವರ ಕೈಯಿಂದ ತಪ್ಪಿಸಿಕೊಳ್ಳುವಂತಿಲ್ಲ. 32ನಾವು ನಮ್ಮ ಪಾಪಗಳಿಗಾಗಿ
ಹಿಂಸೆಯನ್ನು ಅನುಭವಿಸುತ್ತಿದ್ದೇವೆ. 33ಜೀವಸ್ವರೂಪರಾದ ನಮ್ಮ ಸರ್ವೇಶ್ವರ ತಾತ್ಕಾಲಿಕವಾಗಿ ನಮ್ಮೊಡನೆ
ಕೋಪವಾಗಿದ್ದು ನಮ್ಮನ್ನು ಶಿಕ್ಷಿಸುತ್ತಿದ್ದಾರೆ; ಅವರು ತಮ್ಮ ದಾಸರೊಂದಿಗೆ ಪುನಃ ಸಂಧಾನ
ಮಾಡಿಕೊಳ್ಳುತ್ತಾರೆ. 34ಆದರೆ ದುಷ್ಟಕೇಡಿಗನೇ, ದೇವದ್ರೋಹಿಯೇ, ಮಹಾದುರುಳನೇ, ಸ್ವರ್ಗೀಯ ದೇವರ
ಮಕ್ಕಳ ಮೇಲೆ ಕೈಯೆತ್ತುವಂಥ ನೀನು ವ್ಯರ್ಥವಾಗಿ ಕೊಚ್ಚಿಕೊಳ್ಳಬೇಡ, ಅಸ್ಥಿರ ನಂಬಿಕೆಯಿಂದ
ಉಬ್ಬಿಹೋಗಬೇಡ; 35ಸರ್ವಶಕ್ತ, ಸರ್ವಜ್ಞಾನಿಯಾದ ದೇವರ ತೀರ್ಪಿನಿಂದ ನೀನು ಇನ್ನೂ
ತಪ್ಪಿಸಿಕೊಂಡಿಲ್ಲ. 36ಕೊಂಚಕಾಲ ಹಿಂಸೆಯನ್ನು ಅನುಭವಿಸಿದ ನನ್ನ ಸಹೋದರರು, ದೇವರು ಮಾಡಿದ
ಒಡಂಬಡಿಕೆಯ ಪ್ರಕಾರ ನಿತ್ಯಕ್ಕೂ ಹರಿಯುವ ಜೀವಜಲವನ್ನು ಕುಡಿದಿದ್ದಾರೆ. ಆದರೆ ನೀನೋ, ದೇವರ
ತೀರ್ಪಿನ ಪ್ರಕಾರ, ನಿನ್ನ ಅಹಂಕಾರಕ್ಕಾಗಿ ನ್ಯಾಯಯುತ ಶಿಕ್ಷೆಯನ್ನು ಪಡೆಯುವೆ. 37ನಾನೋ, ನನ್ನ
ಅಣ್ಣಂದಿರಂತೆ, ನಮ್ಮ ಪೂರ್ವಜರ ನಿಯಮಗಳಿಗಾಗಿ, ದೇಹವನ್ನೂ ಜೀವವನ್ನೂ ತ್ಯಾಗ ಮಾಡುತ್ತೇನೆ.

ಹಾಗೆಯೇ, ದೇವರು ತಮ್ಮ ಜನರ ಮೇಲೆ ಕರುಣೆತೋರಲಿ, ಅವರೊಬ್ಬರೇ ದೇವರೆಂದು ನೀನೂ ಕಷ್ಟ ಹಿಂಸೆಗಳ ನಡುವೆ ನಿವೇದಿಸುವಂತೆ ಮಾಡಲಿ ಎಂದು ದೇವರಲ್ಲಿ ವಿನಂತಿಸಿಕೊಳ್ಳುತ್ತೇನೆ. 38ಅದಲ್ಲದೆ, ನನ್ನ ಹಾಗು ನನ್ನ ಅಣ್ಣಂದಿರ ಮುಖಾಂತರ ನಮ್ಮ ರಾಷ್ಟ್ರದ ಮೇಲೆ ನ್ಯಾಯವಾಗಿ ಎರಗಿರುವ ತಮ್ಮ ಕೋಪಾಗ್ನಿಯನ್ನು ಕೊನೆಗಾಣಿಸಬೇಕೆಂದು ಆ ದೇವರಿಗೆ ಮೊರೆಯಿಡುತ್ತೇನೆ," ಎಂದು ಹೇಳಿದನು.

39 ಈ ನಿಂದೆಯ ಮಾತುಗಳಿಂದ ಉದ್ರೇಕಗೊಂಡ ಅಂತಿಯೋಕನು ಕೋಪದಿಂದ ಕೆರಳಿ, ಇತರರಿಗಿಂತಲೂ ಹೆಚ್ಚು ಕಠಿಣವಾಗಿ ಆ ಯುವಕನನ್ನು ಬಾಧಿಸಿದನು. 40ಯುವಕನು ಹೀಗೆ ಸರ್ವೇಶ್ವರನಲ್ಲಿ ಪೂರ್ಣ ಭರವಸೆಯಿಟ್ಟು ಸಜ್ಜನನಾಗಿ ಸತ್ತನು. 41ತನ್ನ ಎಲ್ಲಾ ಮಕ್ಕಳ ತರುವಾಯ ತಾಯಿಯೂ ಮಡಿದಳು.

42 ಬಲಿಭೋಜನ ಹಾಗೂ ಯೆಹೂದ್ಯರ ಘೋರಬಾಧೆಗಳ ಬಗ್ಗೆ ಸಾಕಷ್ಟು ಹೇಳಿದ್ದಾಯಿತು.

## ಯೂದ ಮಕ್ಕಬಿಯನ ದಂಗೆ

(1 ಮಕ್ಕಬಿ 3.1–26)

**8** ಮಕ್ಕಬಿಯ ಎನ್ನಲಾದ ಯೂದನು ಮತ್ತು ಅವನ ಸಂಗಡಿಗರು ಊರುಕೇರಿಗಳನ್ನು ಪ್ರವೇಶಿಸಿ ಯೆಹೂದ್ಯ ಧರ್ಮಕ್ಕೆ ಪ್ರಾಮಾಣಿಕರಾಗಿದ್ದ ತಮ್ಮ ಬಂಧುಮಿತ್ರರನ್ನು ಗುಟ್ಟಾಗಿ ಕರೆಸಿದರು. ಹೀಗೆ ಸುಮಾರು ಆರುಸಾವಿರ ಜನರನ್ನು ಒಂದುಗೂಡಿಸಿದರು. 2ಸಕಲರಿಂದ ತುಳಿತಕ್ಕೆ ಗುರಿಯಾದ ತಮ್ಮ ಜನರನ್ನು ಕಟಾಕ್ಷಿಸಲು, ವಿಶ್ವಾಸರಹಿತ ಜನರಿಂದ ಹೊಲಸಾದ ದೇವಾಲಯಕ್ಕೆ ಕೃಪೆತೋರಲು, 3ಕ್ರಮೇಣ ನಾಶವಾಗಿ ನೆಲಸಮವಾಗುತ್ತಿದ್ದ ಜೆರುಸಲೇಮ್ ನಗರಕ್ಕೆ ದಯೆತೋರಲು, ರಕ್ತಪಾತಕ್ಕೆ ಗುರಿಯಾದವರು ದೇವಕೃಪೆಗಾಗಿ ಮಾಡುವ ಕೂಗಿಗೆ ಕಿವಿಗೊಡಲು, 4ಪಾವನ ಶಿಶುಗಳ ಅನ್ಯಾಯದ ಕಗ್ಗೊಲೆಯನ್ನೂ ತಮ್ಮ ಪವಿತ್ರನಾಮಕ್ಕೆ ಮಾಡಲಾದ ದೂಷಣೆಗಳನ್ನೂ ಜ್ಞಾಪಿಸಿಕೊಳ್ಳಲು ಹಾಗು ಕೇಡಿನ ಮೇಲೆ ತಮಗಿರುವ ದ್ವೇಷವನ್ನು ವ್ಯಕ್ತಪಡಿಸಲು, ಸರ್ವೇಶ್ವರಸ್ವಾಮಿಯಲ್ಲಿ ಮೊರೆಯಿಟ್ಟರು.

5 ಹೀಗೆ ಮಕ್ಕಬಿಯನು ಹೇರಳವಾದ ಸೈನ್ಯವನ್ನು ಒಂದುಗೂಡಿಸಿದನು. ಅನ್ಯಧರ್ಮೀಯರು ಅವರನ್ನು ಎದುರಿಸಲು ಸಾಧ್ಯವಾಗಲಿಲ್ಲ. ಕಾರಣ ಇಸ್ರಯೇಲಿನ ಮೇಲಿದ್ದ ದೇವರ ಕೋಪವು ಕೃಪೆಯಾಗಿ ಮಾರ್ಪಟ್ಟಿತ್ತು. 6ಮಕ್ಕಬಿಯನು ಪಟ್ಟಣಗಳಿಗೂ ಗ್ರಾಮಗಳಿಗೂ ದಿಢೀರೆಂದು ನುಗ್ಗಿ ಬೆಂಕಿಯಿಡುತ್ತಿದ್ದನು. ಶತ್ರುಗಳನ್ನು ಹಂಚಿಕೆಯಿಂದ ಸದೆಬಡಿಯಲು ಯೋಗ್ಯವಾದ ಸ್ಥಾವರಗಳನ್ನು ವಶಪಡಿಸಿಕೊಂಡು, ಅಲ್ಲಿದ್ದ ಅನೇಕರನ್ನು ಓಡಿಸಿಬಿಡುತ್ತಿದ್ದನು. 7ಇಂಥ ಧಾಳಿಮಾಡಲು ರಾತ್ರಿ ಬಹಳ ಅನುಕೂಲಕರವಾಗಿತ್ತು. ಅವನ ಪರಾಕ್ರಮದ ಸುದ್ದಿ ಎಲ್ಲಾ ಕಡೆ ಹರಡಿತು.

## ಮಕ್ಕಬಿಯನ ಮೇಲೆ ನಿಕಾನೋರನ ದಾಳಿ

8ಯೂದನು ಕ್ರಮೇಣ ಮುಂದುವರಿಯುತ್ತಿದ್ದು, ದಾಳಿಮಾಡಿದಾಗಲೆಲ್ಲ ಜಯವನ್ನೇ ಗಳಿಸುವುದನ್ನು ಕಂಡ ಜೆರುಸಲೇಮಿನ ರಾಜ್ಯಪಾಲ ಫಿಲಿಪ್ಪನು, ಅರಸನ ರಾಜ್ಯಾಧಿಕಾರಿಗಳಿಗೆ ಸಹಾಯ ಮಾಡಬೇಕೆಂದು ಸೆಲೆಸಿರಿಯಾ ಹಾಗು ಫೆನೀಷಿಯಾದ ರಾಜ್ಯಪಾಲ ಪ್ತೊಲೆಮೇಯನಿಗೆ ಬರೆದನು. 9ಆಗ ಪ್ತೊಲೆಮೇಯನು ಕೂಡಲೆ ಅರಸನ ಮುಖ್ಯ ಸ್ನೇಹಿತರಲ್ಲೊಬ್ಬನಾದ, ಹಾಗು ಪತ್ರೋಕ್ಲಸಿನ ಮಗನಾದ ನಿಕಾನೋರನನ್ನು ಕಳುಹಿಸಿದನು. ಇಡೀ ಯೆಹೂದ್ಯ ಕುಲವನ್ನೇ ನಾಶಗೊಳಿಸಬೇಕೆಂಬ ಉದ್ದೇಶದಿಂದ 20,000 ಸೈನಿಕರಿಗಿಂತಲೂ ಹೆಚ್ಚಾಗಿದ್ದ ಹಾಗೂ ನಾನಾ ಅನ್ಯಧರ್ಮೀಯರಿಂದ ಕೂಡಿದ ಪಡೆಗಳನ್ನು ನಿಕಾನೋರನ ಕೈ ಕೆಳಗೆ ನೇಮಿಸಿದನು. ಅವನಿಗೆ ಸಹಾಯಕನನ್ನಾಗಿ ಸೈನಿಕ ಸೇವೆಯಲ್ಲಿ ನುರಿತ ಸೇನಾಧಿಕಾರಿಯಾಗಿದ್ದ ಗೋರ್ಗಿಯ ಎಂಬವನನ್ನು ಸಹ ಕಳುಹಿಸಿದನು. 10ಅರಸ ಅಂತಿಯೋಕನಿಂದ ರೋಮನರಿಗೆ 68,000 ಕಿಲೋಗ್ರಾಂ ಬೆಳ್ಳಿನಾಣ್ಯಗಳು ಸಲ್ಲುವುದು ಬಾಕಿಯಿತ್ತು. ಯೆಹೂದ್ಯ ಸೆರೆಯಾಳುಗಳನ್ನು ಗುಲಾಮರನ್ನಾಗಿ ಮಾರಿ ಬಂದ ಹಣದಿಂದ ಈ ಸಾಲವನ್ನು ತೀರಿಸಲು ನಿಕಾನೋರನು ನಿರ್ಧರಿಸಿದನು.

11 ಪ್ರತಿಯೊಬ್ಬ ಯೆಹೂದ್ಯನನ್ನು ಒಂದು ಕಿಲೋಗ್ರಾಂ ಬೆಳ್ಳಿಗಿಂತಲೂ ಕಡಿಮೆ ಕ್ರಯಕ್ಕೆ ಮಾರಲಾಗುವುದೆಂದು ನಿಕಾನೋರನು ತೀರ ಪ್ರದೇಶದ ಪಟ್ಟಣಗಳಿಗೆಲ್ಲ ಪ್ರಚುರಪಡಿಸಿದನು. ಸರ್ವಶಕ್ತ ದೇವರಿಂದ ದಂಡನೆ ಶೀಘ್ರದಲ್ಲೇ ಅವನ ಮೇಲೆ ಎರಗಲಿದೆಯೆಂಬುದನ್ನು ಅವನು ಅರಿಯಲಿಲ್ಲ.

## ನಿಕಾನೋರನ ಗುಟ್ಟು ಯೂದನಿಗೆ ರಟ್ಟು

(1 ಮಕ್ಕಬಿ. 3.42–54)

12 ನಿಕಾನೋರನ ದಾಳಿಯ ಬಗ್ಗೆ ಯೂದನಿಗೆ ಗೊತ್ತಾಯಿತು. ಶತ್ರುಸೈನ್ಯದ ಆಗಮನದ ಬಗ್ಗೆ ತನ್ನ ಸಂಗಡಿಗರಿಗೆ ಅವನು ತಿಳಿಸಿದಾಗ, 13ಹೇಡಿಗಳೂ ದೇವರ ನೀತಿಯ ಬಗ್ಗೆ ಅಪನಂಬಿಕೆಯುಳ್ಳವರೂ ಆದವರೆಲ್ಲರು ಹಿಂಜರಿದು ಓಡಿಹೋದರು. 14ಇತರರಾದರೋ, ಯುದ್ಧವು ಪ್ರಾರಂಭವಾಗುವ ಮುನ್ನ ತಮ್ಮನ್ನು ಗುಲಾಮರನ್ನಾಗಿ ಮಾರಿದ ನಿಕಾನೋರನ ಕೈಯಿಂದ ರಕ್ಷಣೆ ಪಡೆಯಲು ಪಾತ್ರರಾಗುವಂತೆ ದೇವರಲ್ಲಿ ಪ್ರಾರ್ಥಿಸಿ, ತಮ್ಮ ಮಿಕ್ಕುಳಿದ ಸೊತ್ತನ್ನೆಲ್ಲ ಮಾರಿಬಿಟ್ಟರು. 15ತಮಗೋಸ್ಕರವಲ್ಲದಿದ್ದರೂ, ದೇವರು ಪೂರ್ವಜರೊಂದಿಗೆ ಮಾಡಿದ ವಾಗ್ದಾನದ ನಿಮಿತ್ತ ಮಹೋನ್ನತ ಹಾಗು ಮಹಿಮಾಮಯ ದೇವರು, ಅವರನ್ನು ತಮ್ಮ ಸ್ವಂತ ಪ್ರಜೆಯನ್ನಾಗಿ ಆರಿಸಿಕೊಂಡ ನಿಮಿತ್ತ, ತಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿದರು. 16ಮಕ್ಕಬಿಯನು ತನ್ನಲ್ಲಿದ್ದ ಆರುಸಾವಿರ ಸೈನಿಕರನ್ನು ಒಂದುಗೂಡಿಸಿ, "ಶತ್ರುವಿಗೆ ಭಯಪಡಬೇಡಿ, ನಮಗೆ ಎದುರಾಗಿ ಬರುವ ದುಷ್ಟ ಅನ್ಯಧರ್ಮೀಯರ ಜನಸ್ತೋಮಕ್ಕೆ ಅಂಜಬೇಡಿ; 17ಬದಲಿಗೆ ಮಹಾದೇವಾಲಯಕ್ಕೆ ವಿರುದ್ಧ ಅನ್ಯಧರ್ಮೀಯರು ಎಸಗಿದ ದೌರ್ಜನ್ಯವನ್ನು, ಅಪಹಾಸ್ಯಕ್ಕೆ ಗುರಿಯಾದ ಜೆರುಸಲೇಮಿನ ಬಾಧೆಯನ್ನು ಹಾಗು ಪೂರ್ವಜರ ಸಂಪ್ರದಾಯವನ್ನು ಬಲವಂತದಿಂದ ತೊರೆಯಬೇಕೆಂದು ಅನ್ಯರು ಮಾಡಿದ ಪ್ರಯತ್ನವನ್ನು ನಮ್ಮ ಕಣ್ಮುಂದೆ ಇಟ್ಟುಕೊಂಡು, ಘನತೆಯಿಂದ ಹೋರಾಡೋಣ. 18ಅವರು ಶಸ್ತ್ರಾಸ್ತ್ರಗಳಲ್ಲಿ ನಂಬಿಕೆಯಿಟ್ಟವರು, ನಾವಾದರೋ, ನಮ್ಮ ಮೇಲೆ ಬೀಳುವಂಥ ಜನರನ್ನು ಮಾತ್ರವಲ್ಲ, ಬೇಕಾದರೆ ಇಡೀ ವಿಶ್ವವನ್ನೇ ಕ್ಷಣಮಾತ್ರದಲ್ಲಿ ಕೆಡವಲು ಸಮರ್ಥರಾದ ಸರ್ವಶಕ್ತ ದೇವರಲ್ಲಿ ನಂಬಿಕೆ ಇಟ್ಟಿದ್ದೇವೆ," ಎಂದು ಹುರಿದುಂಬಿಸಿದನು.

19 ಇದಲ್ಲದೆ, ಸನ್ಹೇರೀಬನ ಕಾಲದಲ್ಲಿ, 1,85,000 ಸೈನಿಕರಿದ್ದ ಪಡೆಯನ್ನು ನಾಶಗೊಳಿಸಲಾಯಿತು. 20ಒಂದು ಸಾರಿ ಬಾಬಿಲೋನಿಯದಲ್ಲಿ 8,000 ಯೆಹೂದ್ಯರು 4,000 ಮ್ಯಾಸಿಡೋನ್ಯರಿಗೆ ನೆರವಿತ್ತು, 1,20,000 ಗಲಾತ್ಯರನ್ನು ಸದೆಬಡಿದು, ಬೇಕಾದಷ್ಟು ಕೊಳ್ಳೆಯನ್ನು ತೆಗೆದುಕೊಂಡರು. ಹೀಗೆ ದೇವರು ಪೂರ್ವಜರಿಗೆ ನೀಡಿದ ಸಹಾಯವನ್ನು ಯೂದನು ತನ್ನ ಸಂಗಡಿಗರ ನೆನಪಿಗೆ ತಂದನು.

## ನಿಕಾನೋರನ ಪರಾಭವ

(1 ಮಕ್ಕಬಿ 3.55–4.27)

21 ಈ ಮಾತುಗಳಿಂದ ಮಕ್ಕಬಿಯನು ಅವರಲ್ಲಿ ಧೈರ್ಯತುಂಬಿ, ತಮ್ಮ ಧರ್ಮನಿಯಮಕ್ಕಾಗಿ ಹಾಗು ತಮ್ಮ ರಾಷ್ಟ್ರಕ್ಕಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಿರುವಂತೆ ಮಾಡಿದನು. ಅನಂತರ ತನ್ನ ಸೈನ್ಯವನ್ನು ನಾಲ್ಕು ದಳಗಳನ್ನಾಗಿ ವಿಂಗಡಿಸಿದನು. 22ತನ್ನ ಸಹೋದರರಾದ ಸಿಮೋನ್, ಜೋಸೆಫ್ ಮತ್ತು ಯೋನಾತನ್ ಎಂಬವರನ್ನು ಕರೆದು, 1500 ಸೈನಿಕರನ್ನೊಳಗೊಂಡ ದಳಗಳಿಗೆ ಒಬ್ಬೊಬ್ಬರನ್ನು ನೇಮಿಸಿದನು. 23ಅಲ್ಲದೆ ಪವಿತ್ರ ಗ್ರಂಥವನ್ನು ಜನರಿಗೆ ಸ್ವರವೆತ್ತಿ ಪಠಿಸಲು ಎಲ್ಲಾಜಾರನನ್ನು ನೇಮಿಸಿದನು. "ನಮ್ಮ ಸಹಾಯ ದೇವರಿಂದ" ಎಂಬ ಗುಟ್ಟು ನುಡಿಯನ್ನು ಅವರಿಗೆ ಕೊಟ್ಟನು. ಪ್ರಥಮ ಸೇನಾದಳವನ್ನು ತಾನೇ ತೆಗೆದುಕೊಂಡು ನಿಕಾನೋರನೊಡನೆ ಯುದ್ಧ ಮಾಡಲು ನಿಂತನು.

24 ಸರ್ವಶಕ್ತ ದೇವರು ಅವರ ಪಕ್ಷವಹಿಸಿ ಹೋರಾಡುತ್ತಿರಲಾಗಿ ಯೆಹೂದ್ಯರು 9,000ಕ್ಕಿಂತಲೂ ಹೆಚ್ಚು ಶತ್ರುಸೈನಿಕರನ್ನು ಸದೆಬಡಿದರು. ನಿಕಾನೋರನ ಸೈನಿಕರಲ್ಲಿ ಅನೇಕರನ್ನು ಗಾಯಗೊಳಿಸಿದರು, ಊನಮಾಡಿದರು, ಎಲ್ಲರೂ ಪಲಾಯನಗೈಯುವಂತೆ ಮಾಡಿದರು. 25ಯೆಹೂದ್ಯರನ್ನು ಗುಲಾಮರನ್ನಾಗಿ ವ್ಯಾಪಾರಮಾಡಿ ಕೊಂಡುಕೊಳ್ಳಲು ಬಂದವರ ಕೈಯಲ್ಲಿದ್ದ ಹಣವನ್ನು ಕಿತ್ತುಕೊಂಡರು. ಬಲುದೂರ ಶತ್ರುಗಳನ್ನು ಬೆನ್ನಟ್ಟಿದರು. ಬಹು ಹೊತ್ತಾದ ನಂತರ ಹಿಂದಿರುಗಿ ಬಂದರು. 26ಅದು ಸಬ್ಬತ್ತಿನ ಹಿಂದಿನ

ದಿನವಾಗಿದ್ದರಿಂದ ಅವರು ಬೆನ್ನಟ್ಟಿಕೊಂಡು ಮುಂದುವರಿಯಲಿಲ್ಲ. 27ಶತ್ರುಗಳ ಶಸ್ತ್ರಗಳನ್ನು ಕೂಡಿಸಿಕೊಂಡು, ಸತ್ತವರಿಂದ ಕೊಳ್ಳೆಯನ್ನು ಕಿತ್ತುಕೊಂಡನಂತರ, ಸಬ್ಬತ್ ದಿನವನ್ನು ಆಚರಿಸಿದರು. ದೇವರು ತಮ್ಮನ್ನು ಸುರಕ್ಷಿತವಾಗಿ ಆ ದಿನದವರೆಗೆ ಕಾದಿರಿಸಿದ್ದಕ್ಕಾಗಿ, ತಮ್ಮ ಕೃಪೆಯ ಪ್ರಥಮ ಸಂಕೇತವಾಗಿ ಆ ದಿನವನ್ನು ಅನುಗ್ರಹಿಸಿದ್ದಕ್ಕಾಗಿ ದೇವರಿಗೆ ಸ್ತುತಿ ಸ್ತೋತ್ರಗಳನ್ನು ಸಲ್ಲಿಸಿದರು. 28ಸಬ್ಬತ್‌ದಿನ ಕಳೆದ ನಂತರ ಹಿಂಸೆ ಬಾಧೆಗಳಿಗೆ ತುತ್ತಾಗಿದ್ದವರಿಗೆ, ವಿಧವೆಯರಿಗೆ ಮತ್ತು ಅನಾಥರಿಗೆ ತಮ್ಮ ಕೊಳ್ಳೆಯ ಒಂದು ಪಾಲನ್ನು ಕೊಟ್ಟುಬಿಟ್ಟರು; ಉಳಿದದ್ದನ್ನು ತಮ್ಮ ತಮ್ಮಲ್ಲಿ ಹಾಗು ಕುಟುಂಬದವರೊಡನೆ ಹಂಚಿಕೊಂಡರು. 29ಇದಾದ ನಂತರ ಸಾರ್ವತ್ರಿಕ ಪ್ರಾರ್ಥನೆಯನ್ನು ಮಾಡಿ, ಕರುಣಾಮಯಿಯಾದ ಸರ್ವೇಶ್ವರನು ತಮ್ಮ ದಾಸರೊಂದಿಗೆ ಸಂಪೂರ್ಣ ಸಂಧಾನರಾಗಬೇಕೆಂದು ಬಿನ್ನಯಿಸಿದರು.

### ತಿಮೊಥೇಯ ಮತ್ತು ಬಾಕ್ಕಿದೆಸರ ಸೋಲು

30 ತಿಮೊಥೇಯ ಮತ್ತು ಬಾಕ್ಕಿದೆಸರೊಡನೆ ಮಾಡಿದ ಹೋರಾಟದಲ್ಲಿ 20,000ಕ್ಕಿಂತಲೂ ಹೆಚ್ಚು ಮಂದಿ ಶತ್ರುಸೈನಿಕರನ್ನು ಯೆಹೂದ್ಯರು ಹತಮಾಡಿದರು. ಅತ್ಯುನ್ನತವಾದ ದುರ್ಗಗಳನ್ನು ವಶಪಡಿಸಿಕೊಂಡರು. ಹೇರಳವಾಗಿದ್ದ ಕೊಳ್ಳೆಯನ್ನು ಭಾಗಮಾಡಿ, ಹಿಂಸೆಬಾಧೆಗಳಿಗೆ ಗುರಿಯಾಗಿದ್ದವರಿಗೆ, ಅನಾಥರಿಗೆ ಮತ್ತು ವಿಧವೆಯರಿಗೆ ಹಾಗು ವೃದ್ಧರಿಗೆ ಸಮನಾಗಿ ಹಂಚಿಕೊಟ್ಟರು. 31ತಮ್ಮ ಶತ್ರುವಿನ ಶಸ್ತ್ರಗಳನ್ನು ಶೇಖರಿಸಿ ಅವರನ್ನು ಸದೆಬಡಿಯಲು ಅನುಕೂಲಕರವಾದ ಸ್ಥಾವರಗಳಲ್ಲಿ ಇಟ್ಟರು. ಮಿಕ್ಕ ಕೊಳ್ಳೆಯನ್ನು ಜೆರುಸಲೇಮಿಗೆ ಎತ್ತಿಕೊಂಡು ಹೋದರು. 32ಶೀರಾ ದುಷ್ಟವ್ಯಕ್ತಿಯಾಗಿದ್ದು ಯೆಹೂದ್ಯರನ್ನು ಬಹಳವಾಗಿ ಹಿಂಸಿಸಿದ ಹಾಗು ತಿಮೋಥೇಯನ ಸೇನಾಧಿಪತಿಯಾಗಿದ್ದ ವ್ಯಕ್ತಿಯನ್ನು ಕೊಂದು ಹಾಕಿದರು. 33ತಮ್ಮ ಪೂರ್ವಜರ ನಗರದಲ್ಲಿ ವಿಜಯೋತ್ಸವವನ್ನು ಕೊಂಡಾಡುತ್ತಿರುವಾಗ, ಕಲೆಸ್ತೇನೆಸ್ ಮತ್ತು ಇತರರನ್ನು ಸುಟ್ಟುಹಾಕಿದರು; ಇವರು ಒಂದು ಚಿಕ್ಕ ಮನೆಯಲ್ಲಿ ಆಶ್ರಯ ಪಡೆದಿದ್ದರು. ಇವರೇ ಮಹಾ ದೇವಾಲಯದ ದ್ವಾರಗಳಿಗೆ ಬೆಂಕಿಯಿಟ್ಟವರು; ತಮ್ಮ ವಿಶ್ವಾಸ ಹೀನತೆಗೆ ತಕ್ಕ ಪ್ರತಿಫಲವನ್ನು ಪಡೆದರು.

34 ಯೆಹೂದ್ಯರನ್ನು ಮಾರಲು ಸಾವಿರ ವ್ಯಾಪಾರಿಗಳನ್ನು ತಂದ ಮುಮ್ಮಡಿ ಶಾಪಗ್ರಸ್ತ ನಿಕಾನೋರನು, 35ಯಾವ ಎದುರಾಳಿಗಳನ್ನು ಹೆಚ್ಚಾಗಿ ತಾತ್ಸಾರ ಮಾಡುತ್ತಿದ್ದನೋ, ಆ ಜನರಿಂದಲೇ ಪರಾಭವಗೊಂಡನು. ಸರ್ವೇಶ್ವರಸ್ವಾಮಿ ಆ ಜನರಿಗೆ ಬೆಂಬಲಿಗರಾಗಿದ್ದರು. ತನ್ನ ಅಮೂಲ್ಯ ಸಮವಸ್ತ್ರವನ್ನು ತೆಗೆದುಹಾಕಿ, ತಪ್ಪಿಸಿಕೊಂಡು ಓಡುವ ಗುಲಾಮನಂತೆ ಅಂತಿಯೋಕ್ಯದವರೆಗೆ ಪಲಾಯನಗೈದನು; ತನ್ನ ಪಡೆಯನ್ನೆಲ್ಲಾ ಕಳೆದುಕೊಂಡದ್ದೇ ಅವನು ಗಳಿಸಿದ 'ವಿಜಯ'ವಾಗಿತ್ತು! 36ಜೆರುಸಲೇಮಿನ ಜನರನ್ನು ಮಾರಿಬಂದ ಹಣದಿಂದ ರೋಮನ್ನರಿಗೆ ಸಲ್ಲಿಸಬೇಕಾಗಿದ್ದ ಸಾಲವನ್ನು ತೀರಿಸಲು ಪ್ರಯತ್ನಿಸಿದಂಥ ಈ ವ್ಯಕ್ತಿಯೇ, ಯೆಹೂದ್ಯರಿಗೆ ಯಾವ ಹಾನಿಯನ್ನೂ ಮಾಡಲು ಸಾಧ್ಯವಿಲ್ಲವೆಂದು ಘೋಷಿಸಿದನು. ಕಾರಣ, ಯೆಹೂದ್ಯರಿಗೆ ಒಬ್ಬ ಮಹಾ ರಕ್ಷಕನಿದ್ದನು; ಮತ್ತು ಆ ರಕ್ಷಕನು ನೀಡಿದ ಆಜ್ಞೆಗಳನ್ನು ಅವರು ಪಾಲಿಸುತ್ತಿದ್ದರು.

### ಅಂತಿಯೋಕನಿಗೆ ಸರ್ವೇಶ್ವರನ ಶಿಕ್ಷೆ

(1 ಮಕ್ಕಬಿ. 6.1–7; 2 ಮಕ್ಕಬಿ. 1.11–17)

**9** ಅದೇ ಸಂದರ್ಭದಲ್ಲಿ ಅಂತಿಯೋಕನು ಪರ್ಷಿಯಾ ಪ್ರಾಂತ್ಯದಿಂದ ದಿಕ್ಕಾಪಾಲಾಗಿ ಹಿಮ್ಮೆಟ್ಟಬೇಕಾಯಿತು. 2ಅವನು 'ಪೆರ್ಸೆಪೊಲಿ' ಎಂಬ ಪಟ್ಟಣವನ್ನು ಹೊಕ್ಕು ಅಲ್ಲಿನ ದೇವಾಲಯಗಳನ್ನು ಲೂಟಿಮಾಡಿ, ಪಟ್ಟಣವನ್ನು ಆಕ್ರಮಿಸಬೇಕೆಂದಿದ್ದನು. ಆಗ ಅಲ್ಲಿನ ಜನರು ರಕ್ಷಣೆಗಾಗಿ ಶಸ್ತ್ರಗಳೊಡನೆ ಧಾವಿಸಿಬರಲು ಅಂತಿಯೋಕನಿಗೆ ಮತ್ತು ಅವನ ಸೈನ್ಯಕ್ಕೆ ಸೋಲಾಯಿತು. ತತ್ಪರಿಣಾಮವಾಗಿ, ಸ್ಥಳೀಯ ನಿವಾಸಿಗಳು ಅಂತಿಯೋಕನನ್ನು ಓಡಿಸಿಬಿಟ್ಟರು; ನಾಚಿಕೆಗೇಡಿನಿಂದ ಅವನು ಹಿಮ್ಮೆಟ್ಟಬೇಕಾಯಿತು. 3ಅವನು ಎಕ್‌ಬತಾನಾದಲ್ಲಿರುವಾಗ, ನಿಕಾನೋರನಿಗೂ ತಿಮೊಥೇಯನ ಪಡೆಗಳಿಗೂ ಉಂಟಾದುದೆಲ್ಲದರ ಸಮಾಚಾರ ಸಿಕ್ಕಿತು. 4ಕೋಪದಿಂದ ಕೆರಳಿ, ಅವನನ್ನು ಓಡಿಸಿದ್ದಕ್ಕಾಗಿ ಯೆಹೂದ್ಯರಿಗೆ ಮುಯ್ಯಿತೀರಿಸುವ

ಯೋಜನೆಯನ್ನು ಮಾಡಿದನು. ಆದುದರಿಂದ ಜೆರುಸಲೇಮನ್ನು ಮುಟ್ಟುವವರೆಗೂ ರಥವನ್ನು
ನಿಲ್ಲಿಸಬಾರದೆಂದು ಸಾರಥಿಗೆ ಆಜ್ಞೆ ಇತ್ತನು. ಆದರೆ ದೇವರ ತೀರ್ಪು ಅವನೊಂದಿಗೆ ಸವಾರಿ ಮಾಡುತ್ತಿತ್ತು;
ಕಾರಣ, “ನಾನು ಅಲ್ಲಿಗೆ ಹೋದಾಗ ಇಡೀ ಜೆರುಸಲೇಮನ್ನು ಯೆಹೂದ್ಯರ ಸಮಾಧಿಯನ್ನಾಗಿ
ಮಾರ್ಪಡಿಸುವೆನು” ಎಂದು ದರ್ಪದಿಂದ ನುಡಿದಿದ್ದನು.

5 ಆದರೆ ಎಲ್ಲವನ್ನೂ ನೋಡುವ ಸರ್ವೇಶ್ವರ, ಇಸ್ರಯೇಲಿನ ದೇವರು, ಅವನಿಗೆ
ಅಗೋಚರವಾದೊಂದು ಮಾರಕ ವ್ಯಾಧಿ ಬರುವಂತೆ ಮಾಡಿದರು. ರಥವನ್ನು ನಿಲ್ಲಿಸಿ ಮಾತಾಡುತ್ತಿರುವಾಗಲೆ
ದಿಢೀರೆಂದು ಹೊಟ್ಟೆಯಲ್ಲಿ ನೋವು ಉದ್ಭವಿಸಿತು; ಕಟುವಾಗಿ ಕರುಳು ಚುಚ್ಚಿದಂತಾಗುತ್ತಿತ್ತು. ಅದಕ್ಕೆ ಯಾವ
ಔಷಧವೂ ದೊರಕಲಿಲ್ಲ. 6ಅದು ನ್ಯಾಯವಾದದ್ದೇ! ಕಾರಣ, ಅವನು ಇತರರ ಹೊಟ್ಟೆಯನ್ನು ಹಲವಾರು
ವಿಚಿತ್ರ ರೀತಿಯಲ್ಲಿ ತಿವಿದಿದ್ದನು. 7ಆದರೂ ಸಹ, ಅವನು ತನ್ನ ದಬ್ಬಾಳಿಕೆಯನ್ನು ನಿಲ್ಲಿಸಿರಲಿಲ್ಲ. ಬದಲಿಗೆ
ಇನ್ನೂ ಹೆಚ್ಚು ಅಹಂಕಾರದಿಂದ ಯೆಹೂದ್ಯರ ಮೇಲೆ ಕೋಪಾಗ್ನಿಯನ್ನು ಕಾರುತ್ತಾ, ಇನ್ನೂ ವೇಗದಿಂದ
ರಥವನ್ನು ನಡೆಸಬೇಕೆಂದು ಅಪ್ಪಣೆ ಮಾಡಿದನು. ಪರಿಣಾಮವಾಗಿ, ರಥವು ನಾಗಾಲೋಟದಿಂದ
ಸಾಗುತ್ತಿರುವಾಗ ದೊಪ್ಪನೆ ಕೆಳಗೆ ಬಿದ್ದನು. ಹಾಗೆ ಬೀಳಲಾಗಿ ಅಡಿಯಿಂದ ಮುಡಿಯವರೆಗೂ ತುಂಬಾ
ಏಟಾಯಿತು. 8ಸ್ವಲ್ಪಕಾಲಕ್ಕೆ ಮುಂಚೆ ಸಮುದ್ರದ ಅಲೆಗಳನ್ನೇ ತನ್ನ ಇಚ್ಛೆಯಂತೆ ನಡೆಸಲು ಸಾಧ್ಯ, ಬೆಟ್ಟವನ್ನೇ
ತಕ್ಕಡಿಯಲ್ಲಿ ತೂಗಲು ತನಗೆ ಸಾಧ್ಯ ಎಂದು ಹೇಳಿಕೊಂಡವನು ತಟ್ಟನೆ ನೆಲದ ಮೇಲೆ ಬಿದ್ದುಬಿಟ್ಟನು.
ಅವನನ್ನು ಹಾಸಿಗೆಯಲ್ಲಿ ಹೊತ್ತುಕೊಂಡು ಹೋಗಬೇಕಾಯಿತು. ಇದರಿಂದ ದೇವರ ಶಕ್ತಿ ಸರ್ವರಿಗೂ
ಗೋಚರವಾಯಿತು. 9ಈ ವಿಶ್ವಾಸರಹಿತ ವ್ಯಕ್ತಿಯ ಕಣ್ಣುಗಳಿಗೂ ಹುಳು ಬಿದ್ದವು; ಅವನು ಜೀವದಿಂದ
ಇರುವಾಗಲೇ ನರಕಯಾತನೆ ಅನುಭವಿಸಿದನು; ಅವನ ದೇಹ ಕೊಳೆತು ಹೋಯಿತು. ಕ್ಷಯಿಸುತ್ತಿದ್ದ ದೇಹದ
ದುರ್ವಾಸನೆಯನ್ನು ಸೈನ್ಯಕ್ಕೆ ಸಹಿಸಲಸಾಧ್ಯವಾಯಿತು. 10ಸ್ವಲ್ಪಕಾಲಕ್ಕೆ ಮುಂಚೆ, ಆಕಾಶದ ನಕ್ಷತ್ರಗಳನ್ನೇ
ಹಿಡಿಯಬಲ್ಲೆ ಎಂದು ಹೇಳಿದ ಮನುಷ್ಯನನ್ನು ಹೊತ್ತುಕೊಂಡು ಹೋಗುವುದು ಅಸಾಧ್ಯವಾಯಿತು. ಅವನು
ಅಷ್ಟು ನಾರುತ್ತಿದ್ದನು!

## ಅಂತಿಯೋಕನ ಮನಪರಿವರ್ತನೆ

(1 ಮಕ್ಕಬಿ. 6.8–17)

11 ಅಂತಿಯೋಕನು ಹೀಗೆ ದೇವ ಶಿಕ್ಷೆಗೆ ಗುರಿಯಾಗಿ ನಿರಂತರವಾದ ಘೋರಬಾಧೆಯನ್ನು
ಅನುಭವಿಸಿದನು. ಈ ದುರವಸ್ಥೆಯ ಪರಿಣಾಮವಾಗಿ ಅಹಂಕಾರವನ್ನು ತ್ಯಜಿಸಿ ತಾಳ್ಮೆಯುಳ್ಳವನಾದನು.
12ತನ್ನ ದುರ್ವಾಸನೆಯನ್ನು ತಾನೇ ತಾಳಲಾಗದೆ, “ದೇವರಿಗೆ ವಿಧೇಯನಾಗಿರುವುದು ಒಳಿತು;
ಮರ್ತ್ಯಮಾನವ ದೇವರಿಗೆ ಸಮನಾಗಲು ಬಯಸುವುದು ಸರಿಯಲ್ಲ,” ಎಂದನು. 13ಸರ್ವೇಶ್ವರಸ್ವಾಮಿ
ಕರುಣೆ ತೋರದಿದ್ದುದರಿಂದ ಆ ದುಷ್ಟನು ದೇವರಿಗೆ ಹರಕೆಮಾಡಿಕೊಂಡನು. 14ಪವಿತ್ರ ಜೆರುಸಲೇಮನ್ನು
ನೆಲಸಮ ಮಾಡಿ ಯೆಹೂದ್ಯರ ಸ್ಮಶಾನಭೂಮಿಯನ್ನಾಗಿ ಮಾರ್ಪಡಿಸುವೆನೆಂದವನು ಈಗ ಅದಕ್ಕೆ
ಸ್ವಾತಂತ್ರ್ಯವನ್ನು ನೀಡುವುದಾಗಿ ಘೋಷಿಸಿದನು. 15ಮೃತರಾದ ಯೆಹೂದ್ಯರೂ ಅವರ ಮಕ್ಕಳೂ
ಶವಸಂಸ್ಕಾರಕ್ಕೂ ಯೋಗ್ಯರಲ್ಲವೆಂದೂ ಅವರ ಶವಗಳು ಕಾಡುಪ್ರಾಣಿಗಳಿಗೂ ಪಕ್ಷಿಗಳಿಗೂ
ಆಹಾರವಾಗಬೇಕೆಂದೂ ಹೇಳಿದಂಥವನು ಈಗ ಯೆಹೂದ್ಯರು ಹಕ್ಕು ಬಾಧ್ಯತೆಯಲ್ಲಿ ಅಥೆನ್ಸಿನ ಪ್ರಜೆಗಳಿಗೆ
ಸಮಾನರೆಂದು ಸಾರಿದನು. 16ಮುಂಚೆ ಲೂಟಿ ಮಾಡಿದ ಮಹಾಪವಿತ್ರ ದೇವಾಲಯವನ್ನು ಈಗ ಅತಿ
ಅಮೂಲ್ಯವಾದ ಕಾಣಿಕೆಗಳಿಂದ ಅಲಂಕರಿಸಬೇಕೆಂದನು. ಪವಿತ್ರ ಪಾತ್ರೆಗಳನ್ನೆಲ್ಲ ಇಮ್ಮಡಿ ಮುಮ್ಮಡಿಯಷ್ಟು
ಹಿಂದಕ್ಕೆ ಕೊಡುವುದಾಗಿಯೂ ಬಲಿಯರ್ಪಣೆಗಳಿಗೆ ತಗಲುವ ವೆಚ್ಚವನ್ನು ತನ್ನ ರಾಜ್ಯದ ವರಮಾನದಿಂದ
ಭರಿಸುವುದಾಗಿಯೂ ನಿರ್ಧರಿಸಿದನು. 17ಅಷ್ಟೇ ಅಲ್ಲದೆ, ತಾನೇ ಯೆಹೂದ್ಯ ಧರ್ಮವನ್ನು ಸ್ವೀಕರಿಸಿ, ದೇವರ
ಶಕ್ತಿ ಸಾಮರ್ಥ್ಯಗಳನ್ನು ಸಾರಲು ಲೋಕದ ಜನರು ವಾಸವಾಗಿದ್ದೆಡೆಯೆಲ್ಲಾ ಸಂಚರಿಸುವುದಾಗಿ
ತೀರ್ಮಾನಿಸಿಕೊಂಡನು.

## ಯೆಹೂದ್ಯರಿಗೆ ಅಂತಿಯೋಕನ ಪತ್ರ

18 ಯಾವ ವಿಧದಲ್ಲೂ ಅಂತಿಯೋಕನ ಯಾತನೆ ಕಡಿಮೆಯಾಗಲಿಲ್ಲ. ದೇವರ ತೀರ್ಪು
ನ್ಯಾಯವಾಗಿ ಅವನ ಮೇಲೆ ಬಂದಿತ್ತು. ಅವನು ತನ್ನಲ್ಲಿಯೇ ನಿರಾಶೆಗೊಂಡವನಾಗಿ, ಯೆಹೂದ್ಯರಿಗೆ ಒಂದು
ಪತ್ರವನ್ನು ಬರೆದನು. ಅದು ಬಿನ್ನವತ್ತಳೆಯ ರೂಪದಲ್ಲಿತ್ತು. ಅದರಲ್ಲಿ ಅಡಗಿದ್ದ ವಿಷಯ ಈ ಕೆಳಕಂಡಂತಿದೆ:

19 ನನ್ನ ಗೌರವಾನ್ವಿತ ಪ್ರಜೆಗಳಾದ ಯೆಹೂದ್ಯರಿಗೆ, ಅರಸನೂ ಸೇನಾಧಿಪತಿಯೂ ಆದ
ಅಂತಿಯೋಕನಿಂದ ಶುಭಾಶಯಗಳು! ನಿಮಗೆ ಕ್ಷೇಮವನ್ನೂ ಯಶಸ್ಸನ್ನೂ ಕೋರುತ್ತೇನೆ.

20 ನೀವೂ ನಿಮ್ಮ ಮಕ್ಕಳೂ ಕ್ಷೇಮವಾಗಿದ್ದರೆ, ನಿಮ್ಮ ವ್ಯವಹಾರಗಳೆಲ್ಲ ಚೆನ್ನಾಗಿದ್ದರೆ, ನನಗೆ
ಸಂತೋಷ. 21ನನ್ನ ಬಗ್ಗೆ ನಿಮಗಿದ್ದ ಪ್ರೀತಿಯನ್ನು ಸಂತೋಷದಿಂದ ಸ್ಮರಿಸುತ್ತೇನೆ.

ಪರ್ಷಿಯಾ ಪ್ರಾಂತ್ಯದಿಂದ ನಾನು ಹಿಂದಿರುಗುತ್ತಿರುವಾಗ ಘೋರವ್ಯಾಧಿಯಿಂದ ಸಂಕಟಪಟ್ಟೆ.
ಆದುದರಿಂದ ಪ್ರಜೆಗಳ ಹಿತವನ್ನು ಕಾಪಾಡುವುದಕ್ಕಾಗಿ ಯೋಜನೆಗಳನ್ನು ಕೈಗೊಳ್ಳಬೇಕೆಂದು
ತೀರ್ಮಾನಿಸಿದೆ. 22ನನ್ನ ದೇಹಸ್ಥಿತಿಯ ಬಗ್ಗೆ ನಂಬಿಕೆಯನ್ನು ಕಳೆದುಕೊಂಡಿಲ್ಲ: ನಾನು ಪುನಃ
ಗುಣಮುಖನಾಗುತ್ತೇನೆಂಬ ಪೂರ್ಣ ನಂಬಿಕೆ ಇದೆ. 23ನನ್ನ ತಂದೆಯವರು ಯೂಫ್ರೆಟಿಸ್ ಪೂರ್ವಕ್ಕೆ
ದಂಡಯಾತ್ರೆ ಹೋಗುವಾಗಲೆಲ್ಲಾ ಒಬ್ಬ ಉತ್ತರಾಧಿಕಾರಿಯನ್ನು ನೇಮಿಸುತ್ತಿದ್ದರು. 24ಇದರಿಂದ ಒಂದು
ವೇಳೆ ಅನಿರೀಕ್ಷಿತವಾಗಿ ಏನಾದರೂ ಸಂಭವಿಸಿದರೆ ಅಥವಾ ಅಶುಭವಾದ ಸಮಾಚಾರ ಬಂದರೆ
ರಾಜ್ಯದಾದ್ಯಂತ ಜನರಿಗೆ ತೊಂದರೆ ಯಾಗುವಂತಿರಲಿಲ್ಲ; ರಾಜ್ಯದ, ಜವಾಬ್ದಾರಿ ಯಾರ ಮೇಲಿದೆ ಎಂದು
ಅವರಿಗೆ ತಿಳಿಯುತ್ತಿತ್ತು. 25ಇದಲ್ಲದೆ, ನಮ್ಮ ರಾಜ್ಯದ ಎಲ್ಲೆಯಲ್ಲಿರುವ ರಾಜರುಗಳು ಹಾಗು ನೆರೆ
ರಾಜ್ಯದವರು ಸದಾವಕಾಶವನ್ನು ನಿರೀಕ್ಷಿಸುತ್ತಾ, ಏನಾಗುತ್ತದೋ ಎಂದು ನೋಡುತ್ತಾ ಇದ್ದಾರೆಂದು ನನಗೆ
ಗೊತ್ತು. ಆದುದರಿಂದ ನಾನು ನನ್ನ ಮಗ ಅಂತಿಯೋಕನನ್ನು ಅರಸನನ್ನಾಗಿ ನೇಮಿಸಿದ್ದೇನೆ. ಹಲವು ಬಾರಿ
ಅವನನ್ನು ನಿಮ್ಮ ಪಾಲನೆಗೆ ಒಪ್ಪಿಸಿದ್ದೇನೆ, ಯೂಫ್ರೆಟಿಸ್ ಪೂರ್ವ ಪ್ರದೇಶಕ್ಕೆ ಹೋದಾಗಲೆಲ್ಲ ನಿಮ್ಮಲ್ಲಿ
ಅನೇಕರಿಗೆ ಅವನ ಬಗ್ಗೆ ಶಿಫಾರಸು ಮಾಡಿದ್ದೇನೆ. ಅವನಿಗೆ ಈ ಪತ್ರದ ನಕಲನ್ನು ಕಳುಹಿಸಿದ್ದೇನೆ. 26ನಾನು
ನಿಮಗೆ ವೈಯಕ್ತಿಕವಾಗಿ ಹಾಗು ಇಡೀ ರಾಷ್ಟ್ರಕ್ಕಾಗಿ ಮಾಡಿದ್ದೆಲ್ಲವನ್ನು ನೆನಸಿಕೊಂಡು, ನನ್ನ ಹಾಗು ನನ್ನ
ಮಗನ ಬಗ್ಗೆ ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಈಗ ಇರುವ ಪ್ರೀತಿ ವಿಶ್ವಾಸ ಮುಂದಕ್ಕೂ ಇರಲೆಂದು ಒತ್ತಾಯ
ಪೂರ್ವಕವಾಗಿ ವಿನಂತಿಸುತ್ತೇನೆ. 27ಅವನು ನನ್ನ ರಾಜನೀತಿಯನ್ನು ಅನುಸರಿಸುತ್ತಾನೆ; ನಿಮ್ಮನ್ನು
ಸಂಯಮ, ಸೌಜನ್ಯದಿಂದ ಕಾಣುತ್ತಾನೆ ಎಂಬ ಭರವಸೆ ನನಗಿದೆ."

28 ಹೀಗೆ, ದೇವದೂಷಣೆಯಾಡಿದ ಈ ಕೊಲೆಗಾರ ಇತರರಿಗೆ ಕೊಟ್ಟ ಉಪದ್ರವಗಳನ್ನು ತಾನೇ
ಅನುಭವಿಸಿದ ಮೇಲೆ, ಪರಕೀಯ ನಾಡಿನ ಗುಡ್ಡಗಾಡಿನಲ್ಲಿ ಪರಿತಾಪಕವಾದ ವಿಧಿವಶವಾಗಿ ಅಸುನೀಗಿದನು.
29ಅವನ ಆಸ್ಥಾನಿಕ ಆಪ್ತರಲ್ಲಿ ಒಬ್ಬನಾದ ಫಿಲಿಪ್ ಎಂಬವನು ಅವನ ಪಾರ್ಥಿವ ಶರೀರವನ್ನು ಮನೆಗೆ
ತೆಗೆದುಕೊಂಡು ಹೋದನು. ಅಂತಿಯೋಕನ ಮಗನ ಭಯ ಅವನಿಗಿದ್ದುದರಿಂದ ಈಜಿಪ್ಟಿನಲ್ಲಿದ್ದ
ಪ್ಟೊಲೆಮೇಯ ಫಿಲೋಮಿಟರನ ಬಳಿಗೆ ಹೊರಟು ಹೋದನು.

## ದೇವಾಲಯದ ಪುನರ್ ಪ್ರತಿಷ್ಠಾಪನೆ

(1 ಮಕ್ಕಬಿ. 4.36–61)

**10** ಸರ್ವೇಶ್ವರನ ನಾಯಕತ್ವದಲ್ಲಿ ಯೂದ ಮಕ್ಕಬಿಯನು ಮತ್ತು ಅವನ ಹಿಂಬಾಲಕರು ಜೆರುಸಲೇಮ್
ಮಹಾ ದೇವಾಲಯವನ್ನೂ ನಗರವನ್ನೂ ಪುನಃ ವಶಪಡಿಸಿಕೊಂಡರು. 2ಪರಕೀಯರು ಬೀದಿಚೌಕಗಳಲ್ಲಿ
ನಿರ್ಮಿಸಿದ್ದ ವೇದಿಕೆಗಳನ್ನೂ ಅಲ್ಲಿನ ಗುಡಿಗಳನ್ನೂ ನೆಲಸಮಮಾಡಿದರು. 3ಮಹಾದೇವಾಲಯದ
ಗರ್ಭಗುಡಿಯನ್ನು ಶುದ್ಧೀಕರಿಸಿ ಮತ್ತೊಂದು ಬಲಿಪೀಠವನ್ನು ನಿರ್ಮಿಸಿದರು. ಕಲ್ಲಿನಿಂದ ಅಗ್ಗಿಷ್ಟಿಕೆಯನ್ನು
ಮಾಡಿ ಎರಡು ವರ್ಷಗಳವರೆಗೂ ನಿಂತುಹೋಗಿದ್ದ ಬಲಿದಾನವನ್ನು ಅರ್ಪಿಸಿದರು, ಧೂಪಾರತಿ ಎತ್ತಿ
ದೀಪಗಳನ್ನು ಬೆಳಗಿದರು; ನೈವೇದ್ಯದ ರೊಟ್ಟಿಗಳನ್ನು ವೇದಿಕೆಯಲ್ಲಿ ಇರಿಸಿದರು. 4ಇದೆಲ್ಲವನ್ನು ಮುಗಿಸಿದ
ನಂತರ, ಸರ್ವೇಶ್ವರನಿಗೆ ಸಾಷ್ಟಾಂಗವೆರಗಿ, ಇಂಥ ದುರಂತ ಪುನಃ ಸಂಭವಿಸದಿರುವಂತೆ ಪ್ರಾರ್ಥಿಸಿದರು;

ಮುಂದಕ್ಕೆ ಪಾಪವನ್ನು ಕಟ್ಟಿಕೊಂಡದ್ದೇ ಆದರೆ ಸಹನೆಯಿಂದ ಶಿಕ್ಷೆ ನೀಡಬೇಕು. ಆದರೆ ದೇವದೂಷಣೆ ಆಡುವ ಬರ್ಬರ ರಾಷ್ಟ್ರಗಳವರ ಕೈಗೆ ತಮ್ಮನ್ನು ಒಪ್ಪಿಸಬಾರದು ಎಂದು ವಿನಂತಿಸಿದರು. 5ಕಿಸ್ಲೇವ್ ತಿಂಗಳಿನ ಇಪ್ಪತ್ತೈದನೇ ದಿನದಂದು, ಅಂದರೆ ದೇವಾಲಯವು ಅನ್ಯಧರ್ಮೀಯರಿಂದ ಭ್ರಷ್ಟವಾಗಿದ್ದ ದಿನದಂದೇ ಶುದ್ಧೀಕರಣ ಸಡಗರವು ನಡೆಯಿತು. 6ಸ್ವಲ್ಪ ಕಾಲದ ಹಿಂದೆ ಗುಡ್ಡಗಾಡುಗಳಲ್ಲಿ ಮತ್ತು ಗುಹೆಗಳ ಮಧ್ಯೆ ಅಲೆದಾಡುತ್ತಿರುವಾಗ ಪರ್ಣ ಕುಟೀರಗಳ ಹಬ್ಬವನ್ನು ಆಚರಿಸುತ್ತಿದ್ದುದನ್ನು ನೆನಪಿಗೆ ತಂದುಕೊಂಡು, ಈ ಶುದ್ಧೀಕರಣ ಹಬ್ಬವನ್ನೂ ಎಂಟು ದಿನಗಳವರೆಗೆ ಕೊಂಡಾಡಿದರು. 7ಆದುದರಿಂದ 'ಐವೀ' ಗುಚ್ಛಗಳನ್ನು, ಸುಂದರ ರೆಂಬೆಗಳನ್ನು, ಖರ್ಜೂರದ ಎಲೆಗಳನ್ನು ಮುಂತಾದವುಗಳನ್ನು ಹಿಡಿದುಕೊಂಡು, ಪವಿತ್ರಾಲಯದ ಶುದ್ಧೀಕರಣವಿಧಿ ನೆರವೇರಿಸುವಂಥ ಸದವಕಾಶ ನೀಡಿದ್ದಕ್ಕಾಗಿ, ಸ್ತುತಿಗೀತೆಗಳನ್ನು ಹಾಡಿದರು. 8ಇಡೀ ಯೆಹೂದ್ಯ ಜನಾಂಗ ಈ ದಿನಗಳನ್ನು ಪ್ರತಿವರ್ಷ ಆಚರಿಸಬೇಕೆಂದು ಒಮ್ಮತದಿಂದ ನಿರ್ಧರಿಸಿ ಈ ಠರಾವನ್ನು ಬಹಿರಂಗವಾಗಿ ಶಾಸನರೂಪಕ್ಕೆ ತಂದರು.

## ಪ್ತೊಲೆಮೇಯ ಮಕ್ರೋನನ ಆತ್ಮಹತ್ಯೆ

9 ಎಪಿಫನೆಸ್ ಎಂದು ಕರೆಯಲಾದ ಅಂತಿಯೋಕನ ಕಾಲ ಹೀಗೆ ಮುಕ್ತಾಯಗೊಂಡಿತು. 10ಆ ಭಕ್ತಿಹೀನ ಮನುಷ್ಯನ ಮಗ ಅಂತಿಯೋಕ ಯುಪಾತೊರ್ ಎಂಬವನ ಕಾಲದಲ್ಲಿ ಏನೆಲ್ಲ ನಡೆಯಿತೆಂದು ಈಗ ವಿವರಿಸುತ್ತೇನೆ. ಅವನ ದಂಡಯಾತ್ರೆಗಳ ದುಷ್ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಕೊಡುತ್ತೇನೆ. 11ರಾಜ್ಯದ ಗದ್ದುಗೆಯನ್ನು ಏರಿದಾಗ, ರಾಜ್ಯದ ಉಸ್ತುವಾರಿಯನ್ನು ನಡೆಸುವವನಾಗಿ ಸೆಲೆಸಿರಿಯ ಮತ್ತು ಫೆನಿಷಿಯಾ ಪ್ರಾಂತ್ಯಕ್ಕೆ ರಾಜ್ಯಪಾಲನನ್ನಾಗಿ ಲೂಸ್ಯ ಎಂಬವನನ್ನು ನೇಮಿಸಿದನು. 12ಮಕ್ರೋನ ಎಂದು ಕರೆಯಲಾಗುತ್ತಿದ್ದ ಪ್ತೊಲೆಮೇಯ ಎಂಬವನು, ಈತನಿಗೆ ಮುಂಚೆ ರಾಜ್ಯಪಾಲನಾಗಿದ್ದಾಗ, ಯೆಹೂದ್ಯರೊಂದಿಗೆ ನ್ಯಾಯನೀತಿಯಿಂದ ವರ್ತಿಸುತ್ತಿದ್ದನು. ಕಾರಣ – ಅವರಿಗೆ ತುಂಬಾ ಅನ್ಯಾಯವಾಗಿತ್ತು ಎಂದು ಅವನು ಅರಿತಿದ್ದನು. ಮಕ್ರೋನನು ಯೆಹೂದ್ಯರ ಬಗ್ಗೆ ಶಾಂತಿಯುತ ನಿಲುವನ್ನು ತಾಳಿದ್ದನು. 13ಈ ಪರಿಣಾಮವಾಗಿ, ಅರಸನ ಸ್ನೇಹಿತರು ಯುಪಾತೊರನ ಬಳಿಗೆ ಹೋಗಿ, ಮಕ್ರೋನನು ಅರಸ ಫಿಲೋಮಿಟರ್ ವಹಿಸಿಕೊಟ್ಟಿದ್ದ ಸೈಪ್ರಸ್ ದ್ವೀಪವನ್ನು ತೊರೆದುಬಿಟ್ಟು ಅಂತಿಯೋಕ ಎಪಿಫನೆಸ್ ಬಳಿಗೆ ಹೋಗಿದ್ದಾನೆ, ಎಂದು ದೂರುಕೊಟ್ಟರು. ಅವನೊಬ್ಬ ದ್ರೋಹಿಯೆಂದು ವಾದಿಸಿದರು. ಹೀಗೆ ಅವನ ಪದವಿಗೆ ಸಲ್ಲತಕ್ಕ ಗೌರವಕ್ಕೆ ಚ್ಯುತಿ ಬರಲಾಗಿ ಮಕ್ರೋನನು ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡನು.

## ಇದುಮೇಯರ ಸೋಲು

(1 ಮಕ್ಕಬಿ. 5.1–8)

14 ಇದುಮೇಯ ಪ್ರಾಂತ್ಯಕ್ಕೆ ಗೊರ್ಗಿಯ ಎಂಬವನು ರಾಜ್ಯಪಾಲನಾಗಿ ನೇಮಕಗೊಂಡಾಗ ಅವನು ಕೂಲಿ ಸಿಪಾಯಿಗಳ ದಂಡನ್ನು ಇಟ್ಟುಕೊಂಡು, ಸಮಯ ಸಿಕ್ಕಿದಾಗಲೆಲ್ಲ ಯೆಹೂದ್ಯರ ಮೇಲೆ ದಾಳಿ ಮಾಡುತ್ತಿದ್ದನು. 15ಇದಲ್ಲದೆ, ಮುಖ್ಯವಾದ ದುರ್ಗಗಳನ್ನು ಆಕ್ರಮಿಸಿಕೊಂಡಿದ್ದ ಇದುಮೇಯರು ಎಡೆಬಿಡದೆ ಯೆಹೂದ್ಯರನ್ನು ಪೀಡಿಸುತ್ತಿದ್ದರು. ಜೆರುಸಲೇಮಿನಿಂದ ಗಡೀಪಾರಾದವರನ್ನು ಬರಮಾಡಿಕೊಂಡು, ಯುದ್ಧವನ್ನು ಸತತವಾಗಿ ಮುಂದುವರಿಸಿಕೊಂಡು ಹೋಗಲು ಪ್ರಯತ್ನಮಾಡಿದರು. 16ಆದರೆ ಮಕ್ಕಬಿಯನು ಮತ್ತು ಅವನ ಪಡೆಯವರು ಸಾರ್ವತ್ರಿಕ ಪ್ರಾರ್ಥನೆ ಮಾಡಿ, ತಮ್ಮ ಪರವಾಗಿ ಯುದ್ಧ ಮಾಡಲು ದೇವರನ್ನು ಬಿನ್ನವಿಸಿ, ಇದು ಮೇಯರ ಕೋಟೆಗಳತ್ತ ಧಾವಿಸಿದರು. 17ತೀವ್ರವಾದ ದಾಳಿಯಿಂದ ಹಲವಾರು ಸ್ಥಳಗಳನ್ನು ಆಕ್ರಮಿಸಿಕೊಂಡು, ಕೋಟೆಗೋಡೆಯ ಬಳಿ ಹೋರಾಡುತ್ತಿದ್ದವರನ್ನೆಲ್ಲ ಹೊಡೆದೋಡಿಸಿದರು; ಸಿಕ್ಕಿದವರನ್ನೆಲ್ಲ ಕೊಂದು ಹಾಕಿದರು. ಹೀಗೆ ಮಡಿದವರು ಸುಮಾರು ಇಪ್ಪತ್ತು ಸಾವಿರ ಮಂದಿ.

18 ಸುಮಾರು ಒಂಬತ್ತು ಸಾವಿರ ಮಂದಿ ಶತ್ರು ಸೈನಿಕರು ಎರಡು ಭದ್ರವಾದ ಬುರುಜುಗಳಲ್ಲಿ ಆಶ್ರಯದಲ್ಲಿದ್ದರು. ಎಂಥ ಮುತ್ತಿಗೆಯನ್ನಾದರೂ ತಡೆಯುವಷ್ಟು ಶಕ್ತಿ ಸಾಮಗ್ರಿಗಳು ಅವರಿಗಿತ್ತು. 19ಯೂದಮಕ್ಕಬಿಯನು ತನ್ನ ಸಹೋದರರಾದ ಸಿಮೋನ್ ಮತ್ತು ಜೋಸೆಫರನ್ನು ಜಕ್ಕಾಯನೊಂದಿಗೆ ಅಲ್ಲಿಯೇ ಇರಿಸಿ, ತುರ್ತಾಗಿ ಅವಶ್ಯಕವಾಗಿದ್ದ ಸ್ಥಳಗಳಿಗೆ ಹೋದನು. ದಾಳಿಯನ್ನು ಮುಂದುವರೆಸಲು

ಸಾಕಷ್ಟು ಜನ ಅವರೊಂದಿಗೆ ಇದ್ದರು. 20ಆದರೆ ಸಿಮೋನನೊಂದಿಗಿದ್ದ ಕೆಲವು ಹಣದಾಶೆಯುಳ್ಳ ಸೈನಿಕರು, ಬುರುಜುಗಳಲ್ಲಿದ್ದ ಶತ್ರುಸೈನಿಕರಿಂದ ಸುಮಾರು 64 ಕಿಲೋಗ್ರಾಂ ಬೆಳ್ಳಿನಾಣ್ಯಗಳನ್ನು ಲಂಚವಾಗಿ ತೆಗೆದುಕೊಂಡು, ತಪ್ಪಿಸಿಕೊಂಡು ಹೋಗಿಬಿಟ್ಟರು. 21ಯೂದನಿಗೆ ಈ ಸಮಾಚಾರ ತಿಳಿಯಲಾಗಿ, ಜನನಾಯಕರನ್ನು ಒಂದುಗೂಡಿಸಿದನು; ತಮ್ಮ ಬಾಂಧವರನ್ನು ಹಣಕ್ಕಾಗಿ ವಿಕ್ರಯಿಸಿ ಶತ್ರುಗಳಿಗೆ ಅವರ ಮೇಲೆ ದಾಳಿಮಾಡಲು ಅನುಕೂಲ ಮಾಡಿದ್ದಾರೆಂದು ಖಂಡಿಸಿದನು. 22ಅನಂತರ ದ್ರೋಹಿಗಳಾಗಿದ್ದವರನ್ನು ಸಂಹರಿಸಿ ಬೇಗನೆ ಆ ಎರಡು ಬುರುಜುಗಳನ್ನು ವಶಪಡಿಸಿಕೊಂಡನು. 23ಯುದ್ಧರಂಗದಲ್ಲಿ ಯೂದ ಮಕ್ಕಬಿಯನು ವಿಜಯದ ಮೇಲೆ ವಿಜಯವನ್ನು ಗಳಿಸಿದನು; ಆ ಎರಡು ದುರ್ಗಗಳಲ್ಲಿ ಸುಮಾರು ಇಪ್ಪತ್ತು ಸಾವಿರ ಶತ್ರುಗಳನ್ನು ನಾಶಗೊಳಿಸಿದನು.

## ತಿಮೊಥೇಯನ ಸೋಲು

24 ಇದಕ್ಕೆ ಮುಂದೆ ಒಂದು ಬಾರಿ ಯೆಹೂದ್ಯರಿಂದ ಪರಾಭವಗೊಂಡಿದ್ದ ತಿಮೊಥೇಯನು ಕೂಲಿ ಸಿಪಾಯಿಗಳ ಪ್ರಚಂಡ ಪಡೆಯನ್ನು ಸೇರಿಸಿಕೊಂಡನು. ಏಷ್ಯಾದಿಂದ ಅತೀ ದೊಡ್ಡದಾದ ರಾಹುತರ ಪಡೆಯನ್ನು ಶೇಖರಿಸಿದನು. ಅನಂತರ ಜುದೇಯವನ್ನು ಬಿರುಗಾಳಿಯಂತೆ ಆಕ್ರಮಿಸಿಕೊಳ್ಳಲು ಬಂದನು. 25ಅವನು ಹತ್ತಿರ ಬಂದಾಗ, ಯೂದಮಕ್ಕಬಿಯನೂ ಅವನ ಸೈನಿಕರೂ ತಲೆಯ ಮೇಲೆ ಧೂಳನ್ನೂ ಸುರಿದುಕೊಂಡು, ಗೋಣಿತಟ್ಟಿನಿಂದ ನಡುವನ್ನು ಕಟ್ಟಿಕೊಂಡು ದೇವರಲ್ಲಿ ಮೊರೆಯಿಟ್ಟರು. 26ಬಲಿಪೀಠದ ಮುಂದೆ ಮೆಟ್ಟಲುಗಳ ಮೇಲೆ ಅಡ್ಡಬಿದ್ದು, ಧರ್ಮಶಾಸ್ತ್ರದಲ್ಲಿ ಹೇಳಿರುವಂತೆ ತಮಗೆ ಪ್ರಸನ್ನರಾಗಿರಬೇಕೆಂದೂ ಶತ್ರುಗಳಿಗೆ ಶತ್ರುವಾಗಿರಬೇಕೆಂದೂ ವಿರೋಧಿಗಳಿಗೆ ವಿರೋಧಿಯಾಗಿರಬೇಕೆಂದೂ ದೇವರಲ್ಲಿ ವಿನಂತಿಸಿಕೊಂಡರು.

27 ಪ್ರಾರ್ಥನೆಯಾದ ಮೇಲೆ ಆಯುಧಗಳನ್ನು ತೆಗೆದುಕೊಂಡು ನಗರದಿಂದ ಬಹು ದೂರ ನಡೆದರು. ರಾತ್ರಿಯಾದಾಗ ಶತ್ರುಸೈನ್ಯಕ್ಕೆ ಸ್ವಲ್ಪದೂರದಲ್ಲೇ ನಿಂತರು. 28ಬೆಳಗಾದಾಗ ಎರಡು ಸೈನ್ಯಗಳೂ ಕಾಳಗವನ್ನು ಪ್ರಾರಂಭಿಸಿದವು. ಒಂದು ಕಡೆಯವರು ತಮ್ಮ ಶಕ್ತಿಯಿಂದ ಮಾತ್ರವಲ್ಲ, ಸರ್ವೇಶ್ವರನ ಸಹಾಯದಿಂದ ವಿಜಯವನ್ನು ನಿರೀಕ್ಷಿಸುತ್ತಿರಲು ಮತ್ತೊಂದು ಕಡೆಯವರು ತಮ್ಮ ಶಕ್ತಿ ಸಾಮರ್ಥ್ಯವನ್ನೇ ಯುದ್ಧದ ಆಧಾರವನ್ನಾಗಿ ಮಾಡಿಕೊಂಡಿದ್ದರು.

29 ಕಾಳಗವು ತೀವ್ರರೂಪ ತಾಳಲು ಶತ್ರುಗಳಿಗೆ ಸ್ವರ್ಗದಿಂದ ಒಂದು ದರ್ಶನವಾಯಿತು: ಅದರಲ್ಲಿ ಐದುಮಂದಿ ರಾಹುತರು ತೇಜಸ್ಸುಳ್ಳವರಾಗಿದ್ದು ತಮ್ಮ ಕುದುರೆಗಳ ಮೇಲೆ ಬಂಗಾರದ ಲಗಾಮುಗಳನ್ನು ಹಿಡಿದುಕೊಂಡು ಯೆಹೂದ್ಯರ ಮುಂದೆ ನಡೆಯುತ್ತಿದ್ದರು. 30ಅವರಲ್ಲಿ ಇಬ್ಬರು ತಮ್ಮ ಮಧ್ಯೆ ಯೂದಮಕ್ಕಬಿಯನನ್ನು ಇರಿಸಿಕೊಂಡು, ತಮ್ಮ ಸ್ವಂತ ಯುದ್ಧ ಕವಚಗಳು ಹಾಗು ಆಯುಧಗಳು ಅವನಿಗೆ ರಕ್ಷೆಯಾಗುವಂತೆಮಾಡಿ, ಅವನು ಗಾಯಗೊಳ್ಳದಂತೆ ನೋಡಿಕೊಂಡರು; ಶತ್ರುಗಳ ಮೇಲೆ ಬಾಣಗಳನ್ನು ಬಿಟ್ಟರು; ಸಿಡಿಲು ಬಡಿಯುವಂತೆ ಮಾಡಿದರು. ಪರಿಣಾಮವಾಗಿ ಶತ್ರುಗಳು ಕಣ್ಣುಕಟ್ಟುವಂತಾಗಿ ದಿಕ್ಕು ತೋಚದೆ ಚೆಲ್ಲಾಪಿಲ್ಲಿಯಾಗಿ ಓಡಿದರು; ತುಂಡು ತುಂಡಾಗಿ ಕಡಿಯಲ್ಪಟ್ಟರು. 31ಸುಮಾರು 20,500 ಮಂದಿ ಸೈನಿಕರು, 600 ರಾಹುತರು ಹತರಾದರು.

32 ಆಗ ತಿಮೊಥೇಯನು ಗಜರಾ ಎಂಬ ದುರ್ಗಕ್ಕೆ ಓಡಿಹೋದನು. ಆ ಕೋಟೆಯನ್ನು ಭದ್ರವಾಗಿ ಕಾದಿರಿಸಲಾಗಿತ್ತು. ಅದು ಅವನ ಸಹೋದರ ಕೈರೆಯಾಸ್ ಎಂಬವನ ಹತೋಟಿಯಲ್ಲಿತ್ತು. 33ಆಸಕ್ತಿಯಿಂದ ಯೂದಮಕ್ಕಬಿಯನು ಮತ್ತು ಅವನ ಸೈನಿಕರು ನಾಲ್ಕು ದಿನಗಳವರೆಗೆ ಕೋಟೆಯನ್ನು ಮುತ್ತಿದರು. 34ಒಳಗಿದ್ದವರು ಭಯಂಕರ ದೇವದೂಷಣೆಯಾಡುತ್ತಾ, ಕೆಟ್ಟ ಮಾತುಗಳನ್ನು ಹೇಳುತ್ತಾ ಇದ್ದರು; ಅವರಿಗೆ ತಮ್ಮ ಸ್ಥಳದ ಸುರಕ್ಷತೆಯಲ್ಲಿ ಮಾತ್ರ ಭರವಸೆ ಇತ್ತು. 35ಆದರೆ ಐದನೇ ದಿನ ಬೆಳಗಾದಾಗ ಶತ್ರುಗಳ ದೇವ ದೂಷಣೆಗಳನ್ನು ತಾಳಲಾರದೆ ಯೆಹೂದ್ಯರು ಕುಪಿತರಾದರು. ಧೈರ್ಯದಿಂದ ಯೂದನ ಇಪ್ಪತ್ತು ಮಂದಿ ಸೈನಿಕರು ಕೋಟೆಯ ಗೋಡೆಯನ್ನು ಹತ್ತಿ ಕ್ರೂರಾವೇಶದಿಂದ ಮುನ್ನುಗ್ಗಿ ಸಿಕ್ಕಿದವರನ್ನೆಲ್ಲ ಕಡಿದುಹಾಕಿದರು. 36ಅಂತೆಯೇ ದುರ್ಗದ ಇನ್ನೊಂದು ಕಡೆ ಗೋಡೆ ಹತ್ತಿದವರು ಗೋಪುರಗಳಿಗೆ ಬೆಂಕಿಯಿಟ್ಟರು. ಆ ಬೆಂಕಿ ದೂಷಕರನೇಕರನ್ನು ಸುಟ್ಟುಹಾಕಿತು. ಮತ್ತಿತರರು ಬಾಗಿಲುಗಳನ್ನು ಬಲವಂತದಿಂದ ತೆರೆದು ಮಕ್ಕಬಿಯನ

ಕಡೆಯವರನ್ನು ಒಳಗೆ ಬಿಟ್ಟು ನಗರವನ್ನು ವಶಪಡಿಸಿಕೊಂಡರು. 37ತಿಮೊಥೇಯನು ಒಂದು ಬಾವಿಯಲ್ಲಿ
ಅಡಗಿಕೊಂಡಿದ್ದನು. ಅವನನ್ನೂ ಅವನ ಸಹೋದರ ಕೈರೆಯಾಸನನ್ನೂ ಅಪೊಲ್ಲೋಫನೆಸನನ್ನೂ
ಸಂಹರಿಸಿಬಿಟ್ಟರು.
38 ಇದೆಲ್ಲವೂ ಆದನಂತರ, ಇಸ್ರಯೇಲಿನ ಮೇಲೆ ಬಹಳ ಕರುಣೆಯಿಟ್ಟು, ಜಯವನ್ನು ಗಳಿಸಿಕೊಟ್ಟ
ಸರ್ವೇಶ್ವರನಿಗೆ ಕೃತಜ್ಞತಾಸ್ತುತಿಮಾಡಿ, ಗೀತೆಗಳನ್ನು ಹಾಡಿ ಸರ್ವೇಶ್ವರನಿಗೆ ಪ್ರಣಾಮಗಳನ್ನು ಸಲ್ಲಿಸಿದರು.

## ಯೂದಮಕ್ಕಬಿಯನಿಂದ ಲೂಸ್ಯನ ಸೋಲು

(1 ಮಕ್ಕಬಿ. 4.26–35)

**11** ಇದಾದ ಸ್ವಲ್ಪಕಾಲದ ನಂತರ, ಅರಸನ ಪೋಷಕನು, ಸಂಬಂಧಿಯು ಹಾಗು ರಾಜ್ಯದ
ಮುಖ್ಯಾಧಿಕಾರಿಯೂ ಆಗಿದ್ದ ಲೂಸ್ಯನ್ ಎಂಬವನು ಸಂಭವಿಸಿದ ಘಟನೆಗಳ ಬಗ್ಗೆ ವ್ಯಸನಾಕ್ರಾಂತನಾದನು.
2ಅವನು ಎಂಬತ್ತು ಸಾವಿರ ಸೈನಿಕರ ಪದಾತಿ ಪಡೆಯನ್ನು ಮತ್ತು ರಾಹುತರನ್ನು ಒಂದುಗೂಡಿಸಿ
ಯೆಹೂದ್ಯರ ಮೇಲೆ ದಾಳಿ ಮಾಡಿದನು. ಜೆರುಸಲೇಮನ್ನು ಗ್ರೀಕರ ನಗರವನ್ನಾಗಿ ಮಾರ್ಪಡಿಸಬೇಕೆಂಬುದು
ಅವನ ಉದ್ದೇಶವಾಗಿತ್ತು. 3ಇತರ ರಾಷ್ಟ್ರಗಳ ಪುಣ್ಯಕ್ಷೇತ್ರಗಳಂತೆ ಇಲ್ಲಿನ ಮಹಾದೇವಾಲಯಕ್ಕೆ ತೆರಿಗೆ
ವಿಧಿಸುವುದು ಹಾಗು ಪ್ರತಿವರ್ಷ ಪ್ರಧಾನಯಾಜಕನ ಪದವಿಯನ್ನು ಹರಾಜು ಮಾಡುವುದು ಅವನ
ಸಂಕಲ್ಪವಾಗಿತ್ತು. 4ಲೂಸ್ಯನು ತನ್ನ ಲಕ್ಷಾಂತರ ಪದಾತಿ ಸೈನ್ಯ, ಸಾವಿರಗಟ್ಟಳೆ ರಾಹುತರು ಹಾಗು ಎಂಬತ್ತು
ಆನೆಗಳಿಂದ ಕೂಡಿದ ಪಡೆದ, ಇವುಗಳ ಬಗ್ಗೆ ಎಷ್ಟು ಅಹಂಕಾರ ಪಟ್ಟನೆಂದರೆ ದೇವರ ಶಕ್ತಿಯ ಬಗ್ಗೆ
ಎಳ್ಳಷ್ಟೂ ಅವನಿಗೆ ಚಿಂತೆ ಇರಲಿಲ್ಲ. 5ಜುದೇಯ ನಾಡನ್ನು ಆಕ್ರಮಿಸಿ, ಜೆರುಸಲೇಮಿಗೆ ಮೂವತ್ತು
ಕಿಲೋಮೀಟರ್ ದೂರವಿದ್ದ ಬೆತ್‍ಜೂರ್ ಎಂಬ ದುರ್ಗವನ್ನು ಮುತ್ತಿದನು.
6 ಲೂಸ್ಯನು ದುರ್ಗಗಳನ್ನು ಮುತ್ತಿದ್ದಾನೆಂದು ಮಕ್ಕಬಿಯನೂ ಅವನ ಸಂಗಡಿಗರೂ ಕೇಳಿದಾಕ್ಷಣ,
ಜನರೊಂದಿಗೆ ಸೇರಿ ಪ್ರಾರ್ಥನೆ ಮಾಡುತ್ತಾ ಕಣ್ಣೀರಿಟ್ಟು ಗೋಳಾಡಲಾರಂಭಿಸಿದರು; ಇಸ್ರಯೇಲನ್ನು
ರಕ್ಷಿಸುವುದಕ್ಕಾಗಿ ಒಬ್ಬ ಒಳ್ಳೆಯ ದೂತನನ್ನು ಕಳುಹಿಸಬೇಕೆಂದು ಸರ್ವೇಶ್ವರನನ್ನು ವಿನಂತಿಸಿದರು.
7ಆಯುಧಗಳನ್ನು ತೆಗೆದುಕೊಳ್ಳುವುದರಲ್ಲಿ ಯೂದಮಕ್ಕಬಿಯನೇ ಮೊದಲನೆಯವನಾಗಿದ್ದನು. ತಮ್ಮ
ಬಂಧು ಬಾಂಧವರಾದ ಯೆಹೂದ್ಯರ ಹಿತಕ್ಕಾಗಿ ತನ್ನೊಂದಿಗೆ ಪ್ರಾಣತ್ಯಾಗಕ್ಕೂ ಸಿದ್ಧರಾಗಿರಬೇಕೆಂದು ಇತರ
ಸೈನಿಕರನ್ನು ಪ್ರಚೋದಿಸಿದನು. ಆಗ ಅವರು ಆಸಕ್ತಿಯಿಂದ ಒಟ್ಟಾಗಿ ನುಗ್ಗಿದರು. 8ಅವರು ಇನ್ನೂ
ಜೆರುಸಲೇಮಿಗೆ ಹತ್ತಿರವಿದ್ದಾಗಲೇ ಬಿಳಿಯ ವಸ್ತ್ರಗಳನ್ನು ಧರಿಸಿ, ಚಿನ್ನದ ಆಯುಧಗಳನ್ನು ಝಳಪಿಸುತ್ತಿದ್ದ
ಒಬ್ಬ ಕುದುರೆ ಸವಾರನು ಕಾಣಿಸಿಕೊಂಡನು. 9ಆಗ ಅವರೆಲ್ಲ ಒಟ್ಟಾಗಿ ಸೇರಿ ಕರುಣಾಳು ದೇವರಿಗೆ ಸ್ತುತಿ
ಸಲ್ಲಿಸಿದಾಗ ಮನಸ್ಸಿನಲ್ಲಿ ಚೈತನ್ಯಭರಿತರಾದರು: ಆಗ ಕ್ರೂರಮನುಷ್ಯರನ್ನು ಮಾತ್ರವಲ್ಲ, ಒರಟಾದ
ಕಾಡುಮೃಗಗಳನ್ನು ಸಹ ಎದುರಿಸಲು, ಕಬ್ಬಿಣದ ಗೋಡೆಗಳನ್ನೇ ಮುತ್ತಲು ಧೈರ್ಯಗೊಂಡರು. 10ತಮ್ಮ
ಮೇಲೆ ಕರುಣೆಯಿಟ್ಟ ಸರ್ವೇಶ್ವರಸ್ವಾಮಿಯನ್ನು ತಮ್ಮ ಸಹಾಯಕರನ್ನಾಗಿ ಇಟ್ಟುಕೊಂಡು ಯೋಧರು
ಪಂಕ್ತಿಪಂಕ್ತಿಗಳಾಗಿ ಮುಂದಕ್ಕೆ ಸಾಗಿದರು. 11ಸಿಂಹಗಳಂತೆ ಶತ್ರುಗಳ ಮೇಲೆ ನುಗ್ಗಿ 11,000 ಪದಾತಿ
ಸೇನಾಳುಗಳನ್ನೂ 1,600 ರಾಹುತರನ್ನೂ ಸಂಹರಿಸಿದರು. ಇತರರು ಪ್ರಾಣ ರಕ್ಷಣೆಗಾಗಿ
ಓಡಿಹೋಗಬೇಕಾಯಿತು. 12ಅವರಲ್ಲಿ ಅನೇಕರು ಗಾಯಗೊಂಡಿದ್ದರು; ಶಸ್ತ್ರಾಸ್ತ್ರಗಳನ್ನು ಬಿಸಾಡಿ ಪಲಾಯನ
ಗೈದರು. ಲೂಸ್ಯನೇ ಹೇಡಿಯಂತೆ ತಲೆ ತಪ್ಪಿಸಿಕೊಂಡು ಓಡಬೇಕಾಯಿತು.

## ಯೆಹೂದ್ಯರೊಂದಿಗೆ ಸಂಧಾನ

(1 ಮಕ್ಕಬಿ. 6.56–61)

13 ಲೂಸ್ಯನೇನೂ ದಡ್ಡನಾಗಿರಲಿಲ್ಲ. ವಿಧಿಯು ಯುದ್ಧದಲ್ಲಿ ತಿರುಗುಬಾಣವಾಗಿದ್ದನ್ನು ಕುರಿತು
ಚಿಂತನೆಮಾಡಿದನು. ಬಲಾಢ್ಯ ದೇವರೇ ಯೆಹೂದ್ಯರ ಪಕ್ಷವಹಿಸಿದ್ದರಿಂದ, ಅವರನ್ನು ಜಯಿಸಲು
ಅಸಾಧ್ಯವೆಂಬುದನ್ನು ಮನಗಂಡನು. ಆದುದರಿಂದ ಅವರಿಗೆ ಒಂದು ನಿಯೋಗವನ್ನು ಕಳುಹಿಸಿದನು.

14ತಾನು ನ್ಯಾಯವಾದ ಒಪ್ಪಂದಕ್ಕೆ ಬದ್ಧನೆಂದೂ ಅರಸನ ಮನಸ್ಸನ್ನು ಅವರ ಪರವಾಗಿ ಒಲಿಸಲು ಪ್ರಯತ್ನಿಸುವನೆಂದೂ ಹೇಳಿ ಕಳುಹಿಸಿದನು. 15ಸಾಮಾನ್ಯ ಜನರ ಹಿತದೃಷ್ಟಿಯಿಂದ ಯೂದಮಕ್ಕಬಿಯನು ಲೂಸ್ಯನ ಯೋಜನೆಗೆ ಒಪ್ಪಿಗೆಯಿತ್ತನು. ಏಕೆಂದರೆ ಯೆಹೂದ್ಯರ ಪರವಾಗಿ ಮಕ್ಕಬಿಯನು ಲಿಖಿತ ರೂಪದಲ್ಲಿ ಲೂಸ್ಯನ ಮುಖಾಂತರ ಕೇಳಿದ್ದೆಲ್ಲವನ್ನು ರಾಜನು ಮಂಜೂರು ಮಾಡಿದ್ದನು.

## ಯೆಹೂದ್ಯರಿಗೆ ಲೂಸ್ಯನು ಬರೆದ ಪತ್ರ

16 ಯೆಹೂದ್ಯರಿಗೆ ಲೂಸ್ಯನು ಬರೆದ ಪತ್ರದ ನಕಲಿದು:

ಯೆಹೂದ್ಯ ಜನರಿಗೆ ಲೂಸ್ಯನ ಶುಭಾಶಯಗಳು! 17ನೀವು ನಿಮ್ಮ ಪ್ರತಿನಿಧಿಗಳಾದ ಯೊವಾನ್ನ ಮತ್ತು ಅಬ್ಸಾಲೋಮರ ಮುಖಾಂತರ ಬರೆದು ಕಳುಹಿಸಿಕೊಟ್ಟ ಸಂದೇಶ ತಲುಪಿದೆ. ಅದರಲ್ಲಿರುವ ಅಂಶಗಳಿಗೆಲ್ಲ ನನ್ನ ಒಪ್ಪಿಗೆ ಅವಶ್ಯವೆಂದು ಕೇಳಿಕೊಂಡಿದ್ದಾರೆ. 18ಅರಸರ ಗಮನಕ್ಕೆ ತರಬೇಕಾದುದ್ದನ್ನೆಲ್ಲ ಅವರ ಮುಂದೆ ಇಟ್ಟಿದ್ದೇನೆ. ಸಾಧ್ಯವಾದುದ್ದಕ್ಕೆಲ್ಲ ಮಂಜೂರಾತಿ ನೀಡಲಾಗಿದೆ. 19ನೀವು ರಾಜ್ಯದ ಹಿತರಕ್ಷಣೆಗಾಗಿ ಮನಃಪೂರ್ವಕವಾಗಿ ಸಹಕಾರ ನೀಡುವುದಾದರೆ ನಿಮ್ಮ ಯೋಗಕ್ಷೇಮವನ್ನು ಮುಂದಕ್ಕೆ ನೋಡಿಕೊಳ್ಳಲು ತೀರಾ ಪ್ರಯತ್ನ ಮಾಡುತ್ತಾನೆ. 20ಈ ವಿಷಯಗಳ ಹಾಗು ಇತರ ವಿವರಗಳ ಬಗ್ಗೆ ನಿಮ್ಮೊಂದಿಗೆ ಸಮಾಲೋಚನೆ ಮಾಡುವುದಕ್ಕಾಗಿ ಈ ವ್ಯಕ್ತಿಗಳಿಗೂ ನನ್ನ ಪ್ರತಿನಿಧಿಗಳಿಗೂ ಸೂಕ್ತ ಆಜ್ಞೆಯನ್ನು ನೀಡಿದ್ದೇನೆ. 21ನಿಮಗೆ ಶುಭವಾಗಲಿ! 148ನೇ ವರ್ಷದ ಡಿಯೋಸ್‌ಕೊರಸ್ ತಿಂಗಳ 24ನೇ ದಿನದಂದು ಈ ಪತ್ರ ಬರೆದಿದ್ದೇನೆ.

## ಲೂಸ್ಯನಿಗೆ ಅರಸನ ಪತ್ರ

22 "ಸನ್ಮಾನ್ಯ ಸಹೋದರ ಲೂಸ್ಯನಿಗೆ ಅರಸ ಅಂತಿಯೋಕನ ಶುಭಾಶಯಗಳು! 23ಈಗ್ಗೆ, ನಮ್ಮ ತಂದೆಯವರು ದೈವಾಧೀನರಾದ್ದರಿಂದ, ನಮ್ಮ ರಾಜ್ಯದ ಪ್ರಜೆಗಳು ತಮ್ಮ ಸ್ವಂತ ವ್ಯವಹಾರಗಳಲ್ಲಿ ಯಾವ ತೊಂದರೆಯಿಲ್ಲದೆ ಕ್ಷೇಮದಿಂದಿರಬೇಕೆಂಬುದನ್ನು ನಾವು ಅಪೇಕ್ಷಿಸುತ್ತೇವೆ. 24ನಮ್ಮ ತಂದೆಯವರು ಗ್ರೀಕ್ ಆಚಾರಗಳನ್ನು ಜನರ ಮೇಲೆ ವಿಧಿಸುತ್ತಿದ್ದರು. ಇಂಥಾ ನೀತಿಯು ಯೆಹೂದ್ಯರಿಗೆ ಹಿಡಿಸಲಿಲ್ಲ. ಅವರ ಸ್ವಂತ ಆಚಾರವಿಚಾರಗಳನ್ನು ಅನುಸರಿಸಲು ಇಷ್ಟಪಡುತ್ತಾರೆ. ಅಲ್ಲದೆ ಅವರ ಸ್ವಂತ ಆಚಾರಗಳನ್ನು ಕೈಗೊಳ್ಳಲು ಅನುಮತಿಯನ್ನು ಕೋರಿದ್ದಾರೆ. 25ಇತರ ಜನರಂತೆ ಅವರು ಸಹ ಯಾವ ತೊಂದರೆ ತಾಪತ್ರಯಗಳಿಲ್ಲದೆ ಬಾಳಬೇಕೆಂಬುದು ನಮ್ಮ ಉದ್ದೇಶವಾಗಿದೆ. ಎಂತಲೇ ಅವರ ಮಹಾ ದೇವಾಲಯವನ್ನು ಅವರಿಗೇ ಒಪ್ಪಿಸಿ ಬಿಡಬೇಕು. ಅವರ ಪೂರ್ವಜರ ಪದ್ಧತಿಯ ಪ್ರಕಾರ ಬದುಕಲು ಬಿಟ್ಟುಬಿಡಬೇಕು. ಇದು ರಾಜಾಜ್ಞೆ. 26ಈ ನನ್ನ ನಿರ್ಧಾರವನ್ನು ಕುರಿತು ಸಂಬಂಧಪಟ್ಟವರಿಗೆ ತಿಳಿಸಿರಿ. ನಮ್ಮ ಸೌಹಾರ್ದತೆಯ ವಾಗ್ದಾನವನ್ನು ಅವರಿಗೆ ನೀಡಿರಿ. ಅವರು ನಮ್ಮ ರಾಜನೀತಿಯನ್ನು ಅರಿತು ಸಂತೋಷ ಹಾಗು ಸಂತೃಪ್ತಿಯಿಂದ ತಮ್ಮ ಸ್ವಂತ ವ್ಯವಹಾರಗಳನ್ನು ನಡೆಸಿಕೊಂಡು ಹೋಗಲಿ." 27ಯೆಹೂದ್ಯರಿಗೆ ಅರಸನು ಬರೆದ ಪತ್ರ ಹೀಗಿತ್ತು:

"ಯೆಹೂದ್ಯ ಶಾಸಕಸಭೆಗೂ ಇತರ ಎಲ್ಲ ಯೆಹೂದ್ಯರಿಗೂ ಅರಸ ಅಂತಿಯೋಕನ ಶುಭಾಶಯಗಳು! 28ನೀವು ಕ್ಷೇಮದಿಂದಿದ್ದೀರೆಂದು ನಮ್ಮ ನಿರೀಕ್ಷೆ. ಅದೇ ನಮ್ಮ ಬಯಕೆ. ನಾವು ಸಹ ಕ್ಷೇಮದಿಂದಿದ್ದೇವೆ. 29ನೀವು ನಿಮ್ಮ ಮನೆಗಳಿಗೆ ಹಿಂದಿರುಗಿ ನಿಮ್ಮ ಸ್ವಂತ ವ್ಯವಹಾರವನ್ನು ನೋಡಿಕೊಳ್ಳಬೇಕೆಂಬ ನಿಮ್ಮ ಬಯಕೆಯನ್ನು ಕುರಿತು ಮೆನೆಲಾವ್ಸನಿಂದ ನಮಗೆ ತಿಳಿದು ಬಂದಿದೆ. 30ಆದುದರಿಂದ, 'ಕ್ಸಾಂತಿಕಸ್' ತಿಂಗಳ ಮೂವತ್ತನೇ ದಿನದೊಳಗೆ ಮನೆಗೆ ಹಿಂದಿರುಗುವಂಥವರು ನಿರ್ಭಯದಿಂದಿರಬಹುದು. 31ಯೆಹೂದ್ಯರು ತಮ್ಮ ಊಟೋಪಚಾರ ವಿಷಯಗಳಲ್ಲಿ ತಮ್ಮ ಸ್ವಂತ ನಿಯಮಗಳನ್ನು ಪದ್ಧತಿ ಪ್ರಕಾರ ಪಾಲಿಸಲು ಅನುಮತಿ ನೀಡಿದ್ದೇವೆ. ತಿಳಿಯದೆ ಮಾಡಿದ ತಪ್ಪುಗಳಿಗಾಗಿ ಯಾವ ಯೆಹೂದ್ಯನನ್ನೂ ಬಾಧಿಸಬಾರದು. 32ನಿಮ್ಮ ಮನಸ್ಸಿಗೆ ನೆಮ್ಮದಿ ಇರಬೇಕೆಂದು ಮೆನೆಲಾವ್ಸನನ್ನು ಕಳುಹಿಸುತ್ತಿದ್ದೇನೆ. ನಿಮಗೆ ಶುಭವಾಗಲಿ! 33148ನೇ ವರ್ಷದ ಕ್ಸಾಂತಿಕಸ್ ತಿಂಗಳು 15ನೇ ದಿನದಂದು ಈ ಪತ್ರ ಬರೆದಿರುತ್ತೇನೆ."

## ಯೆಹೂದ್ಯರಿಗೆ ರೋಮನ್ನರ ಪತ್ರ

34 "ಯೆಹೂದ್ಯರಿಗೆ ರೋಮನ್ನರು ಸಹ ಒಂದು ಪತ್ರವನ್ನು ಬರೆದರು. ಅದರ ಒಕ್ಕಣೆ ಹೀಗಿದೆ:

"ಯೆಹೂದ್ಯರಿಗೆ ರೋಮಿನ ಪ್ರತಿನಿಧಿಗಳಾದ ಐದನೇ ಮೇಮಿಯಸ್, ಟೈಟಸ್ ಮಾನಿಲಿಯಸ್ ಹಾಗು ಮಾನಿಯುಸ್ ಸೆರ್‌ಜೆಯುಸ್ ಇವರು ಕೋರುವ ಶುಭಾಶಯಗಳು! 35ಅರಸನ ಸಂಬಂಧಿಯಾದ ಸನ್ಮಾನ್ಯ ಲೂಸ್ಯನು ನಿಮಗೆ ನೀಡಿರುವ ಸೌಲಭ್ಯಗಳನ್ನು ನಾವೂ ಮನಃಪೂರ್ವಕವಾಗಿ ಅನುಮೋದಿಸುತ್ತೇವೆ. 36ನಾವು ಈಗ ಅಂತಿಯೋಕಕ್ಕೆ ಹೋಗುವ ದಾರಿಯಲ್ಲಿರುವುದರಿಂದ ಲೂಸ್ಯನು ಅರಸನ ಅವಗಾಹನೆಗೆ ತಂದಿರುವ ವಿಷಯಗಳನ್ನು ಚೆನ್ನಾಗಿ ಮನನ ಮಾಡಿಕೊಂಡು ನಮಗೆ ಯಾರ ಕೈಯಲ್ಲಾದರೂ ನಿಮ್ಮ ಪ್ರತ್ಯುತ್ತರವನ್ನು ಬೇಗನೆ ಕಳಿಸಿಕೊಡಿ. ಆಗ ನಿಮ್ಮ ಅನುಕೂಲಕ್ಕೆ ತಕ್ಕಂತೆ ನಾವೂ ಅದರ ವಿವರಣೆಯನ್ನು ಲೂಸ್ಯನಿಗೆ ನೀಡಬಹುದು. 37ಆದುದರಿಂದ, ನಿಮ್ಮ ನಿರ್ಧಾರವನ್ನು ನಾವು ತಿಳಿಯುವಂತೆ ಓಲೆಕಾರರನ್ನು ಬೇಗನೆ ಕಳುಹಿಸಿಕೊಡಿ. 38ನಿಮಗೆ ಶುಭವಾಗಲಿ! 148ನೇ ವರ್ಷದ ಕ್ಸಾಂತಿಕಸ್ ತಿಂಗಳ 15ನೇ ದಿನದಂದು ಈ ಪತ್ರ ಬರೆದಿದ್ದೇವೆ."

## ಜೊಪ್ಪದ ಯೆಹೂದ್ಯರ ಹತ್ಯೆ

**12** ಯೆಹೂದ್ಯರಿಗೂ ಸಿರಿಯಾದವರಿಗೂ ಸಂಧಾನದ ಒಪ್ಪಂದವಾದ ನಂತರ ಲೂಸ್ಯನು ಅರಸನ ಬಳಿಗೆ ಹಿಂದಿರುಗಿದನು. ಯೆಹೂದ್ಯರು ತಮ್ಮ ಹೊಲಗದ್ದೆಗಳಿಗೆ ಕೆಲಸಕ್ಕೆ ಹೋದರು. 2ಆದರೆ ಸ್ಥಳೀಯ ಅಧಿಕಾರಿಗಳಿಗೆ ಇದ್ದ ತಿಮೊಥೇಯನು, ಗೆನ್ನಯನ ಮಗ ಅಪೊಲ್ಲೋನಿಯುಸನು, ಹಿಯೆರೋನಿಮುಸ್ ಮತ್ತು ದೆಮೋಫೊನ್ ಹಾಗು ಸೈಪ್ರಸ್ ದ್ವೀಪದ ಸೇನಾಪತಿನಿಕಾನೋರ್ – ಇವರೆಲ್ಲರು ಯೆಹೂದ್ಯರಿಗೆ ಶಾಂತಿ ಸಮಾಧಾನದಿಂದ ಬಾಳಗೊಡಿಸಲಿಲ್ಲ.

3ಅದೇ ಸಂದರ್ಭದಲ್ಲಿ ಜೊಪ್ಪದ ಜನರು ಯೆಹೂದ್ಯರ ವಿರುದ್ಧ ಒಂದು ದೊಡ್ಡ ದುಷ್ಕೃತ್ಯವನ್ನೆಸಗಿದರು. ತಮ್ಮ ಮಧ್ಯೆ ವಾಸಿಸುತ್ತಿದ್ದ ಯೆಹೂದ್ಯರೊಂದಿಗೆ ಸ್ನೇಹದಿಂದಿರುವಂತೆ ತೋರಿಸಿಕೊಂಡು ಅವರನ್ನೂ ಅವರ ಕುಟುಂಬಗಳನ್ನೂ ತಯಾರಾಗಿದ್ದ ಹಡಗುಗಳಲ್ಲಿ ತಮ್ಮೊಂದಿಗೆ ಬರಬೇಕೆಂದು ಆಮಂತ್ರಿಸಿದರು. 4ನಗರದ ಜನರು ಏಕಮನಸ್ಸಿನಿಂದ ಈ ಪ್ರಯಾಣಕ್ಕೆ ಒಪ್ಪಿದ್ದರಿಂದ ಯೆಹೂದ್ಯರಿಗೆ ಯಾವ ಹಾನಿಯ ಸುಳಿವು ದೊರಕಲಿಲ್ಲ. ಜನರು ಶಾಂತಿಪರರಾಗಿ ಕಂಡುಬಂದದ್ದರಿಂದ ಯೆಹೂದ್ಯರು ಆಮಂತ್ರಣವನ್ನು ಮನ್ನಿಸಿ ಹೋದರು. ಆದರೆ ಸಮುದ್ರದ ಮಧ್ಯೆ ಹಡಗು ಹೋದಾಗ ಯೆಹೂದ್ಯರೆಲ್ಲರನ್ನು ಸಮುದ್ರದ ತಳಕ್ಕೆ ದಬ್ಬಲಾಯಿತು; ಆ ಗುಂಪಿನಲ್ಲಿ ಸುಮಾರು ಇನ್ನೂರು ಮಂದಿ ಯೆಹೂದ್ಯರಿದ್ದರು.

5 ತನ್ನ ಸ್ವಜನರ ಮೇಲೆ ಬರಮಾಡಿದ ಇಂಥ ದುರಂತದ ಬಗ್ಗೆ ಯೂದನು ತಿಳಿದಾಕ್ಷಣ, ತನ್ನ ಜನರಿಗೆ ಸುದ್ದಿ ಮುಟ್ಟಿಸಿದನು. 6ನೀತಿ ಸ್ವರೂಪ ನ್ಯಾಯಾಧಿಪತಿಯಾದ ದೇವರಿಗೆ ಪ್ರಾರ್ಥನೆ ಮಾಡಿದ ಮೇಲೆ, ಕೊಲೆಗಾರರ ಮೇಲೆ ಹಲ್ಲೆ ಮಾಡಿದರು. ಅಂಧಕಾರದ ಮುಸುಕಿನಲ್ಲಿ ಬಂದರಿಗೆ ಬೆಂಕಿಯಿಟ್ಟರು; ಹಡಗುಗಳನ್ನು ಸುಟ್ಟು ಹಾಕಿದರು; ಅಲ್ಲಿ ಆಶ್ರಯಕ್ಕಾಗಿ ಬಂದಿದ್ದ ಜನರನ್ನೆಲ್ಲ ಸಂಹರಿಸಿಬಿಟ್ಟರು. 7ನಗರದ ಹೆಬ್ಬಾಗಿಲು ಮುಚ್ಚಿ ಬೀಗ ಹಾಕಿದ ನಂತರ ಯೂದನು ಹಿಮ್ಮೆಟ್ಟಿದನು. ಆದರೆ ಜೊಪ್ಪದ ಜನಸಮೂಹವನ್ನೆಲ್ಲ ನಿರ್ನಾಮಮಾಡಲು ಮತ್ತೊಮ್ಮೆ ಹಿಂದಿರುಗುವುದಾಗಿ ನಿರ್ಧಾರ ಮಾಡಿದನು.

8 ಜಾಮ್ನಿಯದ ಜನರು ಕೂಡ ತಮ್ಮ ನಗರದಲ್ಲಿದ್ದ ಯೆಹೂದ್ಯರನ್ನು ಸಂಹರಿಸಲು ಸಂಚು ಮಾಡಿದ್ದಾರೆಂದು ಯೂದನಿಗೆ ತಿಳಿದು ಬಂತು. 9ಆದ್ದರಿಂದ ಅವನು ಜಾಮ್ನಿಯ ನಗರವನ್ನು ರಾತ್ರಿಯಲ್ಲೆ ಮುತ್ತಿ, ಬಂದರಿಗೆ ಬೆಂಕಿಯಿಟ್ಟು, ಹಡಗುಗಳನ್ನು ನಾಶಮಾಡಿದನು. ಐವತ್ತು ಕಿಲೋಮೀಟರ್ ದೂರವಿದ್ದ ಜೆರುಸಲೇಮಿನಿಂದ ಆ ಬೆಂಕಿಯನ್ನು ನೋಡಬಹುದಾಗಿತ್ತು.

## ಗಿಲ್ಯಾದ್ ಪ್ರಾಂತ್ಯದಲ್ಲಿ ಯೂದನು ಗಳಿಸಿದ ಜಯ

(1 ಮಕ್ಕಬಿ. 5.9–54)

10 ಜಾಮ್ನಿಯದಿಂದ ತಿಮೊಥೇಯನೊಂದಿಗೆ ಯುದ್ಧಮಾಡಲು ಎರಡು ಕಿಲೋಮೀಟರ್ ದೂರ ಹೋಗುವಷ್ಟರಲ್ಲಿ, 5000 ಜನಕ್ಕಿಂತಲೂ ಹೆಚ್ಚಾದ ಅರಬ್ಬಿಯರು ಸುಮಾರು 500 ರಾಹುತರೊಂದಿಗೆ ಯೂದನ ಜನರ ಮೇಲೆ ದಾಳಿ ಮಾಡಿದರು. 11ಕಾಳಗವು ಘೋರವಾಗಿತ್ತು. ಆದರೆ ದೇವರ ಸಹಾಯದಿಂದ ಯೂದನು ಮತ್ತು ಅವನ ಸಂಗಡಿಗರು ಜಯಗಳಿಸಿದರು. ಪರಾಭವಗೊಂಡ ಆ ಮರಳುಗಾಡಿನವರು ಸಂಧಾನದ ಹಸ್ತಕ್ಕಾಗಿ ಭಿಕ್ಷೆ ಬೇಡಿದರು; ಅಲ್ಲದೆ ತಮ್ಮ ಪಶುಪ್ರಾಣಿಗಳನ್ನು ಕೊಟ್ಟು ಇತರ ಕೆಲಸ ಕಾರ್ಯಗಳಲ್ಲಿ ಸಹಾಯ ನೀಡುವುದಾಗಿ ಮಾತು ಕೊಟ್ಟರು. 12ಹಲವು ವಿಧದಲ್ಲಿ ಈ ಜನರು ಮುಂದಕ್ಕೆ ಪ್ರಯೋಜನಕಾರಿಗಳು ಆಗಬಹುದು ಎಂಬ ನಿರೀಕ್ಷೆಯಿಂದ ಯೂದನು ಅವರೊಂದಿಗೆ ಸಂಧಾನ ಮಾಡಿಕೊಂಡನು. ಪರಸ್ಪರ ವಾಗ್ದಾನಗಳು ಮುಗಿದನಂತರ ಅರಬ್ಬಿಯರು ತಮ್ಮ ಡೇರೆಗಳಿಗೆ ಹಿಂದಿರುಗಿದರು.

13 ಬಲವಾದ ಕೋಟೆಗಳುಳ್ಳ ಹಾಗೂ ಸಂಮಿಶ್ರ ಅನ್ಯಧರ್ಮೀಯ ಜನರಿದ್ದ ಕ್ಯಾಸ್ಪಿನ್ ನಗರವನ್ನು ಸಹ ಯೂದನು ಮುತ್ತಿದನು. 14ಕೋಟೆಯೊಳಗಿದ್ದವರಾದರೋ, ಗೋಡೆಗಳ ಭದ್ರತೆ ಹಾಗು ಆಹಾರ ಪದಾರ್ಥಗಳ ರಾಶಿಯನ್ನು ನೆಚ್ಚಿಕೊಂಡಿದ್ದರು. ಯೂದನನ್ನು ಮತ್ತು ಅವನ ಸಂಗಡಿಗರನ್ನು ಸೊಕ್ಕಿನಿಂದ ತಾತ್ಸಾರ ಮಾಡಿದರು; ದೇವದೂಷಣೆಗಳನ್ನಾಡಿದರು. 15ಯೆಹೂದ್ಯರಾದರೋ ಯೆಹೋಶುವನ ಕಾಲದಲ್ಲಿದ್ದ ಕೋಟೆ ಕೆಡವಬಲ್ಲ ಟಗರು ದಿಮ್ಮಿಗಳಾಗಲೀ ಆಯುಧಗಳಾಗಲೀ ಇಲ್ಲದೆ, ಜೆರಿಕೋವಿನ ಗೋಡೆಯನ್ನು ಕೆಡವಿದಂತೆ ಕ್ಯಾಸ್ಪಿನ್ ನಗರದ ಗೋಡೆಯನ್ನು ಮುತ್ತಿ ಹಾಳುಮಾಡಿದರು. 16ದೇವರ ಚಿತ್ತಕ್ಕನುಸಾರ ಅವರು ಆ ನಗರವನ್ನು ವಶಪಡಿಸಿಕೊಂಡರು. ಸುಮಾರು ಅರ್ಧ ಕಿಲೋಮೀಟರ್ ಅಗಲವಿದ್ದ ಕೆರೆಯು ಜನರ ರಕ್ತದಿಂದ ತುಂಬಿಹೋಯಿತು. ಯೆಹೂದ್ಯರು ಅಷ್ಟೊಂದು ಜನರನ್ನು ಸದೆಬಡಿದರು.

## ತಿಮೊಥೇಯನ ಸೋಲು

(1 ಮಕ್ಕಬಿ. 5.27–44)

17 ಯೂದನು ಮತ್ತು ಸಂಗಡಿಗರು ಅಲ್ಲಿಂದ 150 ಕಿಲೋಮೀಟರ್ ದೂರ ಬರಲು ಚರಾಕ್ಸ್ ಎಂಬ ಊರನ್ನು ತಲುಪಿದರು. ಟೂಬಿಯರು ಎನ್ನಲಾದ ಯೆಹೂದ್ಯರು ಅಲ್ಲಿದ್ದರು. 18ಆ ಪ್ರಾಂತ್ಯದಲ್ಲಿ ತಿಮೊಥೇಯನನ್ನು ಅವರು ಕಾಣಲಿಲ್ಲ; ಅವನು ಆಗಾಗಲೇ ಆ ಸ್ಥಳವನ್ನು ಬಿಟ್ಟು ಹೋಗಿದ್ದನು. ಒಂದು ಸ್ಥಳದಲ್ಲಿ ಸುಸಜ್ಜಿತವಾದ ಕೋಟೆಯೊಂದನ್ನು ಮಾತ್ರ ಬಿಟ್ಟಿದ್ದನು. ಬೇರಾವ ಕಾರ್ಯವನ್ನೂ ಅವನು ಅಲ್ಲಿ ಮಾಡಲಾಗಲಿಲ್ಲ. 19ಯೂದಮಕ್ಕಬಿಯನ ಸೇನಾಪತಿಗಳಾದ ದೊಸಿತೇಯುಸ್ ಮತ್ತು ಸೊಸಿಪಾತೆರ್ ಎಂಬವರು ತಿಮೊಥೇಯನು ಹಿಂದೆ ಬಿಟ್ಟು ಹೋದ ಆ ಹತ್ತು ಸಾವಿರ ಮಂದಿ ಜನರನ್ನೂ ವಧಿಸಿದರು. 20ಅನಂತರ ಯೂದನು ತನ್ನ ಸೈನ್ಯವನ್ನು ಹಲವಾರು ದಳಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ದಳಕ್ಕೂ ನಾಯಕನನ್ನು ನೇಮಿಸಿದನು. ಸೊಸಿಪಾತೆರನನ್ನೂ ದೊಸಿತೇಯುಸನನ್ನೂ ದಂಡನಾಯಕರನ್ನಾಗಿ ನೇಂಇಸಿ ತಾನು, 1,20,000 ಪದಾತಿ ಸೇನಾಳುಗಳು, ಮತ್ತು 2,500 ರಾಹುತರೊಂದಿಗೆ ಹೋಗಿದ್ದ ತಿಮೊಥೇಯನನ್ನು ವೇಗವಾಗಿ ಹಿಂಬಾಲಿಸಿದನು. 21ತಿಮೊಥೇಯನು ಯೂದನ ಆಗಮನದ ಬಗ್ಗೆ ಸುದ್ದಿ ಬಂದೊಡನೆ ಹೆಂಗಸರು ಮತ್ತು ಮಕ್ಕಳನ್ನು ಸಾಮಾಗ್ರಿಗಳೊಂದಿಗೆ ಕರ್ನ್ಯಿಯಿಮ್ ಎಂಬ ಸ್ಥಳಕ್ಕೆ ಕಳುಹಿಸಿಕೊಟ್ಟನು; ಕರ್ನ್ಯಿಯಿಮ್‍ನ ಎಲ್ಲ ದಾರಿಗಳೂ ಇಕ್ಕಟ್ಟಾಗಿದ್ದರಿಂದ ಅದನ್ನು ಮುತ್ತಲು, ಅಥವಾ ಅಲ್ಲಿಗೆ ಹೋಗಲು ಬಹಳ ಕಷ್ಟವಾಗಿತ್ತು. 22ಆದರೆ ಯೂದನ ಮೊದಲನೇ ಸೇನಾದಳವನ್ನು ಕಂಡೊಡನೆ ಸಕಲವನ್ನೂ ವೀಕ್ಷಿಸುವ ದೇವರ ಒಂದು ದಿವ್ಯದರ್ಶನದ ನಿಮಿತ್ತ ಶತ್ರುವಿಗೆ ಭಯಭ್ರಾಂತಿ ಉಂಟಾಯಿತು. ಅವರು ಚೆಲ್ಲಾಪಿಲ್ಲಿಯಾಗಿ ಎಲ್ಲಾ ಕಡೆಗೂ ಓಡಿಹೋದರು. ಇದರ ಪರಿಣಾಮವಾಗಿ ಸ್ವಂತ ಕತ್ತಿಯ ಮೊನೆಯಿಂದಲೇ ಅವರಿಗೆ ತಿವಿತ ಉಂಟಾಯಿತು. 23ಯೂದನು ಮತ್ತು ಅವನ ಸೇನಾಳುಗಳು ವೇಗವಾಗಿ ಶತ್ರುವನ್ನು ಬೆನ್ನಟ್ಟಿ ಆ ಪಾಪಿಗಳನ್ನು ಕತ್ತಿಯಿಂದ ಕೊಂದರು; ಸುಮಾರು 30,000 ಜನರು ಹತರಾದರು.

24 ತಿಮೊಥೇಯನು ಕೂಡ ದೊಸಿತೇಯಸನ ಹಾಗೂ ಸೊಸಿಪಾತೆರನ ಮತ್ತು ಅವರ ಜನರ ಕೈಗೆ ಸಿಕ್ಕಿಬಿದ್ದನು. ಆದರೆ ಅತ್ಯಂತ ಕುಯುಕ್ತಿಯಿಂದ ಸುರಕ್ಷಿತವಾಗಿ ಹೋಗಬಿಡಲು ಅವರನ್ನು ಅಂಗಲಾಚಿದನು.

"ನಿಮ್ಮಲ್ಲಿ ಅನೇಕರನ್ನು, ಅಂದರೆ ತಂದೆತಾಯಿಗಳನ್ನು ಹಾಗು ಅಣ್ಣ ತಮ್ಮಂದಿರನ್ನು ಸೆರೆಯಲ್ಲಿ ಇಟ್ಟಿದ್ದೇನೆ. ನನಗೆ ಏನಾದರೂ ಹಾನಿ ಆದರೆ ಅವರಿಗೆ ಸ್ವಲ್ಪವಾದರೂ ಕರುಣೆ ಸಿಗುವಂತಿಲ್ಲ. 25ಅವರನ್ನೆಲ್ಲ ಬಿಟ್ಟು ಬಿಡುತ್ತೇನೆ," ಎಂದು ಹಲವಾರು ವಿಧದಲ್ಲಿ ಪ್ರಮಾಣಮಾಡಿದ ಮೇಲೆ ದೊಸಿತೇಯಸನು ಮತ್ತು ಸೊಸಿಪಾತೆರನು, ತಮ್ಮ ಬಂಧುಗಳ ಸುರಕ್ಷತೆಯ ದೃಷ್ಟಿಯಿಂದ, ಅವನನ್ನು ಬಿಟ್ಟು ಬಿಟ್ಟರು.

### ಯೂದನ ಇತರ ವಿಜಯ ಯಾತ್ರೆಗಳು

( 1ಮಕ್ಕಬಿ. 5.45–54)

26 ಅನಂತರ ಕರ್ನ್ಯಿಮ್ ನಗರದ ಮೇಲೆ ಮತ್ತು ಅತರ್ಗತೀಸ್ ದೇವತೆಯ ದೇವಸ್ಥಾನದ ಮೇಲೆ ಯೂದನು ದಾಳಿ ಮಾಡಿ, ಸುಮಾರು 25 ಸಾವಿರ ಜನರನ್ನು ಕೊಂದನು. 27ಆ ನಗರವನ್ನೂ ದೇವಸ್ಥಾನವನ್ನೂ ಪೂರ್ತಿಯಾಗಿ ನಾಶ ಮಾಡಿದ ನಂತರ, ಇತರ ಎಲ್ಲಾ ರಾಷ್ಟ್ರಗಳ ಜನಸಮೂಹದೊಂದಿಗೆ ಲೂಸ್ಯನು ನೆಲೆಸಿದ್ದ ಸುಭದ್ರ ಎಫ್ರೋನ್ ನಗರದ ಮೇಲೆ ದಾಳಿಮಾಡಿದನು. ಗಟ್ಟಿಮುಟ್ಟಾದ ಯುವಕರು ಕೋಟೆಗೋಡೆಗಳ ಮುಂದೆ ನಿಂತುಕೊಂಡು ಧೈರ್ಯದಿಂದ ಹೋರಾಡಿ ಅದನ್ನು ರಕ್ಷಿಸಲು ಪ್ರಯತ್ನಿಸಿದರು. ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರ ಹಾಗೂ ಕ್ಷಿಪಣಿಗಳ ದೊಡ್ಡ ಉಗ್ರಾಣಗಳು ಅದರೊಳಗೆ ಇದ್ದವು. 28ಆಗ ಯೆಹೂದ್ಯರು, ತಮ್ಮ ಶತ್ರುಗಳ ಬಲವನ್ನು ಮುರಿಯಬಲ್ಲ ಸರ್ವಶಕ್ತ ದೇವರನ್ನು ಪ್ರಾರ್ಥಿಸಿದರು. ಎಫ್ರೋನ್‌ನಗರ ಯೆಹೂದ್ಯರ ವಶವಾಯಿತು. ಅದರಲ್ಲಿದ್ದ ಸುಮಾರು ಇಪ್ಪತ್ತೈದು ಸಾವಿರ ಜನರನ್ನು ಅವರು ಸಂಹರಿಸಿದರು.

29 ಅಲ್ಲಿಂದ ಹೊರಟು, ಜೆರುಸಲೇಮಿಗೆ 120 ಕಿಲೋಮೀಟರ್ ದೂರದಲ್ಲಿರುವ ಶಿತೋಪೊಲಿ ಎಂಬ ಊರಿಗೆ ತ್ವರೆಯಾಗಿ ಬಂದರು. 30ಅಲ್ಲಿ ನೆಲೆಸಿದ್ದ ಯೆಹೂದ್ಯರಿಗೆ ಶಿತೋಪೊಲಿಯವರು ತೋರಿಸಿದ ಪ್ರೀತ್ಯಾದರದ ನಿಮಿತ್ತ ಹಾಗು ಕಷ್ಟಕಾಲದಲ್ಲಿ ಅವರಿಗೆ ನೀಡಿದ ದಯಾಪೂರಿತ ಸಹಾಯದ ನಿಮಿತ್ತ ಅವರಿಗೆ ವಂದನೆಗಳನ್ನು ಸಲ್ಲಿಸಿದರು. 31ಇನ್ನು ಮುಂದಕ್ಕೂ ಅವರ ಬಂಧು ಬಾಂಧವರಿಗೆ ಅದೇ ಪ್ರಕಾರ ಸಹಾಯ ಸಹಾನುಭೂತಿಗಳನ್ನು ತೋರಿಸಬೇಕೆಂದು ಕೇಳಿಕೊಂಡರು. ಆಗ ಪಂಚಾಶತ್ತಮದ ಹಬ್ಬ ಸನ್ನಿಹಿತವಾಗಿ ಇದ್ದರಿಂದ, ಅಲ್ಲಿಂದ ಜೆರುಸಲೇಮಿಗೆ ಮರಳಿದರು.

### ಗೊರ್ಗಿಯನ ಸೋಲು

32 ಪಂಚಾಶತ್ತಮದ ಹಬ್ಬದ ನಂತರ, ಅವರು ಇದುಮೇಯದ ರಾಜ್ಯಪಾಲನಾದ ಗೊರ್ಗಿಯನ ಮೇಲೆ ದಾಳಿಮಾಡಿದರು: 33ಗೊರ್ಗಿಯನು 3,000 ಕಾಲಾಳುಗಳೊಂದಿಗೂ 400 ರಾಹುತರೊಂದಿಗೂ ಯುದ್ಧಸನ್ನದ್ಧನಾಗಿದ್ದನು. 34ಕಾಳಗ ನಡೆದಾಗ ಕೆಲವು ಯೆಹೂದ್ಯರು ಹತರಾದರು. 35ಆದರೆ ದೊಸಿತೇಯಸ್ ಎಂಬಾತ (ಈತ ಬಾಸೆಮೋರನ ಯೆಹೂದ್ಯರಲ್ಲಿ ಒಬ್ಬನು) ಗಟ್ಟಿಮುಟ್ಟಾಗಿದ್ದು ಕುದುರೆಯ ಸವಾರಿ ಮಾಡುತ್ತಾ ಗೊರ್ಗಿಯನನ್ನು ಹಿಡಿದನು. ಅವನನ್ನು ಜೀವಂತವಾಗಿ ಹಿಡಿದುಕೊಂಡು ಹೋಗಬೇಕೆಂದು ಅವನ ಮೇಲಂಗಿಯನ್ನು ಹಿಡಿದು ಎಳೆಯುತ್ತಿದ್ದನು. ಅಷ್ಟರಲ್ಲಿ ತ್ರಾಸಿಯಾದ ರಾಹುತನೊಬ್ಬ ಅವನ ಮೇಲೆ ಬಿದ್ದು ಅವನ ತೋಳನ್ನು ಕಡಿದುಹಾಕಿದನು. ಹೀಗೆ ಗೊರ್ಗಿಯನು ತಪ್ಪಿಸಿಕೊಂಡು ಮಾರಿಸಾ ನಗರವನ್ನು ತಲುಪಿದನು.

36 ಇಷ್ಟರವರೆಗೆ ಯೆಹೂದ್ಯರು ಎಸ್ದ್ರಿಯಾಸನ ಮುಂದಾಳತ್ವದಲ್ಲಿ ದೀರ್ಘಕಾಲ ಹೋರಾಡಿ ಬಹಳವಾಗಿ ದಣಿದು ಹೋಗಿದ್ದರು. ಆದುದರಿಂದ ಯೂದನು ಸರ್ವೇಶ್ವರನಿಗೆ ಪ್ರಾರ್ಥನೆ ಮಾಡಿ, ಯುದ್ಧದಲ್ಲಿ ತನ್ನ ಪಕ್ಷವಹಿಸಿ ತನ್ನವರಿಗೆ ನಾಯಕ ಆಗಿರಬೇಕೆಂದು ಬೇಡಿಕೊಂಡನು. 37ತನ್ನ ಪೂರ್ವಜರ ಶೈಲಿಯಲ್ಲಿ, ಸ್ವಂತಭಾಷೆಯಲ್ಲೇ ಗೀತೆಗಳಿಂದ ಯುದ್ಧಕ್ಕೆ ಕರೆಕೊಟ್ಟು ಅನಿರೀಕ್ಷಿತವಾದ ದಾಳಿಮಾಡಿ, ಗೊರ್ಗಿಯನ ಸೈನ್ಯವು ಪಲಾಯನಗೈಯುವಂತೆ ಮಾಡಿದನು.

## ಯುದ್ಧದಲ್ಲಿ ಮಡಿದವರಿಗಾಗಿ ಪ್ರಾರ್ಥನೆ ಹಾಗು ಪಾಪಪರಿಹಾರ ಬಲಿಯರ್ಪಣೆ

38 ಅನಂತರ ಯೂದನು ತನ್ನ ಸೈನ್ಯವನ್ನು ಒಟ್ಟುಗೂಡಿಸಿ, ಅದುಲ್ಲಾಮ್ ನಗರಕ್ಕೆ ಹೋದನು. ಅದು ಸಬ್ಬತ್ತಿನ ಹಿಂದಿನ ದಿನವಾದ್ದರಿಂದ ಪದ್ಧತಿಯ ಪ್ರಕಾರ ಶುದ್ಧೀಕರಣ ಮಾಡಿಕೊಂಡು ಸಬ್ಬತ್ ದಿನವನ್ನು ಆಚರಿಸಿದನು.

39 ಮಾರನೆಯ ದಿನ ತುರ್ತಾಗಿ ಮಾಡಬೇಕಾದ ಕಾರ್ಯವೊಂದಿತ್ತು: ಯೂದನು ಮತ್ತು ಅವನ ಸಂಗಡಿಗರು ಯುದ್ಧದಲ್ಲಿ ಮಡಿದ ತಮ್ಮವರ ಶವಗಳನ್ನು ಅವರ ಪದ್ಧತಿಯ ಪ್ರಕಾರ ತಮ್ಮ ಕೌಟುಂಬಿಕ ಸಮಾಧಿಗಳಲ್ಲಿ ಭೂಸ್ಥಾಪನೆ ಮಾಡಬೇಕಾಗಿತ್ತು. 40ಆಗ ಪ್ರತಿಯೊಂದು ಶವದ ಬಟ್ಟೆಯಡಿಯಲ್ಲಿ ಜಾಮ್ನಿಯ ದೇವತೆಗಳ ತಾಯಿತಿಗಳು ಸಿಕ್ಕಿದವು. ಅವು ಯೆಹೂದ್ಯರಿಗೆ ಧರ್ಮಶಾಸ್ತ್ರದ ಪ್ರಕಾರ ನಿಷಿದ್ಧವಾಗಿದ್ದವು. ಆಗ ಜನರು ಏತಕ್ಕಾಗಿ ಹತರಾದರು ಎಂಬುದು ಎಲ್ಲರಿಗೂ ಸ್ಪಷ್ಟವಾಯಿತು. 41ಆದುದರಿಂದ ಅವರು ಅಗೋಚರ ವಾದುದ್ದನ್ನು ಬೆಳಕಿಗೆ ತರುವಂಥ ನೀತಿಸ್ವರೂಪ ಹಾಗು ನ್ಯಾಯಾಧೀಶರಾದ ಸರ್ವೇಶ್ವರನ ಯೋಜನೆಯನ್ನು ಕೊಂಡಾಡಿದರು. 42ಅವರು ಕಟ್ಟಿಕೊಂಡ ಈ ಪಾಪವನ್ನು ಪೂರ್ತಿಯಾಗಿ ಅಳಿಸಿಬಿಡಬೇಕೆಂದು ದೇವರಲ್ಲಿ ಪ್ರಾರ್ಥಿಸಿದರು. ಪಾಪವನ್ನು ಮಾಡಿದವರಿಗೆ ಸಂಭವಿಸುವುದೇನೆಂಬುದನ್ನು ಜನರು ಕಣ್ಣಾರೆ ಕಂಡದ್ದರಿಂದ ಅವರು ಪಾಪದಿಂದ ದೂರವಿರಬೇಕೆಂದು ಯೂದನು ಒತ್ತಿ ಹೇಳಿದನು. 43ಅಂತೆಯೇ ಯೂದನು ತನ್ನ ಜನರಿಂದ ಸುಮಾರು ಎರಡು ಕಿಲೋಗ್ರಾಮಿನಷ್ಟು ಬೆಳ್ಳಿಯನ್ನು ಸಂಗ್ರಹಿಸಿ, ಪಾಪಪರಿಹಾರಕ್ಕಾಗಿ ಬಲಿಯರ್ಪಿಸಬೇಕೆಂದು ಜೆರುಸಲೇಮಿಗೆ ಕಳುಹಿಸಿದನು. ಮೃತರ ಪುನರುತ್ಥಾನದಲ್ಲಿ ನಂಬಿಕೆಯಿದ್ದುದರಿಂದಲೇ ಯೂದನು ಈ ಪುಣ್ಯಕಾರ್ಯವನ್ನು ಮಾಡಿದ್ದು. 44ಮೃತರಾದವರು ಮರಳಿ ಉತ್ಥಾನ ಹೊಂದುತ್ತಾರೆ ಎಂಬುದನ್ನು ವಿಶ್ವಾಸಿಸದೆ ಹೋಗಿದ್ದರೆ ಅಂಥವರಿಗೋಸ್ಕರ ಪ್ರಾರ್ಥನೆ ಮಾಡುವುದು ನಿರರ್ಥಕವಾಗುತ್ತಿತ್ತು; ಮೂರ್ಖತನವಾಗುತ್ತಿತ್ತು. 45ಆದರೆ ದೈವಭಕ್ತರಾಗಿ ಮಡಿದವರಿಗೆ ಮಹತ್ತರವಾದ ಸಂಭಾವನೆ ದೊರಕುವುದೆಂಬ ನಿರೀಕ್ಷೆ ಇದ್ದುದರಿಂದಲೇ ಯೂದನ ಆಲೋಚನೆ ನಿಜಕ್ಕೂ ಪವಿತ್ರವಾಗಿತ್ತು, ಪುನೀತವಾಗಿತ್ತು. ಆದುದರಿಂದಲೇ ಮೃತರಾದವರು ತಮ್ಮ ಪಾಪದಿಂದ ವಿಮೋಚನೆ ಹೊಂದಲೆಂದು ಅವರಿಗೋಸ್ಕರ ಅವನು ಪಾಪಪರಿಹಾರ ಬಲಿಯನ್ನು ಸಮರ್ಪಿಸಿದನು.

## ಮೆನೆಲಾವ್ಸನ ಭೀಕರ ಮರಣ

**13** 149ನೇ ವರ್ಷದಲ್ಲಿ ಜುದೇಯದ ಮೇಲೆ ದಾಳಿಮಾಡಲು ಅಂತಿಯೋಕ ಯುಪಾತರನು ದೊಡ್ಡ ಸೈನ್ಯದೊಂದಿಗೆ ಬರುತ್ತಿದ್ದಾನೆಂದು ತಿಳಿಯಿತು. 2ಅವನೊಂದಿಗೆ ರಾಜ್ಯ ಅಧಿಕಾರಿಯೂ ರಾಜಕುಮಾರನ ಪೋಷಕನೂ ಆಗಿದ್ದ ಲೂಸ್ಯನು ಇದ್ದಾನೆ ಎಂಬ ವದಂತಿ ಯೂದ ಮತ್ತು ಅವನ ಸಂಗಡಿಗರಿಗೆ ತಲುಪಿತು. ಅವರಿಬ್ಬರಿಗೆ 1,10,000 ಕಾಲಾಳುಗಳು, 5,3000 ರಾಹುತರು, 22 ಆನೆಗಳು, ಹಾಗು 300 ರಥಗಳು ಇದ್ದವು. ಆ ರಥಗಳ ಚಕ್ರಗಳಿಗೆ, ಚಕ್ರಾಕಾರದ ಗರಗಸಗಳಿದ್ದವು.

3 ಈ ಅವಕಾಶವನ್ನು ದುರುಪಯೋಗಿಸಿಕೊಳ್ಳಲು ಮೆನೆಲಾವ್ಸನು ಅಂತಿಯೋಕನ ಕಡೆ ಹೋಗಿ ಅವನಿಗೆ ಬೆಂಬಲಕೊಟ್ಟಂತೆ ನಟಿಸಿದನು. ಅವನು ಇದನ್ನು ಮಾಡಿದ್ದು ರಾಷ್ಟ್ರದ ಮೇಲಿನ ಅಭಿಮಾನದಿಂದಲ್ಲ, ಆದರೆ ಪ್ರಧಾನಯಾಜಕ ಪದವಿಯನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ. 4ಆದರೆ ರಾಜಾಧಿರಾಜರಾದ ದೇವರು ಈ ದುಷ್ಟ ಕುತಂತ್ರಿಯ ಮೇಲೆ ಅಂತಿಯೋಕನ ಕೋಪವನ್ನು ಕೆರಳಿಸಿದರು. ಹೇಗೆಂದರೆ, ಮೆನೆಲಾವ್ಸನೇ ಎಲ್ಲಾ ಅಪಘಾತಗಳಿಗೆ ಮೂಲ ಕಾರಣನೆಂದು ಲೂಸ್ಯನು ಅಂತಿಯೋಕನಿಗೆ ತಿಳಿಸಿದಾಗ, ಅಂತಿಯೋಕನು ತಕ್ಷಣವೇ ಮೆನೆಲಾವ್ಸನನ್ನು ಹಿಡಿದು ಬೆರೋಯಕ್ಕೆ ತೆಗೆದುಕೊಂಡು ಹೋಗಿ, ಅಲ್ಲಿ ಅವರ ಪದ್ಧತಿಯ ಪ್ರಕಾರ, ಅವನನ್ನು ಕೊಲ್ಲಿಸಬೇಕೆಂದು ಆಜ್ಞೆಮಾಡಿದನು. 5ಬೆರೋಯದಲ್ಲಿ 22 ಮೀಟರ್ ಎತ್ತರದ ಗೋಪುರವಿದೆ. ಅದರ ಅಡಿಯಲ್ಲಿ ಬೂದಿ ತುಂಬಿದೆ. ಆ ಗೋಪುರದ ಒಳಗಿನ ಸುತ್ತುಕಟ್ಟು, ಅಡಿಯಲ್ಲಿರುವ ಬೂದಿಯ ಕಡೆಗೆ ಇಳಿಜಾರಾಗಿದೆ. 6ದೇವದ್ರೋಹವನ್ನಾಗಲಿ, ಇತರ ಘನಾಪರಾಧವನ್ನಾಗಲಿ ಮಾಡಿದವರನ್ನು ಆ ಗೋಪುರದ ಮೇಲಿಂದ ತಳ್ಳಿ ಸಾಯಿಸುತ್ತಿದ್ದರು. 7ಈ

ರೀತಿಯಲ್ಲಿ ಮೆನೆಲಾವ್ಸನನ್ನು ವಧಿಸಲಾಯಿತು. ಅವನಿಗೆ ಶವಸಂಸ್ಕಾರವನ್ನು ಪಡೆಯುವ ಅವಕಾಶ ಇಲ್ಲದಂತಾಯಿತು. 8ಇದು ಅವನಿಗೆ ನ್ಯಾಯ ದಂಡನೆಯೇ ಆಗಿತ್ತು. ಏಕೆಂದರೆ ಅವನು ಪರಿಶುದ್ಧವಾದ ಬಲಿಪೀಠದ ಅಗ್ನಿ ಮತ್ತು ಬೂದಿಯನ್ನು ಹೊಲೆಮಾಡಿದ್ದನು. ಈಗ ಅವನು ಬೂದಿಯಲ್ಲೇ ಸಾವನ್ನಪ್ಪಬೇಕಾಯಿತು.

### ಮೊದೇನ ನಗರದ ಬಳಿ ನಡೆದ ಕಾಳಗ

9 ತನ್ನ ತಂದೆಯ ಕಾಲದಲ್ಲಿ ನಡೆದುದಕ್ಕಿಂತಲೂ ಹೆಚ್ಚಿನ ಬರ್ಬರ ರೀತಿಯಲ್ಲಿ ಅಂತಿಯೋಕನು ಯೆಹೂದ್ಯರ ಮೇಲೆ ದಾಳಿಮಾಡಬೇಕೆಂದು ಯೋಜನೆ ಮಾಡಿದನು. 10ಯೂದನಿಗೆ ಈ ಸಮಾಚಾರ ಮುಟ್ಟಿತು. ಕೂಡಲೇ, ತಮ್ಮ ಧರ್ಮಶಾಸ್ತ್ರ, ನಾಡು ಮತ್ತು ಮಹಾಪವಿತ್ರ ದೇವಾಲಯವನ್ನು ಕಳೆದುಕೊಳ್ಳುವ ಈ ಅಪಾಯಕರ ಸಂದರ್ಭದಲ್ಲಿ ದೇವರನ್ನು ಹಗಲೂ ರಾತ್ರಿ ಪ್ರಾರ್ಥಿಸಬೇಕೆಂದು ಜನರಿಗೆ ತಿಳಿಸಿದನು. 11ಈಗ ತಾನೇ ಪುನರ್ಜೀವ ಪಡೆದಂತಿದ್ದ ತಮ್ಮ ನಾಡು ವಿಶ್ವಾಸರಹಿತ ಪರಕೀಯರ ಕೈಗೆ ಸಿಕ್ಕಿ ಬೀಳದಂತೆ ಕಾಪಾಡಲು ದೇವರಲ್ಲಿ ಮೊರೆಯಿಡಬೇಕೆಂದು ತನ್ನ ಜನರಿಗೆ ಆಜ್ಞಾಪಿಸಿದನು. 12ಅವರೆಲ್ಲರು ಮೂರು ದಿನಗಳವರೆಗೆ ಉಪವಾಸಮಾಡಿ, ಸಾಷ್ಟಾಂಗವಾಗಿ ಬಿದ್ದು, ಕಣ್ಣೀರು ಇಡುತ್ತಾ ಒಕ್ಕೊರಲಿನಿಂದ ದೇವರ ಸಹಾಯಕ್ಕಾಗಿ ಪ್ರಾರ್ಥನೆಮಾಡಿದರು. ಅನಂತರ, ಯೂದನು ಅವರಿಗೆ ಉತ್ತೇಜನವನ್ನಿತ್ತು ಯುದ್ಧಕ್ಕೆ ಸಿದ್ಧರಾಗಬೇಕೆಂದು ಅಪ್ಪಣೆ ಮಾಡಿದನು.

13 ತರುವಾಯ ಯೂದನು ಪ್ರಮುಖರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿದನು. ಆಮೇಲೆ ಅರಸನ ಸೈನ್ಯ ಜುದೇಯನಾಡನ್ನು ಪ್ರವೇಶಿಸಿ, ಜೆರುಸಲೇಮನ್ನು ವಶಪಡಿಸಿಕೊಳ್ಳುವುದಕ್ಕೆ ಮುಂಚಿತವಾಗಿಯೇ, ದೇವರ ಸಹಾಯದಿಂದ ಸಮಸ್ಯೆಯನ್ನು ಬಗೆಹರಿಸಲು ನಿರ್ಧರಿಸಿದನು. 14ವಿಶ್ವದ ಸೃಷ್ಟಿಕರ್ತರಿಗೆ ಯುದ್ಧದ ಪರಿಣಾಮವನ್ನು ಬಿಟ್ಟು, ತಮ್ಮ ಧರ್ಮಶಾಸ್ತ್ರಕ್ಕಾಗಿ, ತಮ್ಮ ಇಡೀ ಆಚಾರ ವಿಚಾರಗಳಿಗಾಗಿ ಶೂರರಂತೆ ಹೋರಾಡಲು ಹುರಿದುಂಬಿಸಿದನು. ಇದೇ ಯೂದನು ಮೊದೇನ ನಗರದ ಬಳಿ ದಂಡಿಳಿಸಿದನು. 15ದೇವರಿಂದಲೇ ವಿಜಯ ಎಂಬ ಯುದ್ಧದ ಕರೆಯಿತ್ತು ಧೀರ ಯುವಕರ ದಳದೊಂದಿಗೆ ರಾತ್ರಿಯಲ್ಲಿ ಅರಸನ ಡೇರೆಯನ್ನು ಮುತ್ತಿದನು; ಅದರೊಳಗಿದ್ದ ಸುಮಾರು ಎರಡು ಸಾವಿರ ಜನರನ್ನು ವಧಿಸಿದನು. ಅವನ ಯೋಧರು ಅತಿ ದೊಡ್ಡ ಆನೆಯನ್ನು ಅದರ ಮಾವಟಿಗನೊಂದಿಗೆ ತಿವಿದು ಕೊಂದುಹಾಕಿದರು. 16ಡೇರೆಯೊಳಗಿದ್ದವರೆಲ್ಲ ಭಯಭೀತಿಯಿಂದ ಗಲಿಬಿಲಿಗೊಂಡರು. ಅಂತಿಮವಾಗಿ ಮುಂಜಾನೆ ಬೆಳಕು ಹರಿಯುವಾಗ ಯೂದನು ತನ್ನ ಜನರೊಡನೆ ಜಯಭೇರಿಯೊಂದಿಗೆ ಅಲ್ಲಿಂದ ಹೊರಟನು. 17ಇದೆಲ್ಲವು ಸರ್ವೇಶ್ವರನ ಅಭಯ ಹಸ್ತದಿಂದಲೆ ಸಾಧ್ಯವಾಯಿತು.

### ಯೆಹೂದ್ಯರೊಂದಿಗೆ ಅಂತಿಯೋಕನ ಒಪ್ಪಂದ

(1 ಮಕ್ಕಬಿ. 6.48–63)

18 ಯೆಹೂದ್ಯರ ಶೌರ್ಯವನ್ನು ಕಂಡ ಅರಸ ಅಂತಿಯೋಕನು ಈಗ ಕುತಂತ್ರಗಳಿಂದ ಅವರ ಸೇನಾಸ್ಥಾನಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನ ಮಾಡಿದನು. 19ಯೆಹೂದ್ಯರ ಬಲವಾದ ಕೋಟೆಯಾಗಿದ್ದ ಬೆತ್‍ಜೂರ್ ದುರ್ಗದ ಮೇಲೆ ದಾಳಿಮಾಡಿದನು; ಅವನು ಹಿಮ್ಮೆಟ್ಟಬೇಕಾಯಿತು. ಆದರೂ ಪುನಃ ದಾಳಿ ಮಾಡಿ ಮತ್ತೆ ಸೋಲನ್ನು ಅನುಭವಿಸಿದನು. 20ಕೋಟೆಯನ್ನು ರಕ್ಷಿಸುತ್ತಿದ್ದ ಜನರಿಗೆ ಯೂದನು ಬೇಕಾದ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿದ್ದನು. 21ಆದರೆ ರೊದೋಕಸ್ ಎಂಬ ಯೆಹೂದ್ಯ ಸೈನಿಕನೊಬ್ಬನು ಶತ್ರುವಿಗೆ ಗುಟ್ಟಾಗಿ ಸಮಾಚಾರವನ್ನು ತಲುಪಿಸಿದ್ದನು. ಅವನನ್ನು ಹುಡುಕಿ, ಹಿಡಿದು ಕೊಲ್ಲಿಸಿದರು. 22ಅರಸನು ಬೆತ್‍ಜೂರಿನ ಕೋಟೆಯವರೊಂದಿಗೆ ಎರಡನೇ ಸಾರಿ ಸಂಧಾನ ಮಾಡಿಕೊಳ್ಳಲು ಮಾತುಕತೆ ನಡೆಸಿದನು. ಸಮಾಧಾನದ ವಾಗ್ದಾನವನ್ನು ವಿನಿಮಯ ಮಾಡಿಕೊಂಡು ಹಿಂದಿರುಗಿದನು. ಆದರೆ ಪುನಃ ಯೂದನನ್ನೂ ಅವನ ಜನರನ್ನೂ ಮುತ್ತಿದಾಗ ಸೋಲನ್ನಪ್ಪಬೇಕಾಯಿತು. 23ಅಷ್ಟರಲ್ಲಿ ತನ್ನ ರಾಜ್ಯದ ಉಸ್ತುವಾರಿಯನ್ನು ನೋಡುತ್ತಿದ್ದ ಫಿಲಿಪ್ಪನೇ ದಂಗೆಯೆದ್ದನೆಂಬ ಸುದ್ದಿ ಅಂತಿಯೋಕನಿಗೆ ಮುಟ್ಟಿತು. ಇದರಿಂದ ಅವನಿಗೆ ದಿಗ್ಭ್ರಮೆಯುಂಟಾಗಿ ಯೆಹೂದ್ಯರನ್ನು ಅವರ ನ್ಯಾಯಬದ್ಧ ಷರತ್ತುಗಳಿಗೆಲ್ಲಾ

ಪ್ರಮಾಣಪೂರ್ವಕವಾಗಿ ಒಪ್ಪಿ ಸಂಧಾನ ಮಾಡಿಕೊಂಡನು. ಇದಾದ ಬಳಿಕ ಬಲಿದಾನ ಮಾಡಿ ಮಹಾ
ದೇವಾಲಯದ ಮೇಲಿನ ಅಭಿಮಾನವನ್ನು ತೋರಿಸಲು ಧಾರಾಳವಾಗಿ ಧನಸಹಾಯ ಮಾಡಿದನು.
24ಯೂದ ಮಕ್ಕಬಿಯನನ್ನು ಪ್ರೀತಿಯಿಂದ ಸ್ವಾಗತಿಸಿದನು. ತದನಂತರ ಪ್ಟೊಲೆಮಾಯ ಮತ್ತು ಗೆರಾರ್
ನಗರಗಳ ನಡುವೆಯಿರುವ ಪ್ರಾಂತ್ಯಕ್ಕೆ ಹೆಗೆಮೋನಿದೆಸ್ ಎಂಬವನನ್ನು ರಾಜ್ಯಪಾಲನನ್ನಾಗಿ ನೇಮಕಮಾಡಿ,
ತಾನೇ ಪ್ಟೊಲೆಮಾಯಕ್ಕೆ ಹೋದನು. 25ಆದರೆ ಅವನು ಯೆಹೂದ್ಯರೊಡನೆ ಮಾಡಿದ ಒಪ್ಪಂದದ ನಿಮಿತ್ತ
ಪ್ಟೊಲೆಮಾಯದವರಿಗೆ ಕೋಪವುಂಟಾಗಿತ್ತು; ಒಪ್ಪಂದವನ್ನು ಮುರಿಯಬೇಕೆಂದು ಒತ್ತಾಯಿಸಿದರು.
26ಆದರೆ ಲೂಸ್ಯನು ಆ ಒಪ್ಪಂದದ ಬಗ್ಗೆ ಬಹಿರಂಗವಾಗಿ ಭಾಷಣಮಾಡಿ, ಜನರಿಗೆ ಮನವರಿಕೆ
ಮಾಡಿಕೊಟ್ಟನು. ಜನರಿಗೆ ಸಮಾಧಾನವಾಗಲು ಲೂಸ್ಯನು ಜನರ ಮನವೊಲಿಸಿಕೊಂಡು, ಅಂತಿಯೋಕಕ್ಕೆ
ಹಿಂದಿರುಗಿದನು. ಹೀಗೆ ಅರಸನಾದ ಅಂತಿಯೋಕನ ದಾಳಿ ಹಿಮ್ಮೆಟ್ಟುವುದರ ಮೂಲಕ
ಮುಕ್ತಾಯಗೊಂಡಿತು.

## ಯೂದನ ವಿರುದ್ಧ ಅಲ್ಕಿಮನ ಒಳಸಂಚು

(1 ಮಕ್ಕಬಿ. 7.1–21)

**14** ಮೂರು ವರ್ಷಗಳ ನಂತರ, ಸೆಲೆಯೂಕನ ಮಗ ದೆಮೆತ್ರಿಯನು ಸೈನ್ಯದೊಂದಿಗೂ
ನೌಕಾಪಡೆಯೊಂದಿಗೂ ತ್ರಿಪೋಲಿ ಬಂದರಿನತ್ತ ಬಂದಿದ್ದಾನೆ ಎಂಬ ಸುದ್ದಿ ಯೂದನಿಗೂ ಅವನ
ಸಂಗಡಿಗರಿಗೂ ತಿಳಿಯಿತು. 2ಇದಲ್ಲದೆ, ಅವನು ಅರಸನಾದ ಅಂತಿಯೋಕನನ್ನೂ ಅವನ ಪೋಷಕ
ಲೂಸ್ಯನನ್ನೂ ಕೊಂದು, ರಾಜ್ಯವನ್ನೂ ವಶಪಡಿಸಿಕೊಂಡಿದ್ದಾನೆಂದು ವರದಿ ಮಾಡಲಾಗಿತ್ತು.
3 ಆಗ, ಹಿಂದೊಮ್ಮೆ ಪ್ರಧಾನಯಾಜಕನಾಗಿದ್ದು ದಂಗೆಯ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಗ್ರೀಕ್
ಪದ್ಧತಿಯನ್ನು ಕೈಗೊಂಡು ಭ್ರಷ್ಟನಾಗಿದ್ದ ಅಲ್ಕಿಮ ಎಂಬಾತನೊಬ್ಬನಿದ್ದನು. 4ಇವನು ಪುನಃ ಬಲಿಪೀಠದ
ಸೇವೆ ಕೈಗೊಂಡು ಸುರಕ್ಷಿತವಾಗಿರಲು ಬೇರಾವ ದಾರಿಯಿಲ್ಲ ಎಂದರಿತು 151ನೇ ವರ್ಷದಲ್ಲಿ ಅರಸ
ದೆಮೆತ್ರಿಯನ ಬಳಿ ಹೋದನು. ಹೋದಾಗ, ಚಿನ್ನದ ಕಿರೀಟ, ತಾಳೆಗರಿ ಹಾಗು ಸಂಪ್ರದಾಯದ ಪ್ರಕಾರ
ಮಹಾದೇವಾಲಯಕ್ಕೆ ಅರ್ಪಿಸಲಾದ ಕೆಲವು ಓಲಿವ್ ಮರದ ರೆಂಬೆಗಳನ್ನು ಅರಸನಿಗೆ ಕೊಡುಗೆಯಾಗಿ
ಕೊಟ್ಟನು. ಆದರೆ ಅರಸನಿಗೆ ಏನನ್ನೂ ಹೇಳಲಿಲ್ಲ. 5ಸ್ವಲ್ಪ ಕಾಲದ ನಂತರ ಅವನ ಹುಚ್ಚು ಯೋಜನೆಯನ್ನು
ಈಡೇರಿಸಿಕೊಳ್ಳಲು ಅವಕಾಶ ದೊರಕಿತು. ದೆಮೆತ್ರಿಯನು ತನ್ನ ಆಲೋಚನಾಸಭೆಗೆ ಅವನನ್ನು ಕರೆದು,
"ಯೆಹೂದ್ಯರ ನಿಲುವೇನು? ಅವರ ಉದ್ದೇಶವೆಂಥದ್ದು?" ಎಂದೆಲ್ಲಾ ಕೇಳಿದನು.
ಅದಕ್ಕೆ ಅಲ್ಕಿಮನು: 6"ಯೂದ ಮಕ್ಕಬಿಯನ ನಾಯಕತ್ವದಲ್ಲಿರುವ ಯೆಹೂದ್ಯರನ್ನು 'ಹಸಿದಿಯರು'
ಎಂದು ಕರೆಯುವುದುಂಟು; ಇವರು ಯುದ್ಧಶೂರರು, ದಂಗೆಯೆಬ್ಬಿಸುವವರು, ರಾಜ್ಯದ ಭದ್ರತೆಗೆ
ಮಾರಕವಾಗಿರುವಂಥವರು, 7ಈ ಕಾರಣದಿಂದಲೇ ವಂಶಾನುಗತವಾಗಿ ನನಗೆ ಲಭಿಸಿದ್ದ ಪ್ರಧಾನ ಯಾಜಕನ
ಪದವಿಯನ್ನು ಕಳೆದುಕೊಂಡಿದ್ದೇನೆ. 8ನಾನಿಲ್ಲಿ ಬಂದಿರುವ ಉದ್ದೇಶ ಎಂದರೆ ಮೊತ್ತಮೊದಲು ಅರಸರ
ಹಿತದೃಷ್ಟಿಯಿಂದ; ಎರಡನೇದಾಗಿ ನನ್ನ ಯೆಹೂದ್ಯ ಬಾಂಧವರ ಮೇಲಿನ ಅಭಿಮಾನದಿಂದ; ಕಾರಣ,
ಯೂದನ ಹಾಗು ಅವನ ಸಂಗಡಿಗರ ಹುಚ್ಚು ನೀತಿಯಿಂದಾಗಿ ಇಡೀ ರಾಷ್ಟ್ರ ದುರವಸ್ಥೆಗೊಳಗಾಗಿದೆ. 9ಈ
ವಿಷಯದ ಬಗ್ಗೆ ಮಹಾಸ್ವಾಮಿಗಳು ವಿಚಾರಿಸಿ ಪರಿಶೀಲಿಸಿದ ನಂತರ, ತಾವು ಸರ್ವರೊಂದಿಗೆ
ಪ್ರಸನ್ನತೆಯಿಂದ ವರ್ತಿಸುವಂತೆಯೇ, ನಮ್ಮ ರಾಷ್ಟ್ರದ ಹಾಗು ಶೋಷಣೆಗೀಡಾದ ನಮ್ಮ ಜನಾಂಗದ ಮೇಲೆ
ಕರುಣೆ ತೋರಬೇಕೆಂದು ವಿನಂತಿಸುತ್ತೇನೆ. 10ಯೂದನು ಜೀವದಿಂದಿರುವವರೆಗೆ, ನಮ್ಮ ರಾಷ್ಟ್ರಕ್ಕೆ ಶಾಂತಿ
ಲಭಿಸುವುದು ಅಸಾಧ್ಯ," ಎಂದನು.

## ಯೂದನನ್ನು ಎದುರಿಸಲು ನಿಕಾನೋರನ ನಿಯೋಗ

11 ಅಲ್ಕಮನ ಭಾಷಣ ಮುಗಿದ ತಕ್ಷಣ, ಅರಸನ ಸಲಹೆಗಾರರು, ಈ ಅವಕಾಶವನ್ನು ಬಳಸಿಕೊಂಡು
ದೆಮೆತ್ರಿಯನು ಯೆಹೂದ್ಯರ ಮೇಲೆ ಉದ್ರೇಕಗೊಳ್ಳುವಂತೆ ಮಾಡಿದರು; ಏಕೆಂದರೆ ಅವರು ಸಹ

ಯೂದನನ್ನು ದ್ವೇಷಿಸುತ್ತಿದ್ದರು. 12ಆದುದರಿಂದ ಅರಸ ದೆಮೆತ್ರಯನು ಕೂಡಲೆ ಆನೆಗಳ ದಳದ ಅಧಿಕಾರಿಯಾಗಿದ್ದ ನಿಕಾನೋರನನ್ನು ಜುದೇಯದ ರಾಜ್ಯಪಾಲನನ್ನಾಗಿ ನೇಮಿಸಿ, ಜುದೇಯಕ್ಕೆ ಕಳುಹಿಸಿದನು. 13ಯೂದನನ್ನು ಕೊಲ್ಲಬೇಕು, ಅವನ ಹಿಂಬಾಲಕರನ್ನು ಚದರಿಸಬೇಕು; ವಿಶ್ವದಲ್ಲೆಲ್ಲ ದೊಡ್ಡದಾಗಿದ್ದ ಮಹಾದೇವಾಲಯಕ್ಕೆ ಅಲ್ಕಿಮನನ್ನು ಪ್ರಧಾನ ಯಾಜಕನನ್ನಾಗಿ ನೇಮಿಸಬೇಕು ಎಂದು ಅವನಿಗೆ ಆಜ್ಞೆ ಮಾಡಿದನು. 14ಜುದೇಯದಿಂದ ಗಡಿಪಾರಾಗಿ ಬಂದಿದ್ದ ಅನ್ಯಧರ್ಮೀಯರು ನಿಕಾನೋರನೊಂದಿಗೆ ಸೇರಲು ಗುಂಪುಗುಂಪಾಗಿ ಬಂದರು. ಯೆಹೂದ್ಯರ ದುರವಸ್ಥೆ ಹಾಗೂ ದೌರ್ಭಾಗ್ಯದಿಂದ ತಮಗೆ ಅನುಕೂಲವಾಗುವುದೆಂಬ ಯೋಚನೆ ಅವರಿಗಿತ್ತು.

15 ನಿಕಾನೋರನು ಬರುತ್ತಿರುವನೆಂದೂ ಅವನಿಗೆ ಅನ್ಯಧರ್ಮೀಯರು ಒಂದಾಗಿ ಬೆಂಬಲ ನೀಡುತ್ತಿರುವರೆಂದೂ ಯೆಹೂದ್ಯರು ತಿಳಿದಾಗ, ತಮ್ಮ ತಲೆಯ ಮೇಲೆ ಬೂದಿಯನ್ನು ಸುರಿದುಕೊಂಡು ಪ್ರಾರ್ಥಿಸಿದರು; ತಮ್ಮ ಜನರನ್ನೇ ಆರಿಸಿಕೊಂಡು, ಶಾಶ್ವತ ಸೊತ್ತಾಗಿ ಮಾಡಿಕೊಂಡು, ಆಪತ್ಕಾಲದಲ್ಲಿ ಬಹಿರಂಗವಾಗಿ ಒತ್ತಾಸೆ ಮಾಡಲು ನಿರಾಕರಿಸದ ದೇವರನ್ನು ಬೇಡಿಕೊಂಡರು. 16ಯೂದನ ಆಜ್ಞೆಯ ಪ್ರಕಾರ ಆ ಜನರು ತಕ್ಷಣವೇ ಅಲ್ಲಿಂದ ಹೊರಟು ಅದಾಸಾ ಎಂಬ ಗ್ರಾಮದ ಬಳಿ ಶತ್ರುವನ್ನು ಎದುರಿಸಲು ಹೋದರು. 17ಯೂದನ ಸಹೋದರ ಸಿಮೋನನು ನಿಕಾನೋರನ ವಿರುದ್ಧ ಹೋರಾಡಿದನು. ಆದರೆ ಶತ್ರುವಿನ ಅನಿರೀಕ್ಷಿತ ದಾಳಿಯ ನಿಮಿತ್ತ ಕ್ರಮೇಣ ಸ್ವಲ್ಪ ಸೋಲುಂಟಾಯಿತು. 18ಯೂದನೂ ಅವನ ಸೈನಿಕರೂ ಎಷ್ಟು ಶೌರ್ಯ ಉಳ್ಳವರು, ತಮ್ಮ ದೇಶಕ್ಕಾಗಿ ಎಷ್ಟು ಸ್ಥೈರ್ಯದಿಂದ ಹೋರಾಡುವಂಥವರು ಎಂಬುದನ್ನು ನಿಕಾನೋರನು ತಿಳಿದಿದ್ದನು. ಸಮಸ್ಯೆಯನ್ನು ಯುದ್ಧರಂಗದಲ್ಲಿ ರಕ್ತಪಾತಮಾಡಿ ಬಗೆಹರಿಸಲು ಇಚ್ಛಿಸಲಿಲ್ಲ. 19ಆದುದರಿಂದ ಸಂಧಾನಮಾಡಿ ವಾಗ್ದಾನಗಳನ್ನು ವಿನಿಮಯಿಸಿಕೊಳ್ಳಲು ಪೊಸಿದೋನ್ಯ, ತಿಯೊದೋತ ಹಾಗೂ ಮತ್ತಾತ್ಯನನ್ನು ಯೆಹೂದ್ಯರ ಬಳಿಗೆ ಕಳುಹಿಸಿದನು.

20 ಒಪ್ಪಂದದ ಅಂಶಗಳನ್ನು ವಿವರವಾಗಿ ಗಮನಿಸಿದ ನಂತರ ನಿಕಾನೋರನು ಅದರ ಬಗ್ಗೆ ತನ್ನ ಜನರಿಗೆ ತಿಳಿಸಿದಾಗ ಅವರೆಲ್ಲರೂ ಏಕ ಮನಸ್ಸಿನಿಂದ ಒಪ್ಪಿಕೊಂಡರು. 21ನಾಯಕರೆಲ್ಲ ಪ್ರತ್ಯೇಕವಾಗಿ ಸೇರಿ ಮಾತುಕತೆ ನಡೆಸಲು ದಿನವನ್ನು ಗೊತ್ತುಮಾಡಿದರು. ಪ್ರತಿಯೊಂದು ಸೈನ್ಯದ ಕಡೆಯಿಂದ ಗೌರವಸೂಚಕ ಸಿಂಹಾಸನಗಳನ್ನು ಆ ಸ್ಥಳಕ್ಕೆ ತಂದಿರಿಸಲಾಯಿತು. 22ಶತ್ರು ಒಂದು ವೇಳೆ ಅನಿರೀಕ್ಷಿತ ದ್ರೋಹವನ್ನು ಎಸಗಿದರೆ ಅದನ್ನು ಎದುರಿಸಲು ಯೂದನು ಸುಸಜ್ಜಿತ ಸೈನಿಕರನ್ನು ಗುಪ್ತವಾದ ಸ್ಥಳಗಳಲ್ಲಿ ಇರಿಸಿದ್ದನು. ಆದರೆ ನಾಯಕರಿಬ್ಬರೂ ಸೌಹಾರ್ದಯುತ ಮಾತುಕತೆ ನಡೆಸಿದರು. 23ನಿಕಾನೋರನು ಜೆರುಸಲೇಮಿನಲ್ಲಿ ಸ್ವಲ್ಪಕಾಲ ತಂಗಿದ್ದನು. ಯೆಹೂದ್ಯರಿಗೆ ಯಾವ ಹಾನಿಯನ್ನೂ ಮಾಡಲಿಲ್ಲ. ಬದಲಿಗೆ ತನ್ನ ಕಡೆಗೆ ಬಂದಿದ್ದ ಜನರನ್ನು ಹಿಂದಕ್ಕೆ ಕಳುಹಿಸಿಬಿಟ್ಟನು. 24ಯೂದನನ್ನು ಜೊತೆಯಲ್ಲಿಯೇ ಇರಿಸಿಕೊಂಡಿದ್ದನು; ಅವನನ್ನು ತನ್ನ ಆಪ್ತ ಸಂಗಡಿಗನನ್ನಾಗಿ ಮಾಡಿಕೊಂಡನು. 25ಯೂದನಿಗೆ ವಿವಾಹ ಮಾಡಿಕೊಳ್ಳಬೇಕೆಂದು ಸಲಹೆಯನ್ನು ಸಹ ಕೊಟ್ಟನು. ಅದರಂತೆಯೇ ಯೂದನು ವಿವಾಹ ಮಾಡಿಕೊಂಡು ಸಮಾಧಾನದಿಂದ ಜೀವನ ನಡೆಸಿದನು.

### ಯೂದನ ಮೇಲೆ ತಿರುಗಿಬಿದ್ದ ನಿಕಾನೋರ

26 ನಿಕಾನೋರನು ಮತ್ತು ಯೂದನು ಸಮಾಧಾನದಿಂದ ಬಾಳುತ್ತಿದ್ದುದನ್ನು ಅಲ್ಕಿಮನು ಕಂಡಾಗ ಒಪ್ಪಂದದ ನಕಲನ್ನು ತೆಗೆದುಕೊಂಡು ಅರಸ ದೆಮೆತ್ರಿಯನ ಬಳಿಗೆ ಹೋದನು. ರಾಜ್ಯದ ವಿರುದ್ಧ ದಂಗೆಯೆದ್ದ ಯೂದನನ್ನು ನಿಕಾನೋರನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದಾನೆಂದೂ ಈ ಕಾರಣ ನಿಕಾನೋರನು ಸರ್ಕಾರಕ್ಕೆ ವಿಧೇಯನಾಗಿಲ್ಲವೆಂದೂ ವರದಿ ಮಾಡಿದನು. 27ಅರಸನು ಉದ್ರೇಕಗೊಂಡು, ನಿಕಾನೋರನು ಮಾಡಿದ ಒಪ್ಪಂದ ತನಗೆ ತೃಪ್ತಿಕರವಾಗಿಲ್ಲವೆಂದೂ ಯೂದಮಕ್ಕಬಿಯನನ್ನು ಕೂಡಲೆ ಬಂಧಿಸಿ ಅಂತಿಯೋಕ್ಯಕ್ಕೆ ಕರೆದೊಯ್ಯಬೇಕೆಂದೂ ಪತ್ರ ಬರೆದನು.

28 ಈ ಸಂದೇಶವು ನಿಕಾನೋರನಿಗೆ ತಲುಪಿದಾಗ ಅವನಿಗೆ ವ್ಯಥೆಯುಂಟಾಗಿ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಂತಾಯಿತು. ಯೂದನು ಯಾವ ತಪ್ಪನ್ನು ಮಾಡದಿದ್ದರೂ ಆ ಒಪ್ಪಂದವನ್ನು ಮುರಿಯಬೇಕಾಗಿ ಬಂತಲ್ಲಾ ಎಮದು ಅಸಮಾಧಾನವಾಯಿತು. 29ಅಂತೂ ಅರಸನ ವಿರುದ್ಧ

ನಡೆಯುವಂತಿರಲಿಲ್ಲ. ಆದ್ದರಿಂದ ಯೂದನನ್ನು ಹಿಡಿಯಲು ಅವಕಾಶವನ್ನು ಎದುರು ನೋಡುತ್ತಿದ್ದನು. 30ನಿಕಾನೋರನ ನಿಲುವು ಗಂಭೀರವಾಗುತ್ತಿದೆ. ಅವನ ವರ್ತನೆ ಕ್ರಮೇಣ ಕಠಿಣವಾಗುತ್ತಿದೆಯೆಂಬುದನ್ನು ಮನಗಂಡ ಯೂದನು ಈ ಬದಲಾವಣೆ ಸದುದ್ದೇಶದಿಂದ ಕೂಡಿದ್ದಲ್ಲವೆಂದು ಅರಿತುಕೊಂಡು ಕೆಲವು ಜನರನ್ನು ಕೂಡಿಸಿಕೊಂಡು ನಿಕಾನೋರನಿಗೆ ಮರೆಯಾಗಿ ಅವಿತುಕೊಂಡನು.

31 ಯೂದನು ತನಗಿಂತಲೂ ಹೆಚ್ಚು ಬುದ್ಧಿಶಾಲಿಯೆಂದು ಅರಿತ ನಿಕಾನೋರನು ಮಹಾಪವಿತ್ರ ದೇವಾಲಯಕ್ಕೆ ಹೋದನು. ಅಲ್ಲಿ ಯಾಜಕರು ಪದ್ಧತಿಯ ಪ್ರಕಾರ ಬಲಿಗಳನ್ನು ಅರ್ಪಿಸುತ್ತಿದ್ದರು; ಯೂದನನ್ನು ಹಿಡಿದುಕೊಡಬೇಕೆಂದು ಅವರಿಗೆ ಆಜ್ಞೆಮಾಡಿದನು. 32ಯಾಜಕರು, "ಅರಸನಿಗೆ ಬೇಕಾದ ಮನುಷ್ಯ ಎಲ್ಲಿದ್ದಾನೋ ನಮಗೆ ಗೊತ್ತಿಲ್ಲ" ಎಂದು ಪ್ರಮಾಣ ಮಾಡಿ ಹೇಳಿದರು. 33ನಿಕಾನೋರನು ಬಲಗೈಯನ್ನು ದೇವಾಲಯದ ಕಡೆ ಚಾಚಿ, "ಯೂದನನ್ನು ಬಂಧಿಸಿ ನನಗೆ ಕೊಡದಿದ್ದರೆ, ದೇವರ ಈ ಆಲಯವನ್ನು ನೆಲಸಮ ಮಾಡುತ್ತೇನೆ; ಬಲಿಪೀಠವನ್ನು ಕೆಡವಿ ಹಾಕುತ್ತೇನೆ; ದಿಯೊನಿಸಿಯಸ್ ದೇವರಿಗೆ ಭವ್ಯ ದೇವಾಲಯವನ್ನು ಕಟ್ಟಿಸುತ್ತೇನೆ ಎಂದು ಗಂಭೀರವಾದ ನುಡಿಗಳಿಂದ ಕಟ್ಟಿಸುತ್ತೇನೆ ಎಂದು ಗಂಭೀರವಾದ ನುಡಿಗಳಿಂದ ಎಚ್ಚರಿಸಿದನು. 34ಇಷ್ಟು ಹೇಳಿ ಅಲ್ಲಿಂದ ಹೊರಟೇ ಹೋದನು. ಯಾಜಕರಾದರೋ ಆಕಾಶದ ಕಡೆ ತಮ್ಮ ಕರಗಳನ್ನೆತ್ತಿ ರಾಷ್ಟ್ರವನ್ನು ನಿರಂತರವಾಗಿ ಕಾಪಾಡುವ ದೇವರಿಗೆ ಪ್ರಾರ್ಥನೆ ಮಾಡುತ್ತಾ, 35"ಸಕಲಮಾನವರ ಸರ್ವೇಶ್ವರಾ, ನಿಮಗೆ ಏನೂ ಬೇಕಾಗಿಲ್ಲವಾದರೂ ನಮ್ಮ ಒಂದಿಗೆ ನೆಲೆಸಲು ದೇವಾಲಯವೊಂದು ಇರಬೇಕೆಂದು ನಿಮ್ಮ ಚಿತ್ತವಾಗಿದೆ. 36ಆದುದರಿಂದ ಸಕಲ ಪರಿಶುದ್ಧತೆಯ ಮೂಲರಾದ ನೀವು ಇತ್ತೀಚೆಗೆ ತಾನೇ, ಶುದ್ಧೀಕರಿಸಲಾದ ಈ ಮಂದಿರವು ಪುನಃ ಮಲಿನವಾಗದಂತೆ ಕಾಪಾಡಿರಿ," ಎಂದರು.

## ರಾಷ್ಟ್ರಕ್ಕಾಗಿ ರಾಜಿಯನ ಪ್ರಾಣಾರ್ಪಣೆ

37 ಜೆರುಸಲೇಮಿನ ಹಿರಿಯರಲ್ಲಿ ರಾಜಿಯ ಎಂಬವನೊಬ್ಬನಿದ್ದನು. ಇವನ ವಿಷಯವಾಗಿ ನಿಕಾನೋರನಿಗೆ ದೂರು ಬಂದಿತು. ಇವನು ತನ್ನ ಜನರಿಗೆ ಹಲವಾರು ವಿಧದಲ್ಲಿ ಸಹಾಯ ಮಾಡಿದ್ದನೆಂದೂ ಈ ಕಾರಣ ಅವನು 'ಯೆಹೂದ್ಯರ ಪಿತ' ಎಂಬ ಬಿರುದನ್ನು ಪಡೆದಿದ್ದನೆಂದೂ ವರದಿ ಆಗಿತ್ತು. 38ಯೆಹೂದ್ಯ ಧರ್ಮದ ಬಗ್ಗೆ ಅವನಿಗಿದ್ದ ಅಪಾರ ಶ್ರದ್ಧೆಯ ನಿಮಿತ್ತ ಹಿಂದೊಮ್ಮೆ ದಂಗೆಯ ಕಾಲದಲ್ಲಿ ಅವನನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿತ್ತು. ಧರ್ಮಕ್ಕಾಗಿ ಅವನು ಪ್ರಾಣತ್ಯಾಗಕ್ಕೂ ಹಿಂಜರಿಯದೆ ಇದ್ದನು. 39ನಿಕಾನೋರನು ಯೆಹೂದ್ಯರ ಮೇಲಿದ್ದ ದ್ವೇಷವನ್ನು ತೋರಿಸುವುದಕ್ಕಾಗಿ, ಆ ರಾಜಿಯನನ್ನು ಬಂಧಿಸಲು 500 ಸೈನಿಕರನ್ನು ಕಳುಹಿಸಿದ್ದನು. 40ಈ ಬಂಧನದಿಂದ ಯೆಹೂದ್ಯರಿಗೆ ಸರಿಯಾದ ದಂಡನೆ ಆಗುವುದೆಂದು ಯೋಚಿಸಿದ್ದನು. 41ಸೈನಿಕರು ರಾಜಿಯನಿದ್ದ ಬುರುಜನ್ನು ವಶಪಡಿಸಿಕೊಳ್ಳಲು ಹೋಗಿ ಸಭಾಂಗಣದ ಬಾಗಿಲನ್ನು ತೆರೆಯಲು ಹೋದಾಗ, ಬಾಗಿಲಿಗೆ ಬೆಂಕಿಯಿಡಬೇಕೆಂದು ನಿಕಾನೋರನ ಆಜ್ಞೆಯಾಗಿತ್ತು. ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದರಿತ ರಾಜಿಯು 42ಪಾಪಿಗಳ ಕೈಯಲ್ಲಿ ಬೀಳುವುದಕ್ಕಿಂತ ಗೌರವದಿಂದ ತಾನೇ ಸಾಯುವುದು ಲೇಸು ಎಂದು ಹೇಳಿ ಕತ್ತಿಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದನು.

43 ಪರಿಸರದ ಒತ್ತಡದ ನಿಮಿತ್ತ, ಕತ್ತಿಯು ಅವನನ್ನು ಸರಿಯಾಗಿ ತಿವಿಯಲಿಲ್ಲ. ಸೈನಿಕರ ಗುಂಪು ದ್ವಾರದೊಳಕ್ಕೆ ನುಗ್ಗುತ್ತಿತ್ತು. ಅವನು ಧೈರ್ಯ ತುಂಬಿಕೊಂಡು ಗೋಡೆಯನ್ನು ಹತ್ತಿ ಜನರ ಗುಂಪಿನ ಮಧ್ಯೆ ನೆಗೆದುಬಿದ್ದನು. 44ಗುಂಪು ಹಿಂದಕ್ಕೆ ಸರಿಯಲು ರಾಜಿಯನು ನೆಲದ ಮೇಲೆ ಬಿದ್ದನು. 45ಇನ್ನೂ ಅವನಲ್ಲಿ ಜೀವ ಇತ್ತು. ಅವನು ಕೋಪದಿಂದ ಕೆರಳಿ ಮೇಲಕ್ಕೆದ್ದನು. ಗಾಯಗಳಿಂದ ರಕ್ತ ಚಿಮ್ಮುತ್ತಿತ್ತು. ಆದರೂ ತಟ್ಟನೆ ಒಂದು ಎತ್ತರವಾದ ಬಂಡೆಯನ್ನು ಹತ್ತಿದನು. 46ದೇಹದಿಂದ ರಕ್ತವು ಸಂಪೂರ್ಣವಾಗಿ ಹರಿದು ಹೋಗಿತ್ತು. ಜೀವವನ್ನೂ ಉಸಿರನ್ನೂ ಕೊಟ್ಟ ಸರ್ವೇಶ್ವರನಿಗೆ, ಪುನಃ ತನಗೆ ಅವನ್ನು ನೀಡಬೇಕೆಂದು ಪ್ರಾರ್ಥನೆ ಮಾಡಿ, ಕೈಯಿಂದ ಹೊಟ್ಟೆಯನ್ನು ಸೀಳಿ ಕರುಳನ್ನು ತೆಗೆದು ಜನರ ಗುಂಪಿನ ಮೇಲೆ ಎಸೆದುಬಿಟ್ಟನು. ಹೀಗೆ ರಾಜಿಯ ಪ್ರಾಣತ್ಯಾಗ ಮಾಡಿದನು.

## ನಿಕಾನೋರನ ಕ್ರೂರ ಯೋಜನೆ

**15** ಯೂದನೂ ಅವನ ಪಡೆಗಳೂ ಸಮಾರಿಯ ಪ್ರಾಂತ್ಯದಲ್ಲಿರುವುದಾಗಿ ನಿಕಾನೋರನಿಗೆ ಗೊತ್ತಾಯಿತು. ಆಗ ಅವನು ಸಬ್ಬತ್ ದಿನದಲ್ಲಿ ತಾನು ಮಾತ್ರ ಸುರಕ್ಷಿತವಾಗಿದ್ದು ಯೆಹೂದ್ಯರ ಮೇಲೆ ದಾಳಿಮಾಡಬೇಕೆಂದು ನಿಶ್ಚಯಿಸಿದನು. 2ತನ್ನ ಪಡೆಸಮೇತ ಬರಬೇಕೆಂದು ಕೆಲವು ಮಂದಿ ಯೆಹೂದ್ಯರಿಗೆ ಆಜ್ಞೆ ಮಾಡಿದಾಗ, ಅವರು: "ಕ್ರೂರ ಹಾಗು ಬರ್ಬರ ರೀತಿಯಲ್ಲಿ ನಮ್ಮವರನ್ನು ನಾಶಮಾಡಬೇಡಿ. ಸಕಲವನ್ನೂ ವೀಕ್ಷಿಸುವ ದೇವರು ಈ ದಿನವನ್ನು ಪ್ರತ್ಯೇಕವಾಗಿ ಪವಿತ್ರೀಕರಿಸಿದ್ದಾರೆ; ಅದಕ್ಕೆ ಮಾನ್ಯತೆ ನೀಡಿ," ಎಂದರು. 3"ಸಬ್ಬತ್ ದಿನವನ್ನು ಆಚರಿಸಬೇಕೆಂದು ಆಜ್ಞೆಮಾಡುವಂಥ ಅರಸ ಪರಲೋಕದಲ್ಲಿ ಇರುವುದುಂಟೆ?" ಎಂದು ಮುಮ್ಮಡಿ ನೀಚನಾದ ಆ ನಿಕಾನೋರನು ಹೇಳಿದನು. 4ಆಗ ಅವರು "ಪರಲೋಕದಲ್ಲಿರುವ ಜೀವಂತ ದೇವರಾದ ಸರ್ವೇಶ್ವರಸ್ವಾಮಿಯೇ ನಾವು ಸಬ್ಬತ್ ದಿನವನ್ನು ಆಚರಿಸಬೇಕೆಂದು ಆಜ್ಞಾಪಿಸಿದ್ದಾರೆ," ಎಂದರು. 5ಅದಕ್ಕವನು, "ನಾನು ಸಹ ಈ ಲೋಕದಲ್ಲಿ ಅರಸನಾಗಿದ್ದೇನೆ: ಶಸ್ತ್ರಗಳನ್ನು ತೆಗೆದುಕೊಂಡು ಅರಸನ ಆಜ್ಞೆಯನ್ನು ಈಡೇರಿಸಬೇಕೆಂದು ನಿಮಗೆ ಕಟ್ಟಪ್ಪಣೆ ಮಾಡುತ್ತೇನೆ," ಎಂದು ಮರುತ್ತರ ಕೊಟ್ಟನು. ಆದರೆ ಅವನ ದುಷ್ಟಯೋಜನೆಯನ್ನು ಕಾರ್ಯಗತಮಾಡಲು ಅವನಿಗೆ ಸಾಧ್ಯವಾಗದೆ ಹೋಯಿತು.

## ಕಾಳಗಕ್ಕೆ ಯೂದನ ಸಿದ್ಧತೆ

6 ನಿಕಾನೋರನು ಅಹಂಕಾರದಿಂದಲೂ ಮದದಿಂದಲೂ ಯೂದನ ಹಾಗು ಅವನ ಸೈನ್ಯದ ಮೇಲೆ ಜಯಗಳಿಸಿ ಸಂಪಾದಿಸಿದ ಕೊಳ್ಳೆಯಿಂದ ಒಂದು ಬಹಿರಂಗ ಸ್ಮಾರಕವನ್ನು ನಿರ್ಮಿಸುವುದಾಗಿ ಕೊಚ್ಚಿಕೊಂಡನು. 7ಆದರೆ ಸರ್ವೇಶ್ವರ ತನಗೆ ಸಹಾಯ ನೀಡುವರೆಂಬ ಪೂರ್ಣನಂಬಿಕೆ ಯೂದ ಮಕ್ಕಬಿಯನಿಗಿತ್ತು. 8 "ಅನ್ಯಧರ್ಮೀಯರ ದಾಳಿಗೆ ಹೆದರಬಾರದು. ಬದಲಿಗೆ, ಪರಲೋಕದಿಂದ ಸಹಾಯ ಹೇಗೆ ಹಿಂದೆ ನಮಗೆ ದೊರಕುತ್ತಿತ್ತು ಎಂಬುದನ್ನು ನೆನೆಸಿಕೊಳ್ಳಬೇಕು; ಎಂತಲೇ ಸರ್ವಶಕ್ತ ಸರ್ವೇಶ್ವರ ನಮಗೆ ದಯಪಾಲಿಸುವ ಜಯವನ್ನು ನಿರೀಕ್ಷಿಸುತ್ತಿರಬೇಕು," ಎಂದು ತನ್ನ ಸೈನಿಕರಿಗೆ ಹೇಳುತ್ತಾ ಅವರಿಗೆ ಉತ್ತೇಜನವಿತ್ತನು. 9ಧರ್ಮಶಾಸ್ತ್ರ ಮತ್ತು ಪ್ರವಾದನಾ ಗ್ರಂಥಗಳ ಉಲ್ಲೇಖಗಳಿಂದ ಅವರ ಮನಸ್ಸಿನಲ್ಲಿ ಧೈರ್ಯ ತುಂಬಿದನು; ಅವರು ಹಿಂದೆ ಮಾಡಿದ ಕಾಳಗಗಳಿಂದ ಗಳಿಸಿದ ಜಯವನ್ನು ಅವರ ನೆನಪಿಗೆ ತಂದು ಅವರು ಹೆಚ್ಚು ಆಸಕ್ತಿ ಉಳ್ಳವರಾಗುವಂತೆ ಮಾಡಿದನು. 10ಹೀಗೆ ತನ್ನ ಜನರಲ್ಲಿ ಧೈರ್ಯತುಂಬಿ, ತನ್ನ ಆಜ್ಞೆಗಳನ್ನು ಬಹಿರಂಗಪಡಿಸುವಾಗ ಅನ್ಯಧರ್ಮೀಯರ ವಿಶ್ವಾಸದ್ರೋಹ ಹಾಗು ಅವರು ಮುರಿದ ಒಪ್ಪಂದಗಳನ್ನು ಕುರಿತು ಸೂಕ್ತ ನಿದರ್ಶನಗಳಿಂದ ವಿವರಿಸಿದನು. 11ಅವನು ತನ್ನ ಜನರನ್ನು ಭರ್ಜಿಗಳ ಶಕ್ತಿಯಿಂದಲ್ಲ, ಆದರೆ ಶೌರ್ಯ ತುಂಬುವಂಥ ಮಾತುಗಳ ಪ್ರೇರಣೆಯಿಂದ, ಅವರಿಗೆ ನಂಬಲರ್ಹ ಎನ್ನಬಹುದಾದ ಈ ದಿವ್ಯದರ್ಶನವನ್ನು ವಿವರಿಸಿ ಅವರ ನೈತಿಕ ಬಲವನ್ನು ಸ್ಥಿರಗೊಳಿಸಿದನು:

12 ಜನತೆಗೆ ಉತ್ಕೃಷ್ಟ ಆದರ್ಶವಾಗಿದ್ದವನೂ ಸರಳ ಸ್ವಭಾವದವನೂ ವಿನಯಶೀಲನೂ ಬಾಲ್ಯದಿಂದ ಸದಾಚಾರವನ್ನು ಕಲಿತು ಅಭ್ಯಾಸ ಮಾಡುತ್ತಾ ಬಂದವನೂ ಪ್ರಬೋಧಕನೂ ಹಾಗು ಒಮ್ಮೆ ಪ್ರಧಾನಯಾಜಕನೂ ಆಗಿದ್ದ ಓನೀಯನು ದರ್ಶನದಲ್ಲಿ ಯೂದನಿಗೆ ಕಾಣಿಸಿಕೊಂಡನು. ಅವನು ತನ್ನ ಕರಗಳನ್ನೆತ್ತಿ ಯೆಹೂದ್ಯ ಕುಲದವರಿಗಾಗಿ ಪ್ರಾರ್ಥನೆ ಮಾಡುತ್ತಿದ್ದನು. 13ಆಗ ವೃದ್ಧನೂ ಘನತೆ ಗೌರವಗಳುಳ್ಳವನೂ ಹಾಗು ಗಂಭೀರ ಆಕಾರವುಳ್ಳವನೂ ಆದ ಮತ್ತೊಬ್ಬ ವ್ಯಕ್ತಿ ಕಾಣಿಸಿಕೊಂಡನು. 14ಆಗ ಓನಿಯನು ಮಾತಾಡಲು ಪ್ರಾರಂಭಿಸಿ, "ತನ್ನ ಯೆಹೂದ್ಯ ಕುಲದವರನ್ನು ಪ್ರೀತಿಸುವಂಥ, ನಮಗೋಸ್ಕರ ಹಾಗು ಪವಿತ್ರ ನಗರವಾದ ಜೆರುಸಲೇಮಿಗೋಸ್ಕರ ಪ್ರಾರ್ಥನೆ ಮಾಡುವಂಥ ದೇವರ ಪ್ರವಾದಿ ಯೆರೆಮೀಯನು ಈತನೆ," ಎಂದನು.

15ಆಗ ಯೆರೆಮೀಯನು ತನ್ನ ಬಲಗೈಯನ್ನು ಚಾಚಿ ಯೂದನಿಗೆ ಒಂದು ಚಿನ್ನದ ಖಡ್ಗವನ್ನು ಕೊಡುತ್ತಾ, 16 "ಈ ಪೂಜ್ಯ ಖಡ್ಗವನ್ನು ದೇವರ ಕೊಡುಗೆಯಂತೆ ಸ್ವೀಕರಿಸು; ಇದರಿಂದ, ಶತ್ರುವನ್ನು ನಾಶಗೊಳಿಸಲು ಶಕ್ತನಾಗುವೆ," ಎಂದನು.

17 ಯೂದನ ಆ ಮಾತುಗಳಲ್ಲಿ ಯುವಕರನ್ನು ಧೀರರನ್ನಾಗಿಸುವ, ಗಂಡಾಳುಗಳನ್ನಾಗಿಸುವ, ಶೌರ್ಯವುಳ್ಳವರನ್ನಾಗಿಸುವ ಶಕ್ತಿಯಿತ್ತು. ಅವನ ಈ ಉದಾತ್ತ ಮಾತುಗಳಿಂದ ಅವರು ಪ್ರಭಾವಿತರಾದರು. ಅವರ ನಗರ, ಅವರ ಧರ್ಮ, ಅವರ ದೇವಾಲಯಕ್ಕೆ ಅಪಾಯವಿರುವ ಸಂದರ್ಭದಲ್ಲಿ ಕೇವಲ ಸೇನಾದಳಗಳನ್ನೇ ನೆಮ್ಮಿಕೊಂಡಿರದೆ ಧೈರ್ಯದಿಂದ ಶತ್ರುವಿನ ಮೇಲೆ ದಾಳಿಮಾಡಿ ಮುಷ್ಟಿಕಾಳಗದಿಂದಲೂ ಸಮಸ್ಯೆಯನ್ನು ಬಗೆಹರಿಸಲು ನಿರ್ಧರಿಸಿದರು. 18ಮಡದಿಮಕ್ಕಳ, ಸಹೋದರ ಸಹೋದರಿಯರ, ಬಂಧುಮಿತ್ರರ ಬಗ್ಗೆ ಅವರಿಗೆ ಅಷ್ಟು ಚಿಂತೆಯಿರಲಿಲ್ಲ. ಮಹಾಪವಿತ್ರ ದೇವಾಲಯದ ಸುರಕ್ಷತೆಯ ಬಗ್ಗೆ ಅವರಿಗೆ ಅತ್ಯಂತ ಅಭಿಮಾನವಿತ್ತು. 19ನಾಡಿನ ಬಯಲಿನಲ್ಲಿ ನಡೆಯಲಿದ್ದ ಕಾಳಗದ ಪರಿಣಾಮ ಏನಾಗಬಹುದೋ ಎಂಬ ಯೋಚನೆ ಜೆರುಸಲೇಮಿನಲ್ಲೇ ತಂಗಿದ್ದ ಯೆಹೂದ್ಯರ ಮನಸ್ಸನ್ನು ಕಾಡುತ್ತಿತ್ತು.

**ನಿಕಾನೋರನ ಸೋಲು ಮತ್ತು ಮರಣ**

20 ಪ್ರತಿಯೊಬ್ಬನೂ ಯುದ್ಧದ ಆಗುಹೋಗುಗಳನ್ನೇ ಆಸಕ್ತಿಯಿಂದ ಎದುರು ನೋಡುತ್ತಿದ್ದನು. ಯುದ್ಧಸನ್ನದ್ಧವಾಗಿದ್ದ ಶತ್ರುಸೈನ್ಯ ಹತ್ತಿರವಾಗಿತ್ತು. ಯುದ್ಧತಂತ್ರಕ್ಕೆ ಅನುಕೂಲವಾದ ಸ್ಥಳಗಳಲ್ಲಿ ಆನೆಗಳು, ಮಗ್ಗುಲಲ್ಲಿ ಸುಸಜ್ಜಿತ ಕುದುರೆ ಸವಾರರು ನಿಂತಿದ್ದರು. 21ಯೂದ ಮಕ್ಕಬಿಯನು ತನ್ನ ಎದುರಿಗಿದ್ದ ಪಡೆಯನ್ನು, ವಿವಿಧ ಆಯುಧಗಳ ಸರಬರಾಜನ್ನು, ಆನೆಗಳ ವಿಧ್ವಂಸಕ ಶಕ್ತಿಯನ್ನು ವೀಕ್ಷಿಸಿದನು. ಸರ್ವೇಶ್ವರಸ್ವಾಮಿ ಜಯವನ್ನು ದಯಪಾಲಿಸುವುದು ಆಯುಧಗಳ ಆಧಾರದ ಮೇಲಲ್ಲ; ಬದಲಿಗೆ ಅವರೇ ನಿರ್ಣಯಿಸುವ ಪ್ರಕಾರ; ಯಾರು ಅದಕ್ಕೆ ಪಾತ್ರರೋ ಅಂಥವರಿಗೆ ಮಾತ್ರ ಜಯ ಲಭ್ಯ ಎಂಬುದನ್ನು ಯೂದನು ಚೆನ್ನಾಗಿ ಅರಿತಿದ್ದನು. ಆದುದರಿಂದ ಅದ್ಭುತಕಾರ್ಯಗಳನ್ನು ನಡೆಸುವಂಥ ದೇವರಿಗೆ ಸ್ವರ್ಗದತ್ತ ಕರಗಳನ್ನೆತ್ತಿ ಹೀಗೆಂದು ಪ್ರಾರ್ಥಿಸಿದನು: 22 "ಸರ್ವೇಶ್ವರಾ, ಹಿಜ್ಕೀಯನು ಜುದೇಯನಾಡಿನ ಅರಸನಾಗಿದ್ದಾಗ ನೀವು ನಿಮ್ಮ ದೂತನನ್ನು ಕಳುಹಿಸಿದಿರಿ. ಆ ದೂತನು ಸೆನ್ನೆರೀಬನ 1,85,000 ಜನರನ್ನು ನಾಶಪಡಿಸಿದನಲ್ಲವೆ? 23ಈಗಲೂ ಪರಲೋಕದೊಡೆಯಾ, ನಮ್ಮ ಶತ್ರುಗಳಲ್ಲಿ ಭಯಭ್ರಾಂತಿ ಹುಟ್ಟಿಸಲು ನಿಮ್ಮ ಸನ್ನುತ ದೂತನನ್ನು ಕಳುಹಿಸಿರಿ. 24ನಿಮ್ಮ ಪವಿತ್ರ ಪ್ರಜೆಗಳಿಗೆ ಎದುರಾಗಿ ಬಂದಿರುವ ಈ ದೇವದೂಷಕರನ್ನು ನಿಮ್ಮ ಬಲಾಢ್ಯ ಹಸ್ತದಿಂದ ಹೊಡೆದುಹಾಕಿರಿ." ಈ ಮಾತುಗಳಿಂದ ಯೂದನು ತನ್ನ ಪ್ರಾರ್ಥನೆಯನ್ನು ಮುಗಿಸಿದನು.

25 ಯುದ್ಧಕಹಳೆಗಳ ಹಾಗು ಗೀತೆಗಳ ಧ್ವನಿಯೊಡನೆ ನಿಕಾನೋರನೂ ಅವನ ಸೈನಿಕರೂ ಮುಂದೆ ಬಂದರು. 26ಆದರೆ ಯೂದನು ಮತ್ತು ಅವನ ಜನರು ದೇವತಾಪ್ರಾರ್ಥನೆ ಹಾಗು ಶ್ಲೋಕಗಳಿಂದ ಶತ್ರುವನ್ನು ಎದುರಿಸಿದರು. 27ಕರಗಳಲ್ಲಿ ಯುದ್ಧಾಯುಧಗಳಿಂದ ಹೋರಾಡುತ್ತಾ ಮನದಲ್ಲಿ ದೇವರಿಗೆ ಪ್ರಾರ್ಥನೆ ಮಾಡುತ್ತಾ 35,000ಕ್ಕೂ ಹೆಚ್ಚು ಶತ್ರುಸೈನಿಕರನ್ನು ಸದೆಬಡಿದರು; ದೇವರ ಪ್ರಸನ್ನತೆಯ ಪ್ರಭಾವದಿಂದ ಬಹು ಸಂತೋಷಪಟ್ಟರು. 28ಯುದ್ಧ ಮುಗಿದು, ಅವರೆಲ್ಲರೂ ವಿಜಯೋತ್ಸವ ಮಾಡಲು ಹಿಂದಿರುಗುತ್ತಿದ್ದರು. ಆಗ ಸಂಪೂರ್ಣ ಆಯುಧಪಾಣಿಯಾಗಿದ್ದ ನಿಕಾನೋರನು ಕೆಳಗೆ ಸತ್ತುಬಿದ್ದಿರುವುದನ್ನು ಗುರುತು ಹಚ್ಚಿದರು. 29ತಕ್ಷಣ ಜಯಕಾರ, ಆರ್ಭಟದಿಂದ ತಮ್ಮ ಪೂರ್ವಜರ ಭಾಷೆಯಲ್ಲಿ ಮಹೋನ್ನತ ಸರ್ವೇಶ್ವರನನ್ನು ಸ್ತುತಿಸಿದರು.

30 ಪೂರ್ಣದೇಹದಿಂದಲೂ ಪೂರ್ಣಪ್ರಾಣದಿಂದಲೂ ತನ್ನ ಯೆಹೂದ್ಯಜನರಿಗಾಗಿ ಹೋರಾಡಿದ, ಯೌವನದಿಂದಲೂ ದೇಶಾಭಿಮಾನವನ್ನು ಕಳೆದುಕೊಳ್ಳದ, ಯೂದಮಕ್ಕಬಿಯನು ನಿಕಾನೋರನ ತಲೆಯನ್ನೂ ಬಲಗೈಯನ್ನೂ ಕಡಿದು ಜೆರುಸಲೇಮಿಗೆ ಕೊಂಡೊಯ್ಯಬೇಕೆಂದು ಆಜ್ಞಾಪಿಸಿದನು. 31ನಗರಕ್ಕೆ ಬಂದು ಸೇರಿದ ನಂತರ ಎಲ್ಲಾ ಜನರನ್ನು ಒಂದುಗೂಡಿಸಿದನು. ಯಾಜಕನೂ ಬಲಿಪೀಠದ ಮುಂದೆ ನಿಲ್ಲುವಂತೆ ಮಾಡಿದನು. ಕೋಟೆಯಲ್ಲಿದ್ದವರನ್ನು ಕರೆಸಿದನು. 32ಆಗ ನೀಚ ನಿಕಾನೋರನ ತಲೆಯನ್ನು ಅವರಿಗೆ ತೋರಿಸಿದನು. ಸರ್ವಶಕ್ತದೇವರ ಪವಿತ್ರಾಲಯದ ಕಡೆ ಜಂಬದಿಂದ ಕೈಚಾಚಿದ ಆ ವಿಶ್ವಾಸಹೀನ ಮನುಷ್ಯನ ಕೈಯನ್ನೂ ತೋರಿಸಿದನು. 33ಬಳಿಕ ಆ ವಿಶ್ವಾಸಹೀನ ನಿಕಾನೋರನ ನಾಲಗೆಯನ್ನು ಕತ್ತರಿಸಿದನು; ಅದನ್ನು ಚೂರುಚೂರಾಗಿಸಿ ಹಕ್ಕಿಗಳಿಗೆ ತಿನ್ನುವುದಕ್ಕೆ ಹಾಕಲಾಗುವುದು ಎಂದನು; ನಿಕಾನೋರನ ಹುಚ್ಚುತನದ ಪ್ರತಿಫಲವೆಂಬಂತೆ ತಲೆಯನ್ನು ದೇವಾಲಯದ ಎದುರಿಗೆ ನೇತು

ಹಾಕುವುದಕ್ಕೂ ಆಜ್ಞೆ ಮಾಡಿದನು. 34ಅಲ್ಲಿದ್ದವರೆಲ್ಲ, "ತಮ್ಮ ಪವಿತ್ರಾಲಯವನ್ನು ಅಪವಿತ್ರವಾಗದಂತೆ ಕಾಪಾಡಿದ ದೇವರಿಗೆ ಸ್ತುತಿಯಾಗಲಿ," ಎಂದು ಸ್ವರ್ಗದತ್ತ ಸ್ವರವೆತ್ತಿ ಸರ್ವೇಶ್ವರನಿಗೆ ಸ್ತುತಿಯನ್ನು ಸಲ್ಲಿಸಿದರು. 35ಸರ್ವೇಶ್ವರಸ್ವಾಮಿ ನೀಡುವ ಸಹಾಯಕ್ಕೆ ಅದೊಂದು ಸ್ಪಷ್ಟ ಹಾಗೂ ಬಹಿರಂಗವಾದ ದೃಷ್ಟಾಂತವಾಗಿರಲೆಂದು ಯೂದನು ನಿಕಾನೋರನ ತಲೆಯನ್ನು ಕೋಟೆಯ ಗೋಡೆಯ ಮೇಲೆ ನೇತು ಹಾಕಿದನು. 36ಪ್ರತಿವರ್ಷ ಹನ್ನೆರಡನೇ ತಿಂಗಳಿನ ಹದಿಮೂರನೇ ಆ ದಿನವನ್ನು ಅಂದರೆ, ಮೊರ್ದೆಕೈಯ ದಿನದ ಹಿಂದಿನ ದಿನವನ್ನು (ಅರಮಾಯಿಕ್ ಭಾಷೆಯಲ್ಲಿ ಆ ತಿಂಗಳನ್ನು 'ಆದಾರ್' ಎಂದು ಕರೆಯಲಾಗುತ್ತಿತ್ತು) ತಪ್ಪದೆ ಆಚರಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಯಿತು.

**ಸಮಾಪ್ತಿ**

37 ನಿಕಾನೋರನ ವೃತ್ತಾಂತ ಹೀಗೆ ಮುಕ್ತಾಯಗೊಳ್ಳುತ್ತದೆ. ಅಂದಿನಿಂದ ಜೆರುಸಲೇಮ್ ನಗರವು ಹಿಬ್ರಿಯರ ಸ್ವಾಧೀನದಲ್ಲೇ ಇದೆಯಾದ್ದರಿಂದ ನನ್ನ ಕೃತಿಯನ್ನು ಸಹ ಇಲ್ಲಿಗೆ ಇತಿಗೊಳಿಸುತ್ತೇನೆ. ಪ್ರಸಕ್ತ ವಿಷಯವನ್ನು ಸ್ಪಷ್ಟವಾಗಿಯೂ ಖಚಿತವಾಗಿಯೂ ವಿವರಿಸಿದ್ದರೆ, ನನಗೆ ಅಷ್ಟೇ ಸಾಕು. ತೀರಾ ಕನಿಷ್ಠವಾಗಿಯೋ ಮಧ್ಯಮವಾಗಿಯೋ ಇದ್ದರೆ, ನನ್ನಿಂದ ಸಾಧ್ಯವಾದದ್ದು ಅಷ್ಟೇ ಎಂದು ತಿಳಿಯಿರಿ. 38ಬರೇ ದ್ರಾಕ್ಷಾರಸವನ್ನಾಗಲೀ ಬರೇ ನೀರನ್ನಾಗಲೀ ಕುಡಿಯುವುದು ಸುಖಕರವಲ್ಲ; ಆದರೆ ನೀರನ್ನು ಬೆರೆಯಿಸಿದ ದ್ರಾಕ್ಷಾರಸ ರುಚಿಕರವಾಗಿಯೂ ಹಿತಕರವಾಗಿಯೂ ಇರುತ್ತದೆ. ಅದರಂತೆಯೇ, ಕಥನ ಹಾಗು ಶೈಲಿ ಓದುಗರಿಗೆ ಸಂತೋಷವನ್ನು ನೀಡುತ್ತದೆ. ಇತಿ ಸಮಾಪ್ತಿ.